
ಸಂಪುಟ 22 ಸಂಚಿಕೆ 22-23
ಜೂನ್ 4, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಪೆಕ್ಷ್ಯಾರಂಗ

ಪಂಚಾಯತಿ ಚುನಾವಣೆಗಳು





ಶ್ರೀಲಂಕಾ: ಬಿಜೆಪಿ ಕೂಟದ ಹೊಣಗೇಡಿತನ



ಸಿನಿಮಾಗಳೆಲ್ಲಾ ಪ್ಲಾಪ್ ಪ್ಲಾಪ್!

ಬೆಳುವಳಿಯಲ್ಲಿ ಪಾಲ್ಗೊಳ್ಳುವವರ ಸಂಖ್ಯೆ ಏರತೊಡಗಿತು. ರೈಟರ್ಸ್ ಬಿಲ್ಡಿಂಗ್‌ಗೆ ಒಂದು ಮೆರವಣಿಗೆ ಏರ್ಪಡಿಸಿದೆವು. ಆಗ 1,100 ಜನರು ಬಂಧನಕ್ಕೊಳಗಾದರು. ನಿರಂಜನಸೇನ್, ಲೀಲಾರಾಯ್, ಶೈಲಜಾದೇವಿ ಮತ್ತು ನಾನು ಬಂಧನಕ್ಕೆ ಒಳಗಾದೆವು. ನಮ್ಮ ಹಿಂದೆ ರಣೇನ್ ಸೇನ್, ಬಿಜಯ್ ಮೋದಕ್, ಗೋಪಾಲ್ ಬಸು, ಸೌನಕ್ ಲಹರಿ, ಸುಕುಮಾರ್ ಸೇನ್‌ಗುಪ್ತ, ಸಮರ್ ಮುಖರ್ಜಿ, ರಬಿನ್ ಮುಖರ್ಜಿ ಮತ್ತು ಜ್ಯೋತಿದೇವಿ ಬಂಧಿತರಾದರು. ಅಕ್ಟೋಬರ್ ಒಂದರವರೆಗೆ ನಮ್ಮನ್ನು ನ್ಯಾಯಾಲಯ ಕಸ್ಟಡಿಗೆ ಒಪ್ಪಿಸಲಾಯಿತು.

ಆಹಾರ ಬಿಕ್ಕಟ್ಟಿನ ಕಬಂಧ ಬಾಹು ಇತರ ರಾಜ್ಯಗಳಿಗೂ ಹಬ್ಬಿತು. ನಮ್ಮ ಪಕ್ಷದ ಕೇಂದ್ರ ಸಮಿತಿ ಸಭೆ ಅಕ್ಟೋಬರ್ 7 ರಿಂದ 14 ರವರೆಗೆ ನಡೆಯಿತು. ಅದು ಒಂದು ನಿರ್ಣಯವನ್ನು ಅಂಗೀಕರಿಸಿತು.

"ಇಡೀ ಪಶ್ಚಿಮ ಬಂಗಾಳ, ಬಿಹಾರ, ಪೂರ್ವ ಉತ್ತರ ಪ್ರದೇಶ, ಮಹಾರಾಷ್ಟ್ರ ಮತ್ತು ರಾಜಸ್ಥಾನದ ಕೆಲವು ಭಾಗಗಳಲ್ಲಿ ಬರಗಾಲ ತಾಂಡವವಾಡುತ್ತಿದೆ. ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳದಿಂದ ಹಸಿವಿನ ಸಾವಿನ ಪ್ರಕರಣಗಳೂ ವರದಿಯಾಗಿವೆ. ಬಡರೈತರು ಮತ್ತು ಕಾರ್ಮಿಕರು ಹೆಚ್ಚು ತೊಂದರೆಗೆ ಒಳಗಾಗಿದ್ದಾರೆ. ಕೇಂದ್ರ ಮತ್ತು ಈ ರಾಜ್ಯಗಳಲ್ಲಿ ಕಾಂಗ್ರೆಸ್ ಆಡಳಿತ ಮತ್ತು ಅದರ ನೀತಿಗಳ ನೇರ ಪರಿಣಾಮ ಇದಾಗಿದೆ ಎಂಬುದು ಕೇಂದ್ರ ಸಮಿತಿಯ ಅಭಿಪ್ರಾಯ" ಎಂದು ನಿರ್ಣಯದಲ್ಲಿ ಹೇಳಲಾಯಿತು. ಬಿಕ್ಕಟ್ಟನ್ನು ಎದುರಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ರೂಪಿಸಲಾಯಿತು.

ಆದರೆ ಕೇಂದ್ರ ಮತ್ತು ರಾಜ್ಯಗಳಲ್ಲಿನ ಕಾಂಗ್ರೆಸ್ ಸರಕಾರಗಳು ನಿರ್ಲಿಪ್ತವಾಗಿಯೇ ಉಳಿದವು. ಕಮ್ಯುನಿಸ್ಟ್ ನೇತೃತ್ವದ ಕೇರಳ ಸರಕಾರ ಮಾತ್ರವೇ ಬರಗಾಲದಂಥ ಪರಿಸ್ಥಿತಿಯನ್ನು ಎದುರಿಸಲು ಅನೇಕ ಕ್ರಮಗಳನ್ನು ಕೈಗೊಂಡಿತು.

500 ಕುಟುಂಬಗಳಿಗೆ ಒಂದು ಪಡಿತರ ಅಂಗಡಿ, ಗ್ರಾಮಗಳಲ್ಲಿ ಸರ್ವಪಕ್ಷ ಆಹಾರ ಸಮಿತಿಗಳು ಮತ್ತು ಕುಟುಂಬ ಗುರುತು ಚೀಟಿಯ ನೀಡಿಕೆ ಇವು ಅವುಗಳಲ್ಲಿ ಕೆಲವು ಕ್ರಮಗಳಾಗಿದ್ದವು. ರಾಜ್ಯ ಅತಿ ಹೆಚ್ಚು ಬಿಕ್ಕಟ್ಟಿಗೆ ಒಳಗಾಗಿದ್ದ ಪ್ರದೇಶಗಳಲ್ಲಿ ಒಂದಾಗಿದ್ದರೂ ಕೇರಳದ ಜನರು ನೆಮ್ಮದಿಯ ನಿಟ್ಟುಸಿರು ಬಿಟ್ಟರು. ಬೆಲೆಗಳನ್ನು ಕೂಡ ನಿಯಂತ್ರಿಸಲಾಯಿತು. ಈ ಸಾಧನೆಗೆ ಪಕ್ಷದ ಕೇಂದ್ರ ಸಮಿತಿ ಕೇರಳ ಸರಕಾರವನ್ನು ಅಭಿನಂದಿಸಿತು.

ತಲೆಯೆತ್ತಿದ ನಿರಾಶ್ರಿತರ ಸಮಸ್ಯೆ

ಪಶ್ಚಿಮ ಬಂಗಾಳದಲ್ಲಿ ನಿರಾಶ್ರಿತರ ಸಮಸ್ಯೆ ತಲೆಯೆತ್ತತೊಡಗಿತು. ಕಾಂಗ್ರೆಸ್ ಮುಖಂಡರು ಅಧಿಕಾರಕ್ಕೆ ಬರುವ ಆತುರದಲ್ಲಿ ವಿಭಜನೆಗೆ ಒಪ್ಪಿದರು ಹಾಗೂ ಈ ಕಡೆ ಬರುವ ಪೂರ್ವಬಂಗಾಳದ ಎಲ್ಲ ಅಲ್ಪಸಂಖ್ಯಾತರಿಗೆ ರಾಜ್ಯದಲ್ಲಿ ಮರುವಸತಿ ಕಲ್ಪಿಸಲಾಗುತ್ತದೆ ಎಂದು ಆಶ್ವಾಸನೆ ನೀಡಿದರು. ಆದರೆ ಯಾವ ಆಶ್ವಾಸನೆಯೂ ಈಡೇರಲಿಲ್ಲ. 40 ಲಕ್ಷದಷ್ಟು ನಿರಾಶ್ರಿತರಿಗೆ ಪುನರ್‌ವಸತಿ ಕಲ್ಪಿಸುವುದು ಅಷ್ಟು ಸುಲಭದ ಮಾತಲ್ಲ. ತಮ್ಮ ಮನೆ ಮಠಗಳನ್ನು ಕಳೆದುಕೊಳ್ಳುವ ಒತ್ತಡಕ್ಕೆ ಒಳಗಾಗಿ ಗಡಿಯಾಚೆಯಿಂದ ಬಂದ ಜನರ ಬಗ್ಗೆ ಕಾಂಗ್ರೆಸ್ ಮುಖಂಡರು ಚಿಂತಿಸಲೂ ಇಲ್ಲ ಎನ್ನುವುದು ವಿಷಾದದ ಸಂಗತಿ.


ರಾಜ್ಯದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಮುಖ್ಯವಾಹಿನಿಗೆ ಈ ಜನರನ್ನು ತಂದರೆ ರಾಜ್ಯಕ್ಕೆ ಅವರೊಂದು ಆಸ್ತಿಯಾಗುತ್ತಾರೆ ಎಂಬ ಯೋಚನೆ ಯಾರ ತಲೆಗೂ ಸುಳಿಯಲಿಲ್ಲ.

ಕಾಂಗ್ರೆಸ್ ಸರಕಾರದ ಸ್ವಭಾವವೇ ಜನವಿರೋಧಿ ಆಗಿದ್ದರಿಂದ ಇದೇನೂ ಅಸ್ವಾಭಾವಿಕವಾಗಿರಲಿಲ್ಲ. ಆದ್ದರಿಂದ ಅದು ನಿರಾಶ್ರಿತರನ್ನು ಒಂದು ಆಸ್ತಿ ಎಂದು ಪರಿಗಣಿಸಲೇ ಇಲ್ಲ; ಬದಲಿಗೆ ಅವರನ್ನು ಭಿಕ್ಷುಕರೆಂದು ಪರಿಭಾವಿಸಿತು. ಹೀಗಾಗಿ ನಿರಾಶ್ರಿತರ ಕುರಿತ ನೀತಿ ಸರಳವಾಗಿತ್ತು. ಸ್ವಲ್ಪ ಭಿಕ್ಷೆ ನೀಡುವುದೇ ಭಿಕ್ಷುಕರನ್ನು ನಿಭಾಯಿಸುವ ಏಕೈಕ ಮಾರ್ಗ!

ಅದಾಗಲೇ ಬಂದಿದ್ದ 29 ಲಕ್ಷ ನಿರಾಶ್ರಿತರಿಗೆ ಕಾಂಗ್ರೆಸ್ ಸರಕಾರ ಯಾವುದೇ ನೆರವಿನ ಹಸ್ತ ಚಾಚಲಿಲ್ಲ. ಅವರಲ್ಲಿ ಬಹುತೇಕ ಅರ್ಧದಷ್ಟು ಜನರು ನಿಕೃಷ್ಟ ಜೀವನ ನಡೆಸಿದರು ಅಥವಾ ಹಸಿವಿನಿಂದ ಸತ್ತರು. ಉಳಿದವರ ಪೈಕಿ ಎರಡು ಲಕ್ಷ ಜನರಿಗೆ ಸರಕಾರಿ ಶಿಬಿರಗಳಲ್ಲಿ ಆಶ್ರಯ ನೀಡಲಾಯಿತು. ಅಲ್ಲಿ ಉತ್ತಮ ನಿರ್ವಹಣೆ ಮತ್ತು ಮೂಲಭೂತ ಸೌಕರ್ಯಗಳೇ ಇರಲಿಲ್ಲ.

ಬೆಲೆ ಏಂಕೆಯ ವಿರುದ್ಧ ದೊಡ್ಡ ಹೋರಾಟದ ಅಲೆ ಎದ್ದಿತು. ಬಂಗ್ಲಾ ದೇಶದಿಂದ (ಅಂದಿನ ಪೂರ್ವ ಪಾಕಿಸ್ತಾನ) ಬಂದ ನಿರಾಶ್ರಿತರ ಪುನರ್ವಸತಿ ಒಂದು ದೊಡ್ಡ ಸಮಸ್ಯೆಯಾಯಿತು. ಕಾಂಗ್ರೆಸ್ ಸರ್ಕಾರ ಅಮಾನವೀಯವಾಗಿ ನಡೆದುಕೊಂಡಿತು ಎಂಬುದನ್ನು ಆ ಸಮಯದಲ್ಲಿ ನಡೆದ ಅಂಚೆ-ತಂತಿ ನೌಕರರ ಮುಷ್ಕರವನ್ನು ಮುರಿಯಲು ಕೇಂದ್ರ ಸರ್ಕಾರ ನಡೆಸಿದ ಪ್ರಯತ್ನಗಳ ವಿರುದ್ಧ ನಡೆದ ದೃಢ ಹೋರಾಟವನ್ನು ಇಲ್ಲಿ ಜ್ಯೋತಿಬಸು ವರ್ಣಿಸಿದ್ದಾರೆ.

ಯಶಸ್ವಿ ಹೋರಾಟಗಳು



ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)

ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರಾವಾಹಿ: 36

ಈ ಜನರು ಈ ಶಿಬಿರಗಳಲ್ಲಿ ತೀರಾ ಬಡತನದಿಂದ ಜೀವನ ಸಾಗಿಸಿದರು. ಇನ್ನೊಂದೆಡೆ ಸರಕಾರದಿಂದ ಒಂದೇ ಒಂದು ಕರೆನ್ಸಿ ನೋಟನ್ನು ಪಡೆಯದ ಲಕ್ಷಾಂತರ ನಿರಾಶ್ರಿತರು ಭೂಮಾಲಕ ಲಾಬಿಯ ವಿರುದ್ಧ ಭಾರಿ ಚಳುವಳಿ ನಡೆಸಿ ತಮ್ಮದೇ ಸ್ವಂತ ಕಾಲನಿಗಳನ್ನು ರಚಿಸಿಕೊಂಡರು. ಅಷ್ಟಾದರೂ ಈ ವಸತಿ ನಿವೇಶನಗಳ ಹಕ್ಕುಗಳನ್ನು ನೀಡಲು ಕಾಂಗ್ರೆಸ್ ಸರಕಾರ ಒಪ್ಪಲಿಲ್ಲ.

ಬಿಕ್ಕಟ್ಟು ಉಲ್ಬಣ

ಈ ನಿರ್ವಸಿತ ಜನರನ್ನು ರಾಜ್ಯದಿಂದ ಹೊರದಬ್ಬದೆ ಬೇರೆ ದಾರಿಯಿಲ್ಲ ಎಂದು ಕಾಂಗ್ರೆಸ್ ಸರ್ಕಾರ ಹೇಳುವುದರೊಂದಿಗೆ ಅವರ ಸಮಸ್ಯೆ ಉಲ್ಬಣಗೊಂಡಿತು. ಯಾವುದೇ ಸಮೀಕ್ಷೆ ನಡೆಸಲಿಲ್ಲ, ಯಾವುದೇ ಯೋಜನಾ ವ್ಯವಸ್ಥೆಯನ್ನು ಅಳವಡಿಸಲಿಲ್ಲ. ಹಠಾತ್ತನೆ ಕೈಗೊಂಡ ನಿರ್ಧಾರಕ್ಕೆ ನಿರಾಶ್ರಿತರು ಇದ್ದಕ್ಕಿದ್ದಂತೆ ಬಲಿಪಶುಗಳಾದರು. ಈ ನಿರ್ಧಾರದ ಬಗ್ಗೆ ಪ್ರತಿಪಕ್ಷವನ್ನು ಕತ್ತಲಲ್ಲಿಡಲಾಯಿತು. ನಿರಾಶ್ರಿತರ ಪುನರ್‌ವಸತಿ ಕಾರ್ಯಕ್ರಮದ ಅನುಷ್ಠಾನಕ್ಕೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬುದನ್ನು ನಮಗೆ ತಿಳಿಸಲಿಲ್ಲ. ಸರಕಾರ ಸತ್ಯಾಂಶಗಳನ್ನು ಬಹಿರಂಗಪಡಿಸಬೇಕು ಎಂದು ನಾವು ಒತ್ತಾಯಿಸಿದೆವು.

ಆದರೆ ಸರಕಾರ ತನ್ನ ನಿರ್ಲಕ್ಷ್ಯವನ್ನು ಮುಂದುವರಿಸಿತು. ಪಶ್ಚಿಮ ಬಂಗಾಳದಲ್ಲಿ ನಿರಾಶ್ರಿತರ ಪುನರ್‌ವಸತಿಗಾಗಿ ಕೇಂದ್ರ ಸರಕಾರ ಆಗ ದಂಡಕಾರಣ್ಯ ಯೋಜನೆಯನ್ನು ರೂಪಿಸುತ್ತಿತ್ತು. ಒರಿಸ್ಸಾ ಮಧ್ಯಪ್ರದೇಶ ಮತ್ತು ಆಂಧ್ರ ಪ್ರದೇಶಗಳ 81 ಚದುರ ಮೈಲಿ ವಿಸ್ತೀರ್ಣವನ್ನೊಳಗೊಂಡ ಪ್ರದೇಶವೇ ದಂಡಕಾರಣ್ಯ. ಕೆಲವು ಹಾಸ್ಯಾಸ್ಪದ ಕಾರಣಗಳನ್ನು ಮುಂದೊಡ್ಡಿ ಇದೊಂದು ಉತ್ತಮ ಯೋಜನೆ ಎಂದು ಸಮರ್ಥಿಸಲು ಕೆಲವು ಕಾಂಗ್ರೆಸ್ ಶಾಸಕರು ಮುಂದಾದರು. ಅವುಗಳನ್ನು ಈಗ ವಿವರಿಸುವುದರಲ್ಲಿ ಏನೇನೂ ಅರ್ಥವಿಲ್ಲ.

ಕಾಂಗ್ರೆಸ್‌ನ ವಿಜಯಸಿಂಗ್ ನಹರ್ 1957 ಜುಲೈ 5 ರಂದು ಮಂಡಿಸಿದ ಅನಧಿಕೃತ ಗೊತ್ತುವಳಿ ಮೇಲೆ ನಡೆದ ಚರ್ಚೆಗೆ ಪ್ರತಿಕ್ರಿಯೆಯಾಗಿ ಜುಲೈ 25 ರಂದು ನಾನು ಮಾಡಿದ ಭಾಷಣದಲ್ಲಿ ನಿರಾಶ್ರಿತರ ಪರವಾಗಿ ನಾನು ದೀರ್ಘವಾಗಿ ವಾದಿಸಿದೆ. ಈ ಸಂಬಂಧ ಕಮ್ಯುನಿಸ್ಟ್ ಪಕ್ಷದ ನಿಲುವನ್ನು ಸ್ಪಷ್ಟಪಡಿಸಿದೆ.

ಅಂಚೆ ಮತ್ತು ತಂತಿ ಮುಷ್ಕರ

1957ರ ಆಗಸ್ಟ್ 8 ಮತ್ತು 9ರ ರಾಷ್ಟ್ರವ್ಯಾಪಿ ಅಂಚೆ ಮತ್ತು ತಂತಿ ಮುಷ್ಕರಕ್ಕೆ ಜುಲೈನಲ್ಲಿ ಸಿದ್ಧತೆಗಳು ಆರಂಭವಾದವು. ಅಂಚೆ ಮತ್ತು ತಂತಿ ನೌಕರರ ಕೆಲವು ಮುಖ್ಯ ಬೇಡಿಕೆಗಳನ್ನು ಸರಕಾರ ಈಡೇರಿಸಿರಲಿಲ್ಲ. ಎರಡನೇ ವೇತನ ಆಯೋಗವನ್ನು ರಚಿಸಬೇಕೆಂಬ ಬೇಡಿಕೆಗೆ ಕೇಂದ್ರ ಕಿವಿಗೊಡಲೇ ಇಲ್ಲ. ಅಂಚೆ ಮತ್ತು ತಂತಿ ನೌಕರರ ರಾಷ್ಟ್ರೀಯ ಒಕ್ಕೂಟಕ್ಕೆ ಮುಷ್ಕರದ ಕರೆನೀಡದೆ ಬೇರೆ ದಾರಿಯಿರಲಿಲ್ಲ. ವೇತನ ಆಯೋಗ ರಚಿಸಬೇಕೆಂಬ ಬೇಡಿಕೆಗೆ ಏರ್‌ಲೈನ್ಸ್ ನೌಕರರೂ ದನಿಗೂಡಿಸಿದರು.

(ಮುಂದುವರಿಯುವುದು)

ಬಿನೊಯ್ ಚೌಧುರಿ-ಮತ್ತೊಂದು ನೆನಪು

ಕಾ। ಬಿನೊಯ್ ಕೃಷ್ಣ ಚೌಧುರಿಯವರು ನಿಧನರಾದರು ಎಂದಾಕ್ಷಣ ನನಗೆ ನೆನಪಾದುದು 1993 ರಲ್ಲಿ ಬೆಂಗಳೂರಿನಲ್ಲಿ ನಡೆದ ಪಿ.ಬಿ./ಸಿ.ಸಿ. ಸಭೆ. ಅದರಲ್ಲಿ ಭಾಗವಹಿಸಲು ಕಾ। ಚೌಧುರಿ ಬಂದಿದ್ದರು. ಪಶ್ಚಿಮ ಬಂಗಾಳದ ಎಡರಂಗ ಸರಕಾರದ ಮಂತ್ರಿಗಳಾಗಿದ್ದ ಅವರು ಕುಮಾರ ಕೃಪಾ ಅತಿಥಿ ಗೃಹದಲ್ಲಿ ಉಳಕೊಂಡಿದ್ದರು. ಕರ್ನಾಟಕದ ಉಸ್ತುವಾರಿ ಮಂತ್ರಿಗಳಾಗಿದ್ದರೂ (ಬೆಂಗಳೂರಿಗೆ ಬಂದ ಸಮಯದಲ್ಲಿ) ಒಂದು ಹೊಸ ಬನಿಯನ್ನನ್ನು ಧರಿಸಲಾಗದ ಕಮ್ಯುನಿಸ್ಟ್ ಪಕ್ಷದ ಮಂತ್ರಿಯೆಲ್ಲಿ ಎಂಬ ತುಲನೆ ಕಾ। ಪಿ.ಆರ್.ಸಿ. ಯವರ ಮಾತಿನ ಧಾಟಿಯಲ್ಲಿತ್ತು.

ಸರಕಾರಿ ಯಂತ್ರದ ದುರ್ಬಳಕೆ ಇಲ್ಲ: ಯಾವುದೇ ರಾಜ್ಯ ಸರಕಾರದ ಮಂತ್ರಿ ಇನ್ನೊಂದು ರಾಜ್ಯಕ್ಕೆ ಹೋದಾಗ ಆ ರಾಜ್ಯಕ್ಕೆ ಅತಿಥಿಯಾಗುತ್ತಾರೆ. ಇದು



ಇಎಂಎಸ್ ಅವರೊಂದಿಗೆ ಬಿನೊಯ್ ಚೌಧುರಿ

ಪಾಲಿಟ್‌ಬ್ಯೂರೋ ಸದಸ್ಯರಾದ ಕಾ।ಪಿ. ರಾಮಚಂದ್ರನ್ (ಪಿ.ಆರ್.ಸಿ.) ಸೇರಿದಂತೆ ಉಳಿದ ಪಿ.ಬಿ. ಸದಸ್ಯರೂ ಅತಿಥಿ ಗೃಹದ ಇನ್ನೊಂದು ಭಾಗದಲ್ಲಿ ಇದ್ದರು. (ಈ ಲೇಖಕ ಸ್ವಯಂ ಸೇವಕನಾಗಿದ್ದ.)

ಹರಕು ಬನಿಯನ್ ಮಂತ್ರಿ; ಮುಖಂಡರ ಕೊಳೆಯಾದ ಬಟ್ಟೆಯನ್ನು 'ಡೋಬಿಗೆ ಕೊಡುವ ಸಂದರ್ಭ. ಅಲ್ಲೇ ಇದ್ದ ಕಾ। ಪಿ.ಆರ್.ಸಿ. ಯವರು ಒಂದು ಬನಿಯನ್ ಎತ್ತಿಕೊಂಡು ಇದು ಯಾರದ್ದು ಎಂದು ಕೇಳಿದರು. ಪಶ್ಚಿಮ ಬಂಗಾಳದ ಮಂತ್ರಿ ಕಾ। ಚೌಧುರಿಯವರದ್ದು ಎಂದೆ. 'ಪಶ್ಚಿಮ ಬಂಗಾಳ ಸರಕಾರದ ಮಂತ್ರಿಯ ಬನಿಯನ್ ನೋಡಿ' ಎಂದು ಕಾ। ಪಿ.ಆರ್.ಸಿ.ಯವರು ಅಲ್ಲಿದ್ದ ಎಲ್ಲರಿಗೂ ತೋರಿಸಿದರು. ಅವರ ಮಾತಿನಲ್ಲಿ ವ್ಯಂಗ್ಯವಿರಲಿಲ್ಲ. ಬದಲಾಗಿ ಕಮ್ಯುನಿಸ್ಟ್ ಧುರೀಣನ ಬಗ್ಗೆ ಹೆಮ್ಮೆ ಇತ್ತು. ಅಧಿಕಾರಕ್ಕೆ ಬಂದ ಒಂದೆರಡು ವರ್ಷಗಳಲ್ಲೇ ಹತ್ತಾರು ಬಂಗಲೆಗಳನ್ನು ಕಟ್ಟಿಸಿಕೊಂಡು ಬೀಗುತ್ತಿರುವ ಬಂಡವಾಳಶಾಹಿ ಪಕ್ಷಗಳ ಮಂತ್ರಿಗಳೆಲ್ಲಿ? 10 ವರ್ಷಗಳಿಂದ ಸತತವಾಗಿ

ಸಂಪ್ರದಾಯ. ಮಂತ್ರಿಯೂ ಸೇರಿದಂತೆ ಪತ್ನಿ, ಮಕ್ಕಳೂ ಸಹ ಸರಕಾರದ ಅಥಿತಿಯಾಗಿ ಊಟ, ವಸತಿ ರಾಜ್ಯದೊಳಗಿನ ಸಂಚಾರ ಕಾರಿನಲ್ಲಿ ಉಚಿತ. ಕಾ। ಚೌಧುರಿಯವರ ಪತ್ನಿ ಕೂಡಾ ಬೆಂಗಳೂರಿಗೆ ಬಂದಿದ್ದರು ಅತಿಥಿ ಗೃಹದಲ್ಲಿ ಉಳಕೊಂಡಿದ್ದರು. ತನ್ನ ಪತಿ ಕೇಂದ್ರ ಸಮಿತಿ ಸಭೆಗೆ ಹೋದಾಗ ರೂಮಿನಲ್ಲಿ ಒಬ್ಬರೆ ಕುಳಿತು ಬೇಸರವಾಗಿ ಕಲ್ಕತ್ತಕ್ಕೆ ಎಸ್.ಟಿ.ಡಿ. ಮೂಲಕ ತನ್ನ ಕುಟುಂಬದವರೊಂದಿಗೆ ಮಾತನಾಡಿದರು. ನೂರೋ-ಇನ್ನೂರೋ ಬಿಲ್ಲು ಬಂದಿತ್ತು. Protocal ಸಂಪ್ರದಾಯದ ಪ್ರಕಾರ ಎಸ್.ಟಿ.ಡಿ. ಕರೆ ಉಚಿತವಲ್ಲ. ಅತಿಥಿ ಗೃಹದವರು ವೆಚ್ಚವನ್ನು ಪಶ್ಚಿಮ ಬಂಗಾಳದ ಸರಕಾರದ ಲೆಕ್ಕಕ್ಕೆ ಹಾಕಿದ್ದರು.

ಈ ವಿಷಯ ತಿಳಿದ ಕಾ। ಚೌದುರಿಯವರು ಒಂದೇ ಸಮನೆ ಪತ್ನಿಗೆ ಜೋರು ಮಾಡುತ್ತಿದ್ದರು. 'ನಾನು ನನ್ನ ಸರಕಾರಕ್ಕೆ ಏನು ಉತ್ತರ ಹೇಳಬೇಕು' ಎಂದು ಕೇಳುತ್ತಿದ್ದರು. ಇದರಲ್ಲಿ ಎರಡು ಅಂಶ ಕಾ। ಚೌಧುರಿಯವರು ಸರಕಾರಿ ಯಂತ್ರದ ದುರ್ಬಳಕೆಗೆ ಒಪ್ಪುತ್ತಿರಲಿಲ್ಲ. ಜತೆಯಲ್ಲಿ ಪಶ್ಚಿಮ ಬಂಗಾಳದ ಎಡರಂಗ ಸರಕಾರವು ಮಂತ್ರಿಗಳ ಖಾಸಗಿ ವೆಚ್ಚದ ಮೇಲೆ ಕಡಿವಾಣ ಹಾಕಿತ್ತು.

ಅಂತೆಯೇ ಬೆಂಗಳೂರನ್ನು ನೋಡ ಬಯಸಿದ ಪತ್ನಿಯನ್ನು ಸರಕಾರಿ ವಾಹನದಲ್ಲಿ ಕಳಿಸಿಲ್ಲ. ಬದಲಾಗಿ ಪಕ್ಷವು ವ್ಯವಸ್ಥೆ ಮಾಡಿದ ಕಾರಿನಲ್ಲೇ ಕಳಿಸಲು ಹೇಳಿದರು ಕಾ। ಚೌಧುರಿ.

ಮಂತ್ರಿ ಪದವಿ ಜನರ ಹೋರಾಟದ ಸಂಕೇತ:

ಸರಕಾರದಿಂದ ನೇಮಕರಾದ ಭದ್ರತಾ ಸಿಬ್ಬಂದಿಗಳು ಮಂತ್ರಿಗಳ ನೆರವಿಗೆ ಇದ್ದುದರಿಂದ ನಮ್ಮ ಸ್ವಯಂ ಸೇವಕ ತಂಡ ಕಾ। ಚೌಧುರಿಯವರ ಬಗ್ಗೆ ಹೆಚ್ಚು ಗಮನ ನೀಡಿರಲಿಲ್ಲ. ಅಲ್ಲದೆ ಹೊಸ ಕಟ್ಟಡದಲ್ಲಿ ಜಾಸ್ತಿ ಜನ ಧುರೀಣರು ಇದ್ದರು. ಹೆಚ್ಚಿನ ಸ್ವಯಂ ಸೇವಕರು ಅಲ್ಲಿಗೆ ಬೇಕಾಗುತ್ತಿತ್ತು.

ಸಭೆ ಮುಗಿದು ಮುಖಂಡರೆಲ್ಲ ತೆರಳುವ ಸಂದರ್ಭದಲ್ಲಿ ಕಾ। ಚೌಧುರಿಯವರನ್ನು ಕಂಡೆವು. "ನೀವು ಮಂತ್ರಿಗಳಾದರೂ ಸಾಕಷ್ಟು ಗಮನ ಕೊಡಲು ಆಗಲಿಲ್ಲ" ಎಂದು ನಮ್ಮ ತಪ್ಪನ್ನು ಒಪ್ಪಿಕೊಂಡೆವು. ಆಗ ಅವರು ನಮ್ಮನ್ನು ಕುಳಿತುಕೊಳ್ಳಲು ಹೇಳಿದರು "ಮಂತ್ರಿ ಪದವಿ ಶಾಶ್ವತ ಅಲ್ಲ. ಪಶ್ಚಿಮ ಬಂಗಾಳದ ಜನತೆ ಅದರಲ್ಲೂ ರೈತಾಪಿ ಜನರು ತಮ್ಮ ಹಕ್ಕುಗಳಿಗಾಗಿ ನಡೆಸಿದ ಹೋರಾಟದ ಫಲವಾಗಿ ಇಂದು ಈ ಮಂತ್ರಿ ಪದವಿ ಲಭಿಸಿದೆ. ನಾವು ಅವರ ಸಮಸ್ಯೆಗಳಿಗೆ ಸ್ಪಂದಿಸದೆ ಹೋದಲ್ಲಿ ಮಂತ್ರಿ ಪದವಿಯೂ ಹೋಗುತ್ತದೆ. ನಾನೊಬ್ಬ ಮಂತ್ರಿ ಎಂದು ಹೇಳಿಕೊಳ್ಳುವುದಕ್ಕಿಂತ ಕಿಸಾನ್ ಸಭಾ (ರೈತ ಸಂಘ)ದ ಮುಖಂಡ ಎಂದು ಹೇಳಿಕೊಳ್ಳಲು ಹೆಚ್ಚು ಹೆಮ್ಮೆ ಎನಿಸುತ್ತದೆ" ಎಂದರು.

ಪಶ್ಚಿಮ ಬಂಗಾಳದ ಪಕ್ಷ, ಸರಕಾರದ ಬಗ್ಗೆ ಆಗಲೇ ಅಲ್ಪಸ್ವಲ್ಪ ಅನುಭವವಿದ್ದ ಈ ಲೇಖಕನಿಗೆ ಎಡರಂಗ ಸರಕಾರ ಸತತವಾಗಿ ಅಧಿಕಾರದಲ್ಲಿರುವ ಒಳಗುಟ್ಟೇನು ಎಂಬುದು ಖಾತ್ರಿಯಾಗಿತ್ತು.

ಕಾಮ್ರೇಡ್ ಬಿನಾಯ್ ಕೃಷ್ಣ ಚೌಧುರಿಯವರು ಕಮ್ಯುನಿಸ್ಟ್ ತತ್ವದ ಪ್ರತಿಪಾದಕರು ಮಾತ್ರವಲ್ಲ, ಆ ತತ್ವವನ್ನು ಅರಗಿಸಿಕೊಂಡು ನೀಜ ಜೀವನದಲ್ಲಿ ಬಳಸಿಕೊಂಡವರು. ಅವರ ಸರಳತೆಯೇ ಇದರ ದ್ಯೋತಕ. ಅಂತಹ ಮುಖಂಡರ ಸಂಖ್ಯೆ ಜಾಸ್ತಿಯಾದಂತೆಲ್ಲ ಅಂತವರು ಜನರ ನಡುವೆ ಹೋದಂತೆಲ್ಲ ಪಕ್ಷ ತನ್ನಿಂತಾನೇ ಬೆಳೆಯುತ್ತದೆ. ಗಟ್ಟಿಗೊಳ್ಳುತ್ತದೆ. ಯಾವ ವಿರೋಧಿಗಳೂ ಅಲುಗಾಡಿಸದಷ್ಟು ಗಟ್ಟಿಗೊಳ್ಳುತ್ತದೆ.

- ಬಾಲಕೃಷ್ಣ ಶೆಟ್ಟಿ

ಕರ್ನಾಟಕ ವಾರ-ಒಂದು ನೋಟ

ತಾಪಕ್ಕೆರಲಿ ಕನಿಷ್ಟ ಜನ ಬದುಕಲು ಕುಡಿಯುವ ನೀರು ಬೇಕು. ತಮ್ಮ ಗದ್ದೆಗಳಲ್ಲಿ ಭತ್ತದ ಪೈರು ಒಣಗುತ್ತಿರುವುದರಿಂದ ಕೂಡಲೇ ನೀರು ಬಿಡಿ ಎಂದು ಮಂಡ್ಯ ಜಿಲ್ಲೆಯ ರೈತರ ಆಗ್ರಹ. ಮಳೆ ಧರೆಗಿಳಿಯದೇ ಇದ್ದ ನೀರು ಕುಸಿದಿರುವುದರಿಂದ ಕೃಷ್ಣರಾಜಸಾಗರದಲ್ಲಿ ನೀರಿಲ್ಲ. ಏನು ಮಾಡುವುದು ಎಂಬುದು ಅಧಿಕಾರಿಗಳ ಹೇಳಿಕೆ. ಕೊನೆಗೆ ಚಳುವಳಿ ನಿರತ ಮಂಡ್ಯ ರೈತರು, ಕೃಷ್ಣರಾಜ ಸಾಗರ ಆಣೆಕಟ್ಟೆನಿಂದ ಮೈಸೂರಿಗೆ ಸರಬರಾಜಾಗುತ್ತಿದ್ದ ಕುಡಿಯುವ ನೀರಿನ ನಾಲೆ ತೂಬನ್ನು ಬಂದ್ ಮಾಡಿದರು. ನೀರು ಸರಬರಾಜು ಕಛೇರಿಗೆ ಬೀಗ ಜಡಿದರು. ಒಂದು ಬಾರಿಯಲ್ಲ ಎರಡು ಬಾರಿ. ಬೆಳಗೊಳದ ಪಂಪ್ ಹೌಸಿಗೆ ಬೀಗ ಹಾಕಿದ್ದರಿಂದ ಸರಬರಾಜಾಗುತ್ತಿದ್ದ 20 ಎಂಜಿಡಿ ನೀರು (ಒಟ್ಟು 21.5 ಎಂಜಿಡಿ) ಸಿಗದಿದ್ದರಿಂದ ಸಹಜವಾಗಿಯೇ ಮೈಸೂರು ನಗರದ ಜನತೆ ಕಂಗಾಲಾದರು. ಪರಿಸ್ಥಿತಿ ಇಷ್ಟೊಂದು ಬಿಗಡಾಯಿಸಿದ ನಂತರವಷ್ಟೇ ಸರ್ಕಾರ ಎಚ್ಚೆತ್ತುಕೊಂಡು ಒಂದೆಡೆ ರೈತರೊಂದಿಗೆ ಮಾತುಕತೆ, ಇನ್ನೊಂದೆಡೆ ಕಬಿನಿ ಜಲಾಶಯದಿಂದ ಟ್ಯಾಂಕರ್‌ಗಳಿಂದ ನಗರಕ್ಕೆ ನೀರು ಸರಬರಾಜು..... ಅಂತೂ ಇಂತೂ ಕೊನೆಗೆ ಇರುವ ನೀರಿನಲ್ಲೇ ಬೆಳೆಗೆ ಒಂದು ಪಾಲು ಬಿಡಲು ಸರ್ಕಾರದ-ರೈತರ ನಡುವೆ ಒಪ್ಪಿಗೆ ಆಯ್ತು. ಮೈಸೂರು ನಗರಕ್ಕೆ ದಿನಬಿಟ್ಟು ದಿನ ನೀರು ಬಿಡಲಾಗುವುದೆಂದು ಪ್ರಕಟಣೆ ಹೊರಬಿದ್ದಿದೆ. ನೀರಿನ ಸಮಸ್ಯೆಗೆ ತಾತ್ಕಾಲಿಕ ಪರಿಹಾರ ದೊರೆತಿದೆ.

… ನಿರ್ದಿಷ್ಟ ಅಜೆಂಡಾ ಎಂಬುದು ಇರಲಿಲ್ಲ. ಅದು ಕೇವಲ ಪತ್ರ ಮಾತ್ರ. ಅದರಲ್ಲಿದ್ದ ಅಂಶ 1991 ರಿಂದಲೂ ತಮಿಳುನಾಡಿಗೆ ನೀರು ಬಿಡುವುದರಲ್ಲಿ ಕರ್ನಾಟಕ ತಪ್ಪೆಸಗಿದೆ, ನೀರು ಸರಿಯಾಗಿ ಬಿಡುತ್ತಿಲ್ಲ ಎಂಬ ತಮಿಳುನಾಡು ಸರ್ಕಾರದ ದೂರಿನ ಬಗ್ಗೆ ಚರ್ಚೆ. ಈ ದೂರನ್ನೇ ತಮಿಳು ನಾಡು ಮುಖ್ಯಮಂತ್ರಿ ಕರುಣಾನಿಧಿಯವರು 2000 ಇಸ್ವಿ ಜನವರಿಯಲ್ಲೇ ಪ್ರಧಾನಿ ವಾಜಪೇಯಿಯವರಿಗೆ ನೀಡಿದ್ದರು. ಐದು ತಿಂಗಳ ಕಾಲ ಕಿಂಚಿತ್ತೂ ಕದಲದೇ ಪ್ರಧಾನಿ ಟೇಬಲ್ ಮೇಲೆ 'ಪವಡಿಸಿದ' ಈ ಪತ್ರದ ಗತಿ ಏನಾಯ್ತು ಎಂದು ಕರುಣಾನಿಧಿಯವರು ಕೇಳಿದ ಮೇಲೆ ಕ್ಷಿಪ್ರ ಕಾರ್ಯಾರಂಭ ಮಾಡಿದರು. ಕರ್ನಾಟಕಕ್ಕೂ ಸಭೆ ನೋಟೀಸ್ ಕಳಿಸಿದರು. ತಮ್ಮ ಕುರ್ಚಿ ಅಲುಗಾಡದಂತೆ ಕಾಯ್ದುಕೊಳ್ಳಲು ಮಿತ್ರನಿಗೆ ಇಷ್ಟಾದರೂ ಮಾಡ ಬಾರದೇ/ ಸರಿ. ಪತ್ರ ಫ್ಯಾಕ್ಸ್ ಮಾಡಿದ್ದು 16 ರಂದು. ಸಭೆ 19 ರಂದು. ಇಂತಹ ಗಂಭೀರ ಸಭೆಗೆ ಸಿದ್ಧತೆ ಮಾಡಿಕೊಂಡು ರಾಜ್ಯದ ಮುಖ್ಯಮಂತ್ರಿಗಳು ಹಾಜರಾಗಬಾರದೇ?

ವಿಧಾನಸಭೆಯಿಂದ ಖಾಲಿ ಇರುವ 11 ವಿಧಾನಪರಿಷತ್ ಸದಸ್ಯರ ಆಯ್ಕೆಗೆ ಚುನಾವಣೆಗಳು ಘೋಷಿತವಾಗಿವೆ. ಅಂದರೆ ಬಹುತೇಕ ವಾಗಿ ಸ್ಪರ್ಧಾಳು ಗಳು ಆಯ್ಕೆ ಯಾಗುವ ಸಂಭವ ಖಚಿತವೇ ಇರುತ್ತದೆ. ಆದ್ದರಿಂದಲೇ ಎಲ್ಲಾ ಈ ಬಂಡವಾಳಶಾಹಿ ಪಕ್ಷಗಳಲ್ಲಿ ಸ್ಪರ್ಧಿಯಾಗಲು ಪೈಪೋಟಿ. ಒಂದು ಕಡೆ ಯಡಿಯೂರಪ್ಪನವರು, ಇನ್ನೊಂದೆಡೆ ಎಂ.ಪಿ.ಪ್ರಕಾಶ್ ಹೀಗೆ..... ಕಳೆದ ವಿಧಾನಸಭೆ ಚುನಾವಣೆಗಳಲ್ಲಿ ಜನರಿಂದ ತಿರಸ್ಕೃತಗೊಂಡ ಈ ನಿರಾಶ್ರಿತರು ಹೇಗೋ ವಿಧಾನಸೌಧ ಪ್ರವೇಶಿಸಿಬಿಡಬೇಕೆಂಬ ಹವಣಿಕೆಯಲ್ಲಿದ್ದಾರೆ. ಮುಖ್ಯಪ್ರಶ್ನೆ ಈ ವಿಧಾನಪರಿಷತ್ ಎಂಬುದು ಇರಬೇಕೆ? ಜನರ ಅಭಿಪ್ರಾಯ ಧಿಕ್ಕರಿಸುವ, ಈ ಪರಿಷತ್ ಬೇಕಿಲ್ಲ. ಆರ್ಥಿಕ ದೃಷ್ಟಿಯಲ್ಲಿಯೂ ಇದು ಜನರು ಸಾಕಬೇಕಾದ ಬಿಳಿಯಾನೆ. ಇದನ್ನು ರದ್ದು ಮಾಡಿ ಎಂಬುದು ಸಿಪಿಐ(ಎಂ)ನ ಪ್ರಬಲ ಪ್ರತಿಪಾದನೆ.

ಪಂಚತಾರಾ ಹೋಟೆಲಿನಲ್ಲಿ ಪುನರ್ವಸತಿ ಸಭೆ

ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದಂತೆ ಇಂಗ್ಲೀಷ್ ಭಾಷಣಧಾರೆ

ಕರೆದದ್ದು ಪುನರ್ವಸತಿದಾರರ ಸಭೆ. ಸೇರಿದ್ದು ಬೆಂಗಳೂರಿನ ಪಂಚತಾರಾ ಹೋಟೆಲ್‌ನಲ್ಲಿ. ಹಾಜರಿದ್ದವರೋ ನಮ್ಮ ಹಳ್ಳಿಗಾಡಿನ ನೊಂದು, ಕಂಗಾಲಾದ ರೈತರು (ವಿವಿಧ ಯೋಜನೆಗಳಲ್ಲಿ ಮನೆ-ಭೂಮಿ ಕಳೆದುಕೊಂಡವರು). ಸಭೆಯಲ್ಲಿ ಹಾಜರಿದ್ದ ಅಧಿಕಾರಿ ಮಹಾಶಯರು ಇಂಗ್ಲೀಷಿನಲ್ಲಿ ಮಾತನ್ನಾಡಲಾರಂಭಿಸಿದರು. ಅಲ್ಲಲ್ಲಿ ದೀರ್ಘವಾಗಿ ಕೊರೆಯ ತೊಡಗಿದರು. ಹಾಜರಿದ್ದ ರೈತರು ಮತ್ತೂ ಕಂಗಾಲು. ನಿಮ್ಮ ಮಾತು ಅರ್ಥವಾಗುತ್ತಿಲ್ಲ, ಕನ್ನಡದಲ್ಲಿ 'ಆಡಿ' ಎಂದು ಹೇಗೋ ಧೈರ್ಯ ಮಾಡಿ ಆಗ್ರಹಿಸಿದ ರೈತರನ್ನು ಅಧಿಕಾರಿಗಳು ನಂತರ ಭಾಷಾಂತರ ಮಾಡುತ್ತೇವೆ ಎಂದು ಸುಮ್ಮನಾಗಿಸಿದರು. ಬಂದಿದ್ದ ಬಹುತೇಕ ಅಧಿಕಾರಿಗಳು ಇಂಗ್ಲೀಷ್‌ನಲ್ಲೇ ಜಡಿ ಮಳೆಗೈದರು. (ಜಮಾದಾರರನ್ನು ಬಿಟ್ಟು)ಕನ್ನಡದಲ್ಲಿ ಕೊನೆಗೂ ಹೇಳಲಿಲ್ಲ. ನಡೆದದ್ದೇನು ಅಂತ ರೈತರಿಗೆ ಅರ್ಥವಾಗಲಿಲ್ಲ. ಆದರೆ ವರದಿಯಲ್ಲಿ ಮಾತ್ರ ಯಶಸ್ವಿ ಸಭೆ ಎಂದು ದಾಖಲಾಯಿತು. ಸಭೆ ಖರ್ಚು-ವೆಚ್ಚಗಳನ್ನು ಅಧಿಕಾರಿಗಳು ಗಿಟ್ಟಿಸಿದರು. ಕರ್ನಾಟಕದಲ್ಲಿ ಕನ್ನಡವೇ ಆಡಳಿತ ಭಾಷೆ ಎಂಬ ಫಲಕಗಳು ವಿಧಾನಸಭೆಯಿಂದ - ಎಲ್ಲಾ ಕಚೇರಿಗಳಲ್ಲಿ ಅನಾಥವಾಗಿ ತೂಗಾಡುತ್ತಿವೆ. ಇವರಿಗೆ ಪಾಠ ಕಲಿಸಬಾರದೇ?

ನೋಡುಗ-ಎಸ್.ವೈ.ಗುರುಶಾಂತ್

ಜೈಲಿಗೆ ನೂಕಿದರೂ ಪಿಯುಸಿ ಅಧ್ಯಾಪಕರು ಎದೆಗುಂದದೇ ಹೋರಾಟ ನಡೆಸಿದ್ದು ಒಂದು ಅಭಿನಂದನೀಯ ಘಟನೆ. ತನ್ನ ಹುಕುಂ ನಿಷ್ಪ್ರಯೋಜಕ ವಾಗುತ್ತಿದ್ದು, ವಿವಿಧ ಜನ-ಸಂಘಟನೆಗಳ ಪ್ರತಿಭಟನೆಯೂ ವ್ಯಾಪಕವಾಗುತ್ತಿದ್ದರಿಂದ ಕಪ್ಪು ಕಲೆ ಅಂಟಿಸಿದ ಸರ್ಕಾರ ಮಾತುಕತೆಗೆ ಮುಂದಾಯಿತು. ಕೊನೆಗೂ ಮುಷ್ಕರ ವಾಪಸಾಯಿತು.

ಮುಖ್ಯಮಂತ್ರಿ ಕೃಷ್ಣರವರು ಈ ಬೇಡಿಕೆಗಳನ್ನು ಈಡೇರಿಸುವ ಪ್ರಶ್ನೆಯೇ ಇಲ್ಲವೆಂಬ 'ಐರನ್ ಹ್ಯಾಂಕ್' ತೀರ್ಮಾನಕ್ಕೆ ಕಾರಣವೇನು? ಇದರ ಹಿಂದಿರುವ ಶಕ್ತಿಗಳಾರು ಎಂಬುದು ಈಗೀಗ ಬಯಲಾಗುತ್ತಿದೆ. ಸರ್ಕಾರವೇನಾದರೂ ಸಂಬಳ ಹೆಚ್ಚಿಸಿದರೆ ತಾವೂ ಸಹ ಶಿಕ್ಷಕರಿಗೆ ಹೆಚ್ಚಿಗೆ ಸಂಬಳ ನೀಡಬೇಕಾಗುವುದು ಎಂಬುದು ಖಾಸಗಿ ಶಿಕ್ಷಣ ಸಂಸ್ಥೆಯ ಲಾಬಿಗಳ ದುಷ್ಟ ಲೆಕ್ಕಾಚಾರ. ಅತ್ಯಂತ ಕಡಿಮೆ ಸಂಬಳದಲ್ಲಿ ದಿನವಿಡೀ ಬೇಕಾಬಿಟ್ಟೆ ದುಡಿಸಿಕೊಳ್ಳುವ ಈ ಸಂಸ್ಥೆಗಳು, ಕೃಷ್ಣರಿಗೆ ದುಬಾವಣೆ ಒಡ್ಡಿವೆ. ಮಠಾಧೀಶರೂ ಇದಕ್ಕೆ ಟೊಂಕಕಟ್ಟಿ ನಿಂತಿದ್ದಾರೆ. ಈ ಹೈಟೆಕ್ ಮುಖ್ಯಮಂತ್ರಿ ಯಾರ ಪಕ್ಷಪಾತಿ ಎಂಬುದನ್ನು ಜಗಜ್ಜಾಹೀರುಗೊಳಿಸಿದ್ದಾರೆ. ಇದರೊಂದಿಗೆ ಕರಾಳ 'ಎಸ್ಮಾ' ಬಳಸಲು ಮುಂದಾದ ಅವರ ಕ್ರಮ ಮುಖದ ಮೇಲೆ ರಾಜಿಸುವ ಸದಾ ಕಪ್ಪು ಮಸಿಯಾಗಿದೆ.

ಕೃಷ್ಣರ ದಿಢೀರ್ ಭೇಟಿ

ಇತ್ತೀಚೆಗೆ ಸರ್ಕಾರಿ ಕಛೇರಿಗಳಿಗೆ ದಿಢೀರನೇ ಭೇಟಿ ಮಾಡಿ ಮುಖ್ಯಮಂತ್ರಿ ಕೃಷ್ಣ ಸುದ್ದಿ ಮಾಡಿದರು. ಅವರ ಭೇಟಿ ನೀಡಿದ ರೇಶ್ಮೆ ಇಲಾಖೆಯಲ್ಲಿ 8 ಜನ, ಮಹಿಳಾ-ಮಕ್ಕಳ ಇಲಾಖೆಯಲ್ಲಿ 6, ಸರ್ಕಾರಿ ಮುದ್ರಣಾಲಯದ ನಿರ್ದೇಶನಾಲಯದಲ್ಲಿ, ವಾಣಿಜ್ಯ ತೆರಿಗೆ ಕಚೇರಿಯಲ್ಲಿ 28, ಸಮಾಜ ಕಲ್ಯಾಣದಲ್ಲಿ 9 ಹೀಗೆ ಒಟ್ಟು 52 ಜನ ಅಧಿಕಾರಿಗಳು, ನೌಕರರು ಯಾವುದೇ ಅಧಿಕೃತ ಮಾಹಿತಿ ನೀಡದೇ ಗೈರುಹಾಜರಿದ್ದರು. ಮುಖ್ಯಮಂತ್ರಿಗಳೇನೋ ಅವರನ್ನು ತಕ್ಷಣದಲ್ಲೇ ಸಸ್ಪೆಂಡ್ ಮಾಡಿ ಆದೇಶ ಹೊರಡಿಸಿದರು. ವಿಧಾನಸೌಧದ ಅಕ್ಕಪಕ್ಕದಲ್ಲೇ ಈ ಸ್ಥಿತಿ ಇದೆಯೆಂದ ಮೇಲೆ ಉಳಿದ ಕಡೆ ಇನ್ನೆಂಥಹ ಸ್ಥಿತಿ ಎಂಬ ಪ್ರಶ್ನೆ ಹುಟ್ಟುತ್ತದೆ ನಿಜ.

ಆಡಳಿತವನ್ನು ಚುರುಕಗೊಳಿಸಲು ಈ ಭೇಟಿ ಸಾರ್ಥಕ ಎನ್ನುತ್ತಾರೆ ಮುಖ್ಯಮಂತ್ರಿ ಹಾಗೂ ಅವರ ಸುತ್ತಲಿನ ಬಳಗ. ಹೀಗೆ ಇವರು ಎಷ್ಟು ಕಛೇರಿಗಳನ್ನು ಎಷ್ಟು ದಿನ ಭೇಟಿ ಮಾಡಿ ಸರಿಪಡಿಸಲು ಸಾಧ್ಯ? ಸ್ಮಾರ್ಟ್ ಕಾರ್ಡ್, ಕ್ಷಿಪ್ರ ಭೇಟಿ, ಇವೆಲ್ಲಾ ಕೇವಲ ನಾಟಕಗಳು ಮಾತ್ರ. ಮೂಲಭೂತವಾಗಿ ಸರ್ಕಾರಿ ಆಡಳಿತ-ಅಧಿಕಾರಿಗಳು ಜನರಿಗೆ ಹೊಣೆಯಾಗಿರಬೇಕು. ಇಡೀ ರಾಜ್ಯದ ಸರ್ಕಾರಿ ನೌಕರರ ಸಂಘವನ್ನು ಆಡಳಿತದ ಪ್ರಕ್ರಿಯೆಯಲ್ಲಿ ಒಳಗೊಳ್ಳಬೇಕು. ಅವರ ಅಭಿಪ್ರಾಯ, ಸಲಹೆಗಳಿಗೆ ಮನ್ನಣೆ ನೀಡಬೇಕು. ಆ ನೌಕರರಲ್ಲೇ ಇರಬಹುದಾದ ಅದಕ್ಷರೂ, ಭ್ರಷ್ಟರನ್ನು ಮೂಲೆಗುಂಪು ಮಾಡಲು ಕ್ರಮ ವಹಿಸಬೇಕು. ಅಂತಹವರಿಗೆ ರಾಜಕೀಯ ಆಶೀರ್ವಾದಕೂಡದು. ಇಂತಹ ಭ್ರಷ್ಟ, ಅದಕ್ಷರನ್ನು ಸಾವಿರಾರು ಕಣ್ಣುಗಳ ಕಾವಲಿಗೆ ಒಳಪಡಿಸಬೇಕು. ವಿಧಾನಸಭೆ ಮುಗಿದರೆ ಜನಪ್ರತಿನಿಧಿಗಳಾದ ಶಾಸಕರುಗಳು ಮತ್ತೇ ತಮ್ಮದೇ ಕ್ಷೇತ್ರಕ್ಕೆ

ಪುಟ 10 ಕ್ಕೆ



ತಾವು ಬೆಳೆದ ಬೆಳೆಗೆ ನೀರು ಬೀಡಲು ಒತಾಯಿಸಿ ಮಂಡ್ಯ ರೈತರ ಪ್ರತಿಭಟನೆ

ಆದರೆ ಸರ್ಕಾರ, ಮಂತ್ರಿ, ಶಾಸಕರು ಅಧಿಕಾರಿಗಳು ಪರಿಸ್ಥಿತಿ ಇಷ್ಟು ಗಂಭೀರವಾಗುವವರೆಗೆ ಯಾಕೆ ಬಿಡಬೇಕಿತ್ತು? ಈ ಸ್ಥಿತಿಗೆ ಅವಕಾಶ ಕೊಡಬಾರದಿತ್ತು. ಹಾಗೆಯೇ ರೈತರು ನಾಗರೀಕರು ಕುಡಿಯುವ ನೀರಿನ ಸರಬರಾಜು ಬಂದ್ ಮಾಡುವ ಹಂತಕ್ಕೆ ಹೋಗಬಾರದಿತ್ತು. ಮೈಸೂರು ನಗರವಾಸಿಗಳು ಯಾರು? ಹಲವಾರು ಸುತ್ತಲಿನ ಜಿಲ್ಲೆಗಳಿಂದ, ಮಂಡ್ಯದಿಂದಲೂ ದುಡಿದುಣ್ಣಲು ತೆರಳಿದ ಒಂದೇ ಕರುಳಬಳ್ಳಿಗಳಲ್ಲವೇ? ನೀರಿನ ಹಂಚಿಕೆಗಾಗಿ ಎರಡು ರಾಜ್ಯಗಳ ನಡುವೆ ಜಗಳವಾಗಿ, ಘರ್ಷಣೆ, ರಕ್ತಪಾತ ಸಂಭವಿಸುತ್ತಿದೆ. ಈಗ ನಗರವಾಸಿಗಳು, ಗ್ರಾಮೀಣರು ಎಂದೂ ಕಾಲುವೆ ದಂಡೆ ಮೇಲೆ-ಕೆಳಗೆ ಎಂದೂ ಜಗಳ ಆಡುವುದು ತರವಲ್ಲ.

ನೀರಾವರಿ, ಆಣೆಕಟ್ಟುಗಳ ನಿರ್ವಹಣೆಯನ್ನು ಯೋಜಿತ ರೀತಿಯಲ್ಲಿ ನಿರ್ವಹಿಸದೇ ಸರ್ಕಾರ-ಅಧಿಕಾರಿಗಳು ವಿಫಲವಾಗಿರುವುದರ ಸೂಚನೆಯಿದು. ಮತ್ತು ಈ ಕ್ರಿಯೆಗಳಲ್ಲಿ ಜನರನ್ನು ಒಳಗೊಳ್ಳದೇ ಇರುವುದರ ಪರಿಣಾಮವೂ ಹೌದು.

ಕೃಷ್ಣಾ - ಕಾವೇರಿ ನದಿ ನೀರಿನ ಹಂಚಿಕೆ - ಸರ್ವಪಕ್ಷಗಳ ಸಭೆ

ಮೇ 18 ರಂದು ವಿಧಾನಸೌಧದಲ್ಲಿ ಮುಖ್ಯಮಂತ್ರಿಗಳು ಕರೆದಿದ್ದ ಸರ್ವಪಕ್ಷಗಳ ಸಭೆಯ ಉದ್ದೇಶ ಕೃಷ್ಣ ನದಿ ನೀರಿನ ಹಂಚಿಕೆ ಬಗ್ಗೆ ಸುಪ್ರೀಂ ಕೋರ್ಟ್ ತೀರ್ಪನ್ನು ಚರ್ಚಿಸಲೆಂದು. ಆದರೆ ಎಲ್ಲರ ಗಮನ ಹರಿದಿದ್ದು ಕಾವೇರಿ ಬಗ್ಗೆ. ಕಾರಣ ಮೇ 19 ರಂದು ನವದೆಹಲಿಯಲ್ಲಿ ಕಾವೇರಿ ನೀರಿನ ಬಗ್ಗೆ ಚರ್ಚಿಸಲು ಪ್ರಧಾನಿಗಳು ಸಭೆ ಕರೆದಿದ್ದರು. ಇದಕ್ಕೂ ಕಾಲಾವಕಾಶವಿಲ್ಲ. ಸಭೆ ಕರೆಯುವ ಮೊದಲು ಕಾವೇರಿ ಪ್ರಾಧಿಕಾರದ ಹಾಗೂ ಅಧಿಕಾರಿಗಳುಳ್ಳ 'ಉಸ್ತುವಾರಿ ಸಮಿತಿ'(ಮಾನಿಟರಿಂಗ್ ಕಮಿಟಿ)ಯನ್ನು ತೊಡಗಿಸಿ, ಮಾಹಿತಿ ಸಂಗ್ರಹಣೆ, ಸಿದ್ಧತೆಗೆ ಪ್ರಧಾನಿಗಳು ನಿರ್ದೇಶಿಸಲಿಲ್ಲ. ಆದ್ದರಿಂದ ಈ ಸಭೆಗೆ ಹಾಜರಾಗುವುದು ಬೇಡ, ಸಭೆ ಮುಂದೂಡಲು ಕೇಂದ್ರಕ್ಕೆ ಆಗ್ರಹಿಸಲು ಸರ್ವಪಕ್ಷಗಳ ಸಭೆಯಲ್ಲಿ ಒಮ್ಮತಕ್ಕೆ ಬರಲಾಯಿತು. ಬಿಜೆಪಿ ನಾಯಕ ಜಗದೀಶ್ ಶೆಟ್ಟರ್ ಕೊನೆಗೆ ಮೌನ ಸಮ್ಮತಿ ನೀಡಿದ್ದರು. ಕೇಂದ್ರಕ್ಕೆ ಪತ್ರವನ್ನು ಬರೆಯಲು ನಿರ್ಧರಿಸಲಾಯಿತು. ಕೊನೆಗೆ 19 ರ ಸಭೆಯನ್ನು ಕೇಂದ್ರ ಸರ್ಕಾರ ಮುಂದೂಡಿತು.

ಇದಾದ ನಂತರ ಬಿಜೆಪಿಯ ವಿರೋಧ ಪಕ್ಷದ ನಾಯಕ ಜಗದೀಶ ಶೆಟ್ಟರು ಸುದ್ದಿಗೋಷ್ಠಿ ನಡೆಸಿ, ಸರ್ವಪಕ್ಷಗಳ ಸಭೆಯ ನಿರ್ಧಾರ ಟೀಕಿಸಿ, ಕರ್ನಾಟಕ ಭಾಗವಹಿಸಬೇಕಿತ್ತು ಎಂದರು. ಒಂದು ಕಡೆ ದೆಹಲಿ ದೊರೆಗಳ ಕುರ್ಚಿ ಕಾಯಲು, ಇನ್ನೊಂದೆಡೆ ತಮಿಳುನಾಡು ಮುಖ್ಯಮಂತ್ರಿಗಳನ್ನು ಓಲೈಸಲು ಶೆಟ್ಟರು ಬಯಸಿದ್ದರು. ಆಂಧ್ರದಲ್ಲಿ ಒಂದು ನಿಲುವು, ತಮಿಳುನಾಡಿನಲ್ಲಿ ಇನ್ನೊಂದು ನಿಲುವು ಕರ್ನಾಟಕದಲ್ಲಿ ಮತ್ತೊಂದು ನಿಲುವು ತಾಳುವ ಸಂದರ್ಭಸಾಧಕ ಬಿಜೆಪಿಯ ರಾಷ್ಟ್ರೀಯ ನೀತಿ, ಜನರರಾಷ್ಟ್ರೀಯ ಹಿತಾಸಕ್ತಿಗಳು ಅಧಿಕಾರದ ಮುಂದೆ ತೃಣಸಮಾನ.

ಜನರಿಂದ ತಳ್ಳಲ್ಪಟ್ಟ ನಾಯಕರಿಗೆ ಪರಿಷತ್ತಿನ ಆಶ್ರಯವೇ?

ಜನತಾದಳ ಮತ್ತು ಬಿಜೆಪಿಯ ನಾಯಕರಲ್ಲಿ ಈಗೀಗ ಮಾತಿನ ಬಿರುಸು ಮತ್ತೆ ಆರಂಭ. ಈಗ



ಎಸ್ಮಾ ಎದುರಿಸಿ ಹೋರಾಡಿದ ಅಧ್ಯಾಪಕರು

ಎಸ್ಮಾ ಕಾನೂನು ಬಳಸುವ ಬೆದರಿಕೆ ಹಾಕಿ,

ಶ್ರೀಲಂಕಾ: ಬಿಜೆಪಿ ಕೂಟದ ಹೊಣೆಗೇಡಿತನ

ಶ್ರೀಲಂಕಾದಲ್ಲಿ ಜನಾಂಗೀಯವಾದದ ಹೆಸರಲ್ಲಿ ಎಲ್‌ಟಿಟಿಇ ಮತ್ತೆ ತನ್ನ ಹಿಂಸೆಯ ಅಟ್ಟಹಾಸವನ್ನು ಮೆರೆಯುತ್ತಿದೆ.ಎಲ್‌ಟಿಟಿಇ ವ್ಯಾಘ್ರರ ಈ ಬಾರಿಯ ಧಾಳಿ ಅತ್ಯಂತ ಭೀಕರ ಸ್ವರೂಪವನ್ನು ಪಡೆದುಕೊಂಡಿದೆ.

ಕಳೆದ 17 ವರ್ಷಗಳಿಂದ 'ಪ್ರತ್ಯೇಕ ತಮಿಳು ಈಳಂ' ಸ್ಥಾಪನೆಗಾಗಿ ಶ್ರೀಲಂಕಾ ಸರ್ಕಾರದ ವಿರುದ್ಧ ಧಾಳಿಗಳಲ್ಲಿ ಸುಮಾರು 60,000 ಕ್ಕೂ ಅಧಿಕ ನಾಗರೀಕರು ಪ್ರಾಣ ಕಳೆದುಕೊಂಡಿದ್ದಾರೆ. ನೂರಾರು ಕೋಟಿಗಳ ಆಸ್ತಿ-ಪಾಸ್ತಿ ನಷ್ಟವಾಗಿದೆ. ಎಲ್‌ಟಿಟಿಇ ವ್ಯಾಘ್ರರ ಈ ಬಾರಿಯ ಧಾಳಿ ಅತ್ಯಂತ ಭೀಕರ ಸ್ವರೂಪವನ್ನು ಪಡೆದುಕೊಂಡಿದೆ. ನೇರವಾಗಿ ಶ್ರೀಲಂಕಾ ಸೈನ್ಯವನ್ನು ಎದುರಿಸುತ್ತ ಉತ್ತರ ಜಾಫ್ನಾ ಪ್ರದೇಶ ಮತ್ತು ಇತರೆ-ಪ್ರಮುಖ ನಗರವೊಂದು ತನ್ನ ನಿಯಂತ್ರಣದಲ್ಲಿದೆ ಎಂದು ಘೋಷಿಸಿಕೊಂಡಿದೆ. ಈ ಮಧ್ಯೆ ಶ್ರೀಲಂಕಾದಲ್ಲಿ ಹಲವಾರು ವರ್ಷಗಳಿಂದ ವಾಸಿಸುತ್ತಿದ್ದ ಭಾರತೀಯ ತಮಿಳರು ನಿರಾಶ್ರಿತರಾಗಿ ನೂರಾರು ಸಂಖ್ಯೆಯಲ್ಲಿ ತಂಡೋಪತಂಡವಾಗಿ ಭಾರತಕ್ಕೆ ವಾಪಸಾಗುತ್ತಿದ್ದಾರೆ. ಎಲ್‌ಟಿಟಿಇಯು ಈ ತೀವ್ರತರವಾದ ಧಾಳಿಗಳಿಂದ ತತ್ತರಿಸಿರುವ ಶ್ರೀಲಂಕಾ ಸರ್ಕಾರ ನೆರೆಯ ದೇಶವಾದ ಭಾರತ ಸೇರಿದಂತೆ ಇತರೆ ರಾಷ್ಟ್ರಗಳನ್ನು ವಿನಂತಿಸಿದೆ. ಆದರೆ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ, ತಮಿಳುನಾಡಿನ ಕೆಲವು ತನ್ನ ರಾಜಕೀಯ ಮಿತ್ರರನ್ನು ತೃಪ್ತಿಪಡಿಸುವ ಸಲುವಾಗಿ ದೇಶದ ಆಂತರಿಕ ಹಾಗೂ ಬಾಹ್ಯ ರಕ್ಷಣೆಯನ್ನು ನಿರ್ಲಕ್ಷಿಸಿ, ಶ್ರೀಲಂಕಾ ವಿಷಯದಲ್ಲಿ ತನ್ನ ಮೈತ್ರಿಕೂಟದಲ್ಲಿಯೇ ಸರ್ವಸಮ್ಮತಿ ರೂಪಿಸುವಲ್ಲಿ ವಿಫಲತೆಯನ್ನು ಪ್ರದರ್ಶಿಸಿದೆ. ಭಾರತ ಒಂದು ಸಾರ್ವಭೌಮ ರಾಷ್ಟ್ರವಾಗಿ, ಇನ್ನೊಂದು ದೇಶದ ಸಮಗ್ರತೆ ಪ್ರಶ್ನೆ ಬಂದಾಗ ತನ್ನ ನೀತಿಯನ್ನು ಸ್ಪಷ್ಟಪಡಿಸಲು ವಿಫಲವಾದಲ್ಲಿ ದಕ್ಷಿಣ ಏಶ್ಯಾದ ಉಪಖಂಡದಲ್ಲಿ-ಭಾರತದಲ್ಲಿ ಕಾಶ್ಮೀರ, ಪಂಜಾಬ್, ಅಸ್ಸಾಂ, ತ್ರಿಪುರಾ, ಮಣಿಪುರ, ನಾಗಾಲ್ಯಾಂಡ್, ಮಿಜೋರಂ ಹಾಗೂ ಪಾಕಿಸ್ತಾನದಲ್ಲಿಯೂ ಹಲವು ಕಡೆ ಪ್ರತ್ಯೇಕತವಾದಿಗಳಿಗೆ ಹಣ, ಆಯುಧ ಸರಬರಾಜು ಮಾಡುತ್ತಿರುವ-ಸಾಮ್ರಾಜ್ಯಶಾಹಿ ಶಕ್ತಿಗಳು ಪ್ರತ್ಯೇಕತೆಯ ನೆಪದಲ್ಲಿ ನುಸುಳಲು ಅವಕಾಶ ನೀಡಿದಂತಾಗುತ್ತದೆ.

ಶ್ರೀಲಂಕಾದಲ್ಲಿ ಪ್ರಮುಖ ಜನಾಂಗವಾದ ಸಿಂಹಳಿಯರು ಬಹುಸಂಖ್ಯಾತರಾದರೂ ಉತ್ತರ ಮತ್ತು ಈಶಾನ್ಯ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಮುಸ್ಲಿಂ ಜನಸಂಖ್ಯೆಯೂ ಕೂಡ. ತಮಿಳರು ಗಣನೀಯ ಸಂಖ್ಯೆಯಲ್ಲಿ ಶ್ರೀಲಂಕಾದ ಆರ್ಥಿಕ, ರಾಜಕೀಯ ಜನಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. 'ಈಗ ಶ್ರೀಲಂಕಾದಲ್ಲಿ ತಲೆದೋರಿರುವ ತಮಿಳು ಜನಾಂಗ ಪ್ರಶ್ನೆ ಐವತ್ತರ ದಶಕಗಳಿಂದಲೂ ಜೀವಂತವಿದೆ. ಶ್ರೀಲಂಕಾದಲ್ಲಿರುವ ತಮಿಳರ ಹಕ್ಕುಗಳೂ ನಿರ್ಲಕ್ಷಿಸಿವೆ. ಅವರ ಸಮಗ್ರ ಅಭಿವೃದ್ಧಿಯನ್ನು ಸಂಪೂರ್ಣ ಕಡೆಗಣಿಸಲಾಗಿದೆ - ಎಂಬುದು ಈಗಿರುವ ಪ್ರಮುಖ ಸಮಸ್ಯೆ. ಈ ಸಮಸ್ಯೆಗೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳಲು ಹಲವಾರು ಮಾರ್ಗೋಪಾಯ ಗಳು ಇದ್ದಾಗ್ಯೂ ಎಲ್‌ಟಿಟಿಇ ಮಾತ್ರ ಇಂತಹ ಯಾವುದೇ ಪರಿಹಾರಗಳನ್ನು ತಿರಸ್ಕರಿಸುತ್ತಲೇ ಬಂದಿದೆ. ಪ್ರಮುಖವಾಗಿ ತಮಿಳು ಜನಾಂಗವನ್ನು ಪ್ರತಿನಿಧಿಸುವ ಹಲವು ಗುಂಪುಗಳು ಶ್ರೀಲಂಕಾದ ಸಮಗ್ರತೆಯನ್ನು ಕಾಪಾಡುತ್ತಲೇ, ತಮಿಳರು ಬಹುಸಂಖ್ಯಾತ ರಾಗಿರುವ ಪ್ರದೇಶಗಳಿಗೆ ಸ್ವಾಯತ್ತತೆಗಳನ್ನು ನೀಡಿ, ಅವರಿಗೆ ನ್ಯಾಯ, ಗೌರವ ಮತ್ತು ಹಕ್ಕುಗಳ ಭರವಸೆಯನ್ನು ಪೂರ್ಣಗೊಳಿಸಲು ಒತ್ತಾಯಿಸುತ್ತಾ ಬಂದಿದೆ. ಇದಕ್ಕೂ ಸಕಾರಾತ್ಮಕ ಬೆಂಬಲ ಸರ್ಕಾರದಿಂದಲೂ ಮತ್ತು ಬಹುಸಂಖ್ಯಾತ ತಮಿಳರಿಂದಲೂ ವ್ಯಕ್ತವಾಗಿದೆ. ಆದರೆ 'ಪ್ರತ್ಯೇಕ ಈಳಂ' ರಾಷ್ಟ್ರದ ಬೇಡಿಕೆಯನ್ನು ಮುಂದಿಟ್ಟುಕೊಂಡು ಎಲ್‌ಟಿಟಿಇ ಸಾಹಸ ಕೃತ್ಯಗಳಿಗೆ ಮುಂದಾಗಿದೆ. ತಮಿಳು ವ್ಯಾಘ್ರಗಳ ಈ ಬೇಡಿಕೆಯನ್ನು ಬಹುಪಾಲು ತಮಿಳರು ವಿರೋಧಿಸುತ್ತಲೇ ಬಂದಿದ್ದಾರೆ. ವಸ್ತುಸ್ಥಿತಿ ಹೀಗಿದ್ದಾಗ್ಯೂ ಎಲ್‌ಟಿಟಿಇ ಈ ಒತ್ತಾಯ ಪೂರ್ವಕ ಪ್ರತ್ಯೇಕ ಹೋರಾಟಕ್ಕೂ ತಮಿಳರ ಬೆಂಬಲ ಗಳಿಸಲು ಪ್ರಯತ್ನಿಸುತ್ತಿದೆ. ಮಾತ್ರವಲ್ಲ, ಶ್ರೀಲಂಕಾದ ಆಂತರಿಕ ಚೌಕಟ್ಟಿನೊಳಗಡೆ ತಮಿಳರ ಸಮಸ್ಯೆ ಪರಿಹಾರಕ್ಕೆ ಪ್ರಯತ್ನಿಸುತ್ತಿರುವ ಟಿಯುಎಲ್‌ಎಫ್ ಮತ್ತು ಇಪಿಕೆಎಲ್‌ಎಫ್ ಸಂಘಟನೆಗಳ ಬೇಡಿಕೆಗಳನ್ನು, ಮುಖಂಡರುಗಳನ್ನು ಪ್ರಜ್ಞಾಪೂರ್ವಕವಾಗಿ ದಶಕಗಳಿಂದಲೂ ನಿರ್ಲಕ್ಷಿಸಿಕೊಂಡು ಬಂದಿದೆ.

ಶ್ರೀಮತಿ ಚಂದ್ರಿಕಾಕುಮಾರ ತುಂಗೆಯವರು ಶ್ರೀಲಂಕಾದ ಅಧ್ಯಕ್ಷೆಯಾದ ನಂತರ ಈ ಸಮಸ್ಯೆ ಪರಿಹಾರಕ್ಕೆ ಹಲವಾರು ಪ್ರಾಮಾಣಿಕ ಪ್ರಯತ್ನ ನಡೆಸಿದ್ದಾರೆ. ತಮಿಳರೇ ಅಧಿಕವಿರುವ ಪ್ರದೇಶಗಳಿಗೆ ಸ್ವಾಯತ್ತತೆ ನೀಡುವ ಪ್ರಸ್ತಾಪ ಮುಂದಿಟ್ಟಿದ್ದಾರೆ. ಈ ಬಗ್ಗೆ ಚರ್ಚಿಸಲು ಎಲ್‌ಟಿಟಿಇ ಸಂಘಟನೆಯನ್ನು ಮಾತುಕತೆಗೆ ಹಲವಾರು ಬಾರಿ ಆಹ್ವಾನಿಸಿದ್ದಾರೆ. ಆದರೆ ಈ ಎಲ್ಲಾ ಪ್ರಯತ್ನಗಳು ಎಲ್‌ಟಿಟಿಇ ಯ ಹಠಮಾರಿ ಧೋರಣೆಯಿಂದ ನಿರರ್ಥಕಗೊಂಡಿದೆ.

ಭಾರತಕ್ಕೆ ಅಪಾಯದ ಗಂಟೆ

ಶ್ರೀಲಂಕಾದಲ್ಲಿ ಕಳೆದ ಕೆಲ ದಿನಗಳಿಂದ ನಡೆಯುತ್ತಿರುವ ಘಟನೆಗಳು ಭಾರತಕ್ಕೆ ಕಠಿಣ ಪರಿಸ್ಥಿತಿಯನ್ನು ತಂದೊಡ್ಡಿವೆ. ಯಾಕೆಂದರೆ ಭಾರತ, ಶ್ರೀಲಂಕಾದ ನೆರೆದೇಶ ಮತ್ತು ಆ ದೇಶದೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದೆ. ಇನ್ನೊಂದು ಪ್ರಮುಖ ನಂಟು, ಈ ಎರಡು ದೇಶಗಳೊಂದಿಗಿದೆ. ಅದೆಂದರೆ, ಶ್ರೀಲಂಕಾದಿಂದ ನಿರಾಶ್ರಿತರಾಗಿ ವಾಪಸ್ಸಾಗುತ್ತಿರುವ ಬಹುತೇಕ ಜನರು ಭಾರತದಲ್ಲಿರುವ ತಮಿಳು ಸಂಬಂಧಿಗಳು. ಇದರೊಂದಿಗೆ ಕಳೆದ ಹಲವಾರು ವರ್ಷಗಳಿಂದಲೂ ದಕ್ಷಿಣ ಏಶ್ಯಾದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಹವಣಿಸುತ್ತಿರುವ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಶ್ರೀಲಂಕಾದ ಈ ಪರಿಸ್ಥಿತಿ ಖಂಡಿತ ಲಾಭವಾಗುತ್ತಿದೆ. ಯಾಕೆಂದರೆ ಇತ್ತೀಚೆಗೆ ಪತ್ರಿಕೆಗಳಲ್ಲಿ ಪ್ರಕಟಿತವಾಗಿರುವ ಸುದ್ದಿ ಪ್ರಕಾರ, ಶ್ರೀಲಂಕಾದಲ್ಲಿ 'ಪ್ರತ್ಯೇಕ ಈಳಂ'ಗಾಗಿ ಹೋರಾಡುತ್ತಿರುವ ಎಲ್‌ಟಿಟಿಇ ಮತ್ತು ಕಾಶ್ಮೀರ ಪ್ರತ್ಯೇಕತೆಗಾಗಿ ಹೋರಾಡುತ್ತಿರುವ ಉಗ್ರಗಾಮಿಗಳೂ ಪರಸ್ಪರ ಹೊಂದಿರುವ ಗುಪ್ತ ಒಪ್ಪಂದಗಳು ಬಹಿರಂಗಗೊಂಡಿರುವುದು ಆತಂಕದ ವಿಷಯವೇ ಆಗಿದೆ. ಅಲ್ಲದೆ ಕಳೆದ ಹಲವು ದಿನಗಳಿಂದ ಎಲ್‌ಟಿಟಿಇ ಬಳಸುತ್ತಿರುವ ಯುದ್ಧ ಸಾಮಗ್ರಿಗಳು, ಶಸ್ತ್ರಾಸ್ತ್ರಗಳು, ಶ್ರೀಲಂಕಾದ ಸೈನ್ಯ ಹೊಂದಿರುವ ಶಸ್ತ್ರಾಸ್ತ್ರಗಳಿಗಿಂತ ಅತ್ಯಾಧುನಿಕವಾದವುಗಳೆಂದು ಸ್ಪಷ್ಟವಾಗಿದೆ. ಆದ್ದರಿಂದ ಎಲ್‌ಟಿಟಿಇ ಮತ್ತು ಕಾಶ್ಮೀರಿ ಉಗ್ರಗಾಮಿಗಳ ಈ ಪ್ರಣಯ ಸಂಬಂಧ ಭಾರತದ ಸಮಗ್ರತೆಗೆ ಅತ್ಯಂತ ಅಪಾಯಕಾರಿಯಾಗಿದೆ. ಅಲ್ಲದೆ ಎಲ್‌ಟಿಟಿಇ ತನ್ನ ಗುರಿ ಸಾಧನೆಗಾಗಿ ಎಂತಹ ದುರ್ಮಾರ್ಗಕ್ಕೂ ಕೈಹಾಕಲು ಹಿಂದೇಟು ಹಾಕುವುದಿಲ್ಲ ಎಂಬುದನ್ನು ಶ್ರೀ ರಾಜೀವ್‌ಗಾಂಧಿಯವರ ಹತ್ಯೆಯಲ್ಲಿ ನೇರ ಕೈವಾಡದ ಮೂಲಕ ಪ್ರದರ್ಶಿಸಿದೆ.



ಫಿಜಿಯಲ್ಲಿ ಬಂಡಾಯ: ಸಿ.ಐ.ಎ.ಕೈವಾಡ

ಜನಪರವಾಗಿ ಆಳುತ್ತಿದ್ದ ಸರ್ಕಾರರವನ್ನು ಮತ್ತೆ ಫಿಜಿಯನ್ ಗಿರಿಜನರ ನೆರವಿನಿಂದ ಕಿತ್ತುಹಾಕಿದ್ದಾರೆ. ಫಿಜಿಯ ಉತ್ಪನ್ನಗಳನ್ನು ಅಗ್ಗವಾಗಿ ಅಮೆರಿಕಕ್ಕೆ ಮಾರುತ್ತಿದ್ದಕ್ಕೆ ತಡೆ ಹಾಕಿದ್ದರಿಂದಾಗಿಯೇ ಬಂಡಾಯ ಎಬ್ಬಿಸಲಾಯಿತೆ. ಈ ಬಂಡಾಯದ ಹಿಂದಿನ ಕೈ ಯಾರದು? ಇನ್ನೂ ಅದು ಸ್ಪಷ್ಟಗೊಳ್ಳಬೇಕಾಗಿದೆ. ಈ ಸಂದರ್ಭದಲ್ಲಿ ಹಿಂದಿನ ಬಂಡಾಯದ ಹಿನ್ನೆಲೆ ಐಕ್ಯರಂಗ ಓದುಗರ ನೆನಪಿಗಾಗಿ

ಐಕ್ಯರಂಗ ದಿನಾಂಕ



ಫಿಜಿಯ ಸಂಸತ್ತಿನ ಮುಂದೆ ಮಿಲಿಟರಿ ಟ್ಯಾಂಕ್
ಬೆದರಿ ಮೂಲೆಯಲ್ಲಿ ಅವಿತುಕೊಂಡಿರುವ ಪತ್ರಕರ್ತರು

ದಕ್ಷಿಣ ಶಾಂತ ಸಾಗರದಲ್ಲಿರುವ ಪುಟ್ಟ ರಾಷ್ಟ್ರ ಫಿಜಿಯಲ್ಲಿ ಮೇ 14 ರಂದು ನಡೆದ ಸೈನಿಕ ಬಂಡಾಯದಲ್ಲಿ ಸಿಐಎ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನದ ಕೈವಾಡವಿದೆ ಎಂದು ಅಮೆರಿಕಾದ ಪತ್ರಿಕೆಗಳು ವರದಿ ಮಾಡಿವೆ.

ಸುಮಾರು ಮುನ್ನೂರಕ್ಕೂ ಮಿಕ್ಕಿದ ಚಿಕ್ಕಪುಟ್ಟ ದ್ವೀಪಗಳನ್ನೊಳಗೊಂಡಿರುವ ಫಿಜಿ ಅರ್ಧಕ್ಕಿಂತಲೂ ಹೆಚ್ಚಿನ ಜನ ಭಾರತೀಯ ಮೂಲದವರು. ಫಿಜಿಯ ಅತ್ಯಂತ ಪ್ರಮುಖ ಆಧಾರ ಕಬ್ಬು. ಫಿಜಿಯ ಮೆಲಿನೇಶಿಯನ್ ಜನರ ಕೈಯಲ್ಲಿರುವ ಕೃಷಿಯೋಗ್ಯ ಭೂಮಿಯನ್ನ ಗೇಣಿ ಪಡೆದುಕೊಂಡು ಕಬ್ಬಿನ ಬೆಳೆ ಮಾಡುವ ರೈತರು ಭಾರತೀಯ ಮೂಲದವರೇ. ವ್ಯಾಪಾರ, ವಾಣಿಜ್ಯ ಮತ್ತು ಟ್ರೇಡ್ ಯೂನಿಯನ್ ಸಂಘಟನೆಗಳಲ್ಲೂ ಪ್ರಮುಖ ಪಾತ್ರ ಭಾರತೀಯ ಮೂಲ ಪ್ರಜೆಗಳದ್ದು. ಹಲವಾರು ದಶಕಗಳಿಂದ ಫಿಜಿಯ ಮೂಲವಾಸಿಗಳು ಮತ್ತು ಭಾರತೀಯ ಮೂಲದ ಜನ ಸೌಹಾರ್ದದಿಂದ ಬಾಳುತ್ತಿದ್ದಾರೆ.

ಕಳೆದ ಏಪ್ರಿಲ್ ತಿಂಗಳಲ್ಲಿ ನಡೆದ ಮಹಾ ಚುನಾವಣೆಯಲ್ಲಿ ಫಿಜಿಯ ಪಾಶ್ಚಾತ್ಯ ಪರವಾಗಿದ್ದ ಸರಕಾರ ಸೋತು ಭಾರತೀಯ ಹಾಗೂ ಫಿಜಿ ಮೂಲವಾಸಿಗಳನ್ನೊಳಗೊಂಡ ಲೇಬರ್ ಪಕ್ಷಗಳ ಒಕ್ಕೂಟ ಅಧಿಕಾರಕ್ಕೆ ಬಂತು. ಹೊಸ ಸರಕಾರ ಅದಿಕಾರಕ್ಕೆ ಬಂದೊಡನೆ ದಕ್ಷಿಣ ಶಾಂತ ಸಾಗರ ವಲಯವು ಅಣು ಶಸ್ತ್ರಗಳಿಂದ ವಿಮುಕ್ತವಾಗಿರಬೇಕೆಂಬ ಆಶಯವನ್ನು ವ್ಯಕ್ತಪಡಿಸಿತು. ಸೋವಿಯತ್ ಒಕ್ಕೂಟದ ಜೊತೆಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವ ಇರಾದೆಯೂ ಈ ಸರಕಾರಕ್ಕೆ ಇದ್ದಿತೆನ್ನಲಾಗಿದೆ.

ಆದರೆ ಚುನಾವಣೆಗಳು ನಡೆದ ಒಂದು ವಾರದ ಮೇಲೆ ಐವರು ಅಮೆರಿಕನ್ನರು ಫಿಜಿಯ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸೈನಿಕ ಅಧಿಕಾರಿ ಸಿಟಿವೆನಿ ರೆಬುಕನ ಜೊತೆಗೆ ಮಾತುಕತೆ ನಡೆಸುತ್ತಿದ್ದನ್ನು ಕಂಡವರಿದ್ದಾರೆ. ಕರ್ನಲ್ ಸಿಟಿವೆನಿ ರೆಬುಕ ಮೇ 14 ರಂದು ಸೈನಿಕ ಬಂಡಾಯ ನಡೆಸಿ ಪಾರ್ಲಿಮೆಂಟಿಗೆ ಮುತ್ತಿಗೆ ಹಾಕಿದಾಗ ಅವರೊಂದಿಗೆ ಈ ಅಮೆರಿಕನ್ ಪ್ರಜೆಗಳಲ್ಲಿ ಒಬ್ಬ ಇದ್ದನೆನ್ನಲಾಗಿದೆ. ಬಂಡಾಯ ನಡೆಸಿದ ಸರ್ವಾಧಿಕಾರಿ ರೆಬುಕ ಪ್ರಧಾನ ಮಂತ್ರಿ ಟಿಮೋಸಿ ಬಾವದ್ರಾ ಮತ್ತು ಅವರ ಸಂಪುಟದ ಎಲ್ಲಾ ಸಚಿವರನ್ನು ಗೃಹ ಬಂಧನದಲ್ಲಿಸಿದ್ದಾನೆ. ರೆಬುಕನ ಸರ್ವಾಧಿಕಾರಿ ಸರಕಾರವನ್ನು ಅಮೆರಿಕದಲ್ಲಿ ಪ್ರತಿನಿಧಿಸಲು ವಿಶ್ವ ಕಮ್ಯುನಿಸ್ಟ್ ವಿರೋಧಿ ಲೀಗಿನೊಂದಿಗೆ ಸಂಬಂಧ ಹೊಂದಿರುವ ಅಮೆರಿಕನ್ನರು ಮುಂದೆ ಬಂದಿದ್ದಾರೆ.

ಏಪ್ರಿಲ್ 20 ರಂದು ವಿಶ್ವಸಂಸ್ಥೆಯಲ್ಲಿ ಅಮೆರಿಕದ ರಾಯಬಾರಿಯಾಗಿರುವ ಜನರಲ್ ವಾಲ್ಟರ್ಸ್ ಫಿಜಿಯ ವಿದೇಶಾಂಗ ಸಚಿವರಾಗಿದ್ದ ಕೃಷ್ಣದತ್ ಅವರನ್ನು ಕಂಡು ಫಿಜಿ ಅಣುಅಸ್ತ್ರಗಳಿಗೆ ವಿರೋಧವಾಗಿರುವ ತನ್ನ ಧೋರಣೆಯನ್ನು ಬದಲಾಯಿಸಬೇಕೆಂದು ಒತ್ತಾಯ ಹೇರಿದರು. ಈ ಎಲ್ಲಾ ಪ್ರಯತ್ನ ವಿಫಲವಾದ ಮೇಲೆ ಚುನಾಯಿತ ಸರಕಾರವನ್ನು ಪತನಗೊಳಿಸುವ ಪಿತೂರಿ ನಡೆದಿರುವುದು ಸ್ಪಷ್ಟ.

ಫಿಜಿ ಮೂಲದ ಜನರು ಮತ್ತು ಭಾರತೀಯ ಮೂಲದ ಜನರ ನಡುವೆ ವಿರಸವಿದೆ ಎನ್ನುವುದು ಸತ್ಯವಲ್ಲ. ಫಿಜಿಯ ವಿದ್ಯಮಾನಗಳಲ್ಲಿ ಅಮೆರಿಕದ ಪಾತ್ರದ ಕುರಿತು ಎದ್ದಿರುವ ಹಲವಾರು ಕಳವಳಕಾರಿ ಪ್ರಶ್ನೆಗಳಿಗೆ ಉತ್ತರ ದೊರೆಯುತ್ತಿಲ್ಲ' ವೆಂದು ಅಮೆರಿಕದ ಪತ್ರಿಕೆ 'ನೇಶನ್' ವರದಿ ಮಾಡಿದೆ. ಇದಕ್ಕನುಗುಣವಾಗಿ ಸೈನಿಕ ಸರ್ವಾಧಿಕಾರಿ ರೆಬುಕ ಅಪ್ಪಟ ಜನಾಂಗವಾದಿ ಧೋರಣೆಯನ್ನು ಪ್ರತಿಪಾದಿಸುತ್ತಿದ್ದಾನೆ. ಫಿಜಿ ಅಣುಶಸ್ತ್ರಗಳಿಗೆ ಪರವಾಗಿರಬೇಕೆಂದಿದ್ದಾನೆ. ಭಾರತೀಯ ಮೂಲದ ಜನರ ರಾಜಕೀಯ ಹಕ್ಕುಗಳನ್ನು ಮೊಟಕು ಗೊಳಿಸುವ ಯತ್ನ ನಡೆಸಿದ್ದಾನೆ. ಈ ಮಿಲಿಟರಿ ಬಂಡಾಯದ ವಿರುದ್ಧ ಮತ್ತು ಪ್ರಜಾಪ್ರಭುತ್ವದ ಮರು ಸ್ಥಾಪನೆಗಾಗಿ ಫಿಜಿಯ ಮೂಲವಾಸಿಗಳು ಭಾರತೀಯ ಮೂಲದ ಪ್ರಜೆಗಳು ಒಂದಾಗಿ ಹೋರಾಟ ನಡೆಸುತ್ತಿದ್ದಾರೆ.

ಐಕ್ಯರಂಗ ದಿನಾಂಕ-ಜೂನ್ 14, 1987

ಈ ಮಧ್ಯೆ ಭಾರತವು ಸರ್ವಪಕ್ಷಗಳ ಸಭೆಯಲ್ಲಿ ಒಮ್ಮತದ ತೀರ್ಮಾನ ಕೈಗೊಂಡು ಶ್ರೀಲಂಕಾದ ತಮಿಳು ಸಮಸ್ಯೆಯನ್ನು ಆ ದೇಶದ ಸಮಗ್ರತೆಯೊಳಗೆ ಬಗೆಹರಿಸಿಕೊಳ್ಳಲು ಸೂಚಿಸಿದೆ. ಅಲ್ಲದೆ ತಮಿಳರ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಅವರ ಸಮಗ್ರ ಅಭಿವೃದ್ಧಿಗೆ ಸಹಾಯಕವಾಗುವಂತೆ ಸ್ವಾಯತ್ತ ಮಂಡಳಿಗಳನ್ನು ರಚಿಸಲು ತನ್ನ ಅಭಿಪ್ರಾಯ ಸೂಚಿಸಿದೆ. ಮತ್ತು ಶ್ರೀಲಂಕಾದ ವಿಭಜನೆಯನ್ನು ಪ್ರಜ್ಞಾಪೂರ್ವಕವಾಗಿ ವಿರೋಧಿಸಿದೆ.

ಆಳುವ ಎನ್‌ಡಿಎ ಸರ್ಕಾರದಲ್ಲಿ ಭಿನ್ನಮತ

ಕೇಂದ್ರದಲ್ಲಿ ಅಧಿಕಾರದಲ್ಲಿರುವ ಎನ್‌ಡಿಎ ಮೈತ್ರಿಕೂಟದ ಡಿಎಂಕೆ, ಪಿಎಂಕೆ, ಎಂಡಿಎಂಕೆ ಪಕ್ಷಗಳು ಶ್ರೀಲಂಕಾದಲ್ಲಿರುವ ತಮಿಳರ ಹಿತಾಸಕ್ತಿಯನ್ನು ಕಡೆಗಣಿಸಿ ಮತ್ತು ದೇಶದ ಸಮಗ್ರತೆಯನ್ನು ಲೆಕ್ಕಿಸದೆ ಜನಾಂಗೀಯ ಪ್ರಶ್ನೆಯ ಆಧಾರದಲ್ಲಿ ಎಲ್‌ಟಿಟಿಇಗೆ ಬಹಿರಂಗ ಬೆಂಬಲ ಘೋಷಣೆಯ ನಿಲುವು ಆತಂಕದ ಪ್ರಶ್ನೆಯಾಗಿದೆ.

ಈ ಪಕ್ಷಗಳು ಎಲ್‌ಟಿಟಿಇ ಪರವಾಗಿ ಹೇಳಿಕೆ ನೀಡಿದ್ದು ಮಾತ್ರವಲ್ಲ ಭಾರತ ಸರ್ಕಾರವು ಯಾವುದೇ ತೆರನಾದ ಸಹಾಯವನ್ನು ಶ್ರೀಲಂಕಾ ಸರ್ಕಾರಕ್ಕೆ ನೀಡ ಬಾರದೆಂದು ಒತ್ತಡ ಹೇರಿದ್ದವು. ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿಯವರು ವಿಧಾನಸಭೆಯಲ್ಲಿ ತನ್ನ ಪಕ್ಷವು 'ಪ್ರತ್ಯೇಕ ತಮಿಳು ಈಳಂ' ಬೇಡಿಕೆಯನ್ನು ಬೆಂಬಲಿಸುವುದಾಗಿ ಹೇಳಿಕೆಯನ್ನೇ ನೀಡಿದರು. ಈ ಎಲ್ಲದರ ಪರಿಣಾಮವಾಗಿ ಈ ಜನಾಂಗ ವಾದದ ಪ್ರಚಾರ ತಮಿಳುನಾಡಿನಲ್ಲಿ ಚಾಲನೆ ಪಡೆದುಕೊಳ್ಳುತ್ತಿದೆ. ಅಲ್ಲದೆ ಶ್ರೀಲಂಕಾದ ನಿರಾಶ್ರಿತರೂ ಈ ಪ್ರಚಾರದಲ್ಲಿ ಭಾಗಿಗಳಾಗುತ್ತಿರುವುದರಿಂದ ನಮ್ಮ ನೆಲದಲ್ಲೂ ಶಾಂತಿ ಕದಡುವ ಪ್ರಯತ್ನಗಳು ನಡೆಯುವ ಮೂಲಕ ಪ್ರತ್ಯೇಕತೆ ಸಮಸ್ಯೆಯನ್ನು ನಾವು ಎದುರಿಸುವಂತಾಗಿದೆ.

ಪರಿಸ್ಥಿತಿ ಹೀಗಿದ್ದಾಗ್ಯೂ ಬಿಜೆಪಿ, ಮಿತ್ರರು ಮಂಡಿಸುತ್ತಿರುವ ಬೇಡಿಕೆಗಳು ಸಂಪೂರ್ಣ


...TO BE OR NOT TO BE !!



ಅಸಂಬದ್ಧವಾಗಿದೆ. ಭಾರತ ಶ್ರೀಲಂಕಾ ವಿಷಯದಲ್ಲಿ ದೃಢ ನಿರ್ಧಾರ ಕೈಗೊಳ್ಳುವುದೆಂದರೆ ಸೈನ್ಯವನ್ನು ಕಳಿಸುವುದಲ್ಲ. ಆ ದೇಶದಲ್ಲಿ ಶಾಂತಿಯನ್ನು ಪುನರ್ ಸ್ಥಾಪಿಸಲು ನಮ್ಮ ಮಧ್ಯ ಪ್ರವೇಶ ಸಹಾಯಕವಾಗುತ್ತದೆ. ಭಾರತದಲ್ಲಿ ಎಲ್‌ಟಿಟಿಇ ಮೇಲೆ ಪುನಃ ಎರಡು ವರ್ಷ ನಿಷೇಧ ಹೇರಿರುವ ಈ ಸಂದರ್ಭದಲ್ಲಿ, ಮತ್ತು ಯುದ್ಧ ನಿರತರಾಗಿರುವ ಯಾವುದೇ ಪ್ರದೇಶದ ಜನತೆಗೆ ನಾವು ನೀಡುವ ಮಾನವೀಯತೆಯ ನೆರವು ಮಹತ್ತರ ಪಾತ್ರ ವಹಿಸುತ್ತದೆ.

ಆರಂಭದಲ್ಲಿ ಕೇಂದ್ರ ಸರ್ಕಾರವು ತನ್ನ ತಮಿಳುನಾಡಿನ ರಾಜಕೀಯ ಮಿತ್ರರ ಒತ್ತಡದಿಂದಾಗಿ - ಚಂಚಲತೆಯನ್ನು ಈ ವಿಷಯ ದಲ್ಲಿ ತೋರಿಸಿತು. ಮಾತ್ರವಲ್ಲ, ಶ್ರೀಲಂಕಾ ವಿಚಾರದಲ್ಲಿ ಪ್ರಧಾನಮಂತ್ರಿ ಮತ್ತು ವಿದೇಶಾಂಗ ಸಚಿವರ ಮಧ್ಯದಲ್ಲಿಯೇ ಭಿನ್ನಾಭಿಪ್ರಾಯಗಳು ಬಹಿರಂಗಗೊಂಡವು. ಆದರೆ ವಿರೋಧ ಪಕ್ಷಗಳ ಒತ್ತಾಯಕ್ಕೆ ಮಣಿದು ಪಾರ್ಲಿಮೆಂಟಿನಲ್ಲಿ ಶ್ರೀಲಂಕಾದ ಸಮಗ್ರತೆ ಕುರಿತಂತೆ ಭಾರತದ ಹೇಳಿಕೆಯನ್ನು ಸ್ಪಷ್ಟಪಡಿಸಬೇಕಾಗಿ ಬಂತು.

ಶ್ರೀಲಂಕಾದ ಸಮಗ್ರತೆ ವಿಷಯ ದಲ್ಲಿ ಎಲ್ಲಾ ಪಕ್ಷಗಳು ಸರ್ವಸಮ್ಮತ ಅಭಿಪ್ರಾಯಕ್ಕೆ ಬಂದರೂ ಆಡಳಿತ ದಲ್ಲಿ ಭಾಗಿಯಾಗಿರುವ ತಮಿಳುನಾಡಿನ ಡಿಎಂಕೆ, ಎಂಡಿಎಂಕೆ, ಪಿಎಂಕೆಗಳನ್ನು ತೀರ್ಮಾನಕ್ಕೆ ಬದ್ಧಗೊಳಿಸಲು ಶ್ರೀ ವಾಜಪೇಯಿಯವರ ಪ್ರಯತ್ನ ನಾಚಿಸುವಂತದ್ದು.



ಶ್ರೀಲಂಕಾ ವಿಷಯದಲ್ಲಿ ಭಾರತ ಸರ್ಕಾರ ತೆಗೆದುಕೊಳ್ಳ ಬೇಕಿರುವ ಸ್ಪಷ್ಟ ನಿಲುವು ಮಾತ್ರವೇ ಭಾರತದಪ್ರತಿಷ್ಠೆ ಯನ್ನು ವಿಶ್ವ ಸಮುದಾಯದ ಮಧ್ಯೆ ಉಳಿಸ ಬಲ್ಲದು.

ಶ್ರೀಲಂಕಾದಲ್ಲಿ 'ಪ್ರತ್ಯೇಕ ಈಳಂ'ಗಾಗಿ ಹೋರಾಡುತ್ತಿರುವ ಎಲ್‌ಟಿಟಿಇ ಮತ್ತು ಕಾಶ್ಮೀರ ಪ್ರತ್ಯೇಕತೆಗಾಗಿ ಹೋರಾಡುತ್ತಿರುವ ಉಗ್ರಗಾಮಿಗಳೂ ಪರಸ್ಪರ ಹೊಂದಿರುವ ಗುಪ್ತ ಒಪ್ಪಂದಗಳು ಬಹಿರಂಗಗೊಂಡಿರುವುದು, ಆತಂಕದ ವಿಷಯವೇ ಆಗಿದೆ.

ಅಮೆರಿಕನ್ ಸಾಮ್ರಾಜ್ಯಶಾಹಿ ತನ್ನ ಯಜಮಾನಿಕೆಯನ್ನು ವಿಶ್ವದ ಮೇಲೇರಲು ಕಾದುಕುಳಿತಿರುವ ಸಮಯದಲ್ಲೇ, ಶ್ರೀಲಂಕಾ ಸರ್ಕಾರವೂ ಕೂಡಾ ಪ್ರತ್ಯೇಕತೆಯನ್ನು ಸೋಲಿಸಲು ಇತರೆ ದೇಶಗಳು ಸಹಾಯ ಹಸ್ತ ನೀಡಬೇಕೆಂದು ಕೇಳುತ್ತಿರುವುದು ಕಾಕತಾಳೀಯವೂ ಆಗಿದೆ. ಶ್ರೀಲಂಕಾ ದೇಶದ ಇಂತಹ ಬೇಡಿಕೆಯು ಅಮೆರಿಕನ್ ಸಾಮ್ರಾಜ್ಯಶಾಹಿಗಳಿಗೆ 'ರತ್ನಗಂಬಳಿ ಹಾಸಿ ಸ್ವಾಗತ ನೀಡಿದಂತಾಗುತ್ತದೆ. ಜಗತ್ತಿನ ಹಲವಾರು ದೇಶಗಳಲ್ಲಿ ಸಹಾಯ ನೀಡುವ ಹೆಸರಲ್ಲಿ ಮಧ್ಯ ಪ್ರವೇಶಿಸಿದ ಸಾಮ್ರಾಜ್ಯಶಾಹಿಗಳು ಇಡೀ ದೇಶಗಳನ್ನು ನಾಶಪಡಿಸಿರುವ ಉದಾಹರಣೆಗಳು ಸಾಕಷ್ಟಿರುವಾಗ, ಶ್ರೀಲಂಕಾ ಆ ಮೂಲಕ ಏಷ್ಯಾ ಉಪಖಂಡ ತಾನಾಗಿಯೇ ಸಾಮ್ರಾಜ್ಯಶಾಹಿಗಳಿಗೆ ಶರಣಾಗುತ್ತಿರುವುದು ಅಪಾಯದ ಸಂಕೇತವಲ್ಲದೆ ಬೇರೇನೂ ಅಲ್ಲ.

ಶ್ರೀಲಂಕಾ ಛಿದ್ರಕಾರಿ ದಾಳಿಗಳಿಂದ ತತ್ತರಿಸುತ್ತಿರುವಾಗ ಮತ್ತು ನೆರೆ ರಾಷ್ಟ್ರವಾದ ಭಾರತ ದಲ್ಲಿರುವ ಎನ್‌ಡಿಎ ಸರ್ಕಾರ ಶ್ರೀಲಂಕಾ ಕುರಿತಂತೆ ತನ್ನ ಸ್ಪಷ್ಟತೆಯನ್ನು ಹೊಂದಲು ಹೆಣಗಾಡುತ್ತಿರುವಾಗ, ಹೊರ ದೇಶಗಳ ಬೆಂಬಲ ಪಡೆಯುವುದು ಬಿಟ್ಟು ಬೇರೆ ಮಾರ್ಗವೇ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಇಸ್ರೇಲ್, ಅಮೆರಿಕದ ಕೈಗೊಂಬೆಯಾದರೂ ಆ ರಾಷ್ಟ್ರದಿಂದ ಶಸ್ತ್ರಾಸ್ತ್ರಗಳ ಕುರಿತಂತೆ, ರಾಯಭಾರಿ ಸಂಬಂಧಗಳು ಕುರಿತಂತೆ ಮಾತುಕತೆಗಳು ನಡೆದವು.

ಆದರೆ ಶ್ರೀಲಂಕಾಕ್ಕೆ ಇಸ್ರೇಲ್ ಮಿಲಿಟರಿ ಮತ್ತು ಇತರೆ ನೆರವು ನೀಡಲು ಮುಂದಾಗಿದ್ದು, ಅಮೆರಿಕನ್ ಸಾಮ್ರಾಜ್ಯಶಾಹಿಯು ಒಪ್ಪಿಗೆ ನೀಡಿದ ಬಳಿಕವೇ ಎಂಬುದನ್ನು ಎಲ್ಲರೂ ತಿಳಿದುಕೊಳ್ಳ ಬೇಕಾದ ಸಂಗತಿ. ಇದರಲ್ಲಿ ಆಶ್ಚರ್ಯವೇನಿಲ್ಲ.

ಯಾಕೆಂದರೆ ಸಾಮ್ರಾಜ್ಯಶಾಹಿಗಳು ಮೊದಲಿನಿಂದಲೂ ದಕ್ಷಿಣ ಏಶ್ಯಾದಲ್ಲಿ ಮೂಗು ತೂರಿಸಲು ಪ್ರಯತ್ನಿಸಿ ವಿಫಲರಾಗುತ್ತಿದ್ದರು. ಶ್ರೀಲಂಕಾ ಹಿಂದು ಮಹಾಸಾಗರದಲ್ಲಿರುವ ದಕ್ಷಿಣ ಏಶ್ಯಾದ ಆಯಕಟ್ಟಿನ ದ್ವೀಪ. ಸಾಮ್ರಾಜ್ಯಶಾಹಿಗಳು ತನ್ನ ಕಾರ್ಯತಂತ್ರಗಳನ್ನು ಜಾರಿಗೊಳಿಸಲು ಇಂತಹ ಸ್ಥಳಕ್ಕಾಗಿ ಹಲವು ದಶಕಗಳಿಂದಲೂ ಹೊಂಚು ಹಾಕುತ್ತಿದ್ದರು. ಅಂತಹ ಅವಕಾಶ ತಾನಾಗಿಯೇ ಲಭಿಸಿದಂತಾಗಿದೆ.

ನೆರೆಯ ರಾಷ್ಟ್ರವಾದ ಭಾರತ, ಶ್ರೀಲಂಕಾದ ಸಮಗ್ರತೆಗೆ ಅಪಾಯ ಬಂದೊದಗಿದ ಸಂದರ್ಭದಲ್ಲಿ ಇಡೀ ದಕ್ಷಿಣ ಏಷ್ಯಾ ರಾಷ್ಟ್ರಗಳ ರಕ್ಷಣೆಯ ನೇತಾರನಾಗಿ ನಿಂತು ತನ್ನ ಪಾತ್ರವನ್ನು ವಹಿಸಬೇಕಾಗಿತ್ತು. ಅದನ್ನು ನಿರ್ವಹಿಸಲು ಎನ್‌ಡಿಎ ಸರ್ಕಾರ ವಿಫಲವಾಗಿರುವ ಕಾರಣ ಸಾಮ್ರಾಜ್ಯಶಾಹಿಗಳು ನುಸುಳಲು ಅವಕಾಶ

ಶ್ರೀಲಂಕಾದ ಜನಸಂಖ್ಯೆ

ಸಿಂಹಳೀಯರು	1.10 ಕೋಟಿ
ಶ್ರೀಲಂಕಾ ತಮಿಳರು	18.7 ಲಕ್ಷ
ಶ್ರೀಲಂಕಾ ಮೂಲದವರು	10.6 ಲಕ್ಷ
ಭಾರತೀಯ ತಮಿಳರು	8.3 ಲಕ್ಷ
ಇತರರು	67 ಸಾವಿರ

ನೀಡಿದಂತಾಗಿದೆ.

ಪ್ರಸ್ತುತ ಶ್ರೀಲಂಕಾದ ಬೆಳವಣಿಗೆಗಳು ಏನೇ ಆದರೂ ಭಾರತ ಸರ್ಕಾರ ತನ್ನ ರಾಷ್ಟ್ರೀಯ ಹಿತಾಸಕ್ತಿ ಕಾಪಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳದೆ ಕುಳಿತಿರುವುದು, ದೇಶದ ಐಕ್ಯತೆ ಮತ್ತು ರಕ್ಷಣೆಗೆ ಅಪಾಯಕಾರಿಯಾದುದು.

ಇಂತಹ ಗಂಭೀರ ಸನ್ನಿವೇಶದಲ್ಲಿ ಶ್ರೀಲಂಕಾವು ತನ್ನ ದೇಶದೊಳಗಿನ ಛಿದ್ರಕಾರಿ ಹೋರಾಟವನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು ಮತ್ತು ಅಲ್ಲಿನ ತಮಿಳರ ಹಕ್ಕುಗಳ ರಕ್ಷಣೆಗೆ ಮುಂದಾಗಿ ಜನಾಂಗೀಯ ಸಮಸ್ಯೆಯನ್ನು ತನ್ನ ರಾಷ್ಟ್ರೀಯ ಚೌಕಟ್ಟಿನೊಳಗೆ ಬಗೆಹರಿಸಿಕೊಳ್ಳಲು ಭಾರತ ಅಗತ್ಯ ಎಲ್ಲಾ ನೆರವನ್ನು ನೀಡಬೇಕಿದೆ. ಭಾರತ ಸರ್ಕಾರದ ಈ ಕ್ರಮಗಳು ಮಾತ್ರವೇ ಸಾಮ್ರಾಜ್ಯಶಾಹಿಗಳ ತಂತ್ರಗಳನ್ನು ಈ ಉಪಖಂಡದಲ್ಲಿ ಹಿಮ್ಮೆಟ್ಟಿಸಲು ಸಾಧ್ಯ. ○

ಸಾಮ್ರಾಜ್ಯಶಾಹಿಗಳ ಕುತಂತ್ರ ವಿಫಲಗೊಳಿಸಿ

ಜಾಗತಿಕ ಪ್ರಾಬಲ್ಯಗಳಿಸುವ ಸಾಮ್ರಾಜ್ಯ ಶಾಹಿಗಳದ್ದು ಶ್ರೀಲಂಕಾ ಸಮಸ್ಯೆ ಉಲ್ಬಣ ಗೊಳ್ಳುವಲ್ಲಿ ಒಂದು ಪ್ರಮುಖ ಪಾತ್ರ. ಶ್ರೀಲಂಕಾದಂತಹ ನವವಿಮೋಚಿತ ಸಣ್ಣ ದೇಶಗಳನ್ನು ತಮ್ಮ ಕೈಗೊಂಬೆಯನ್ನಾಗಿಸಿ ಕೊಂಡು ಭಾರತವನ್ನು ಎಲ್ಲಾ ಕಡೆಗಳಿಂದ ಸುತ್ತುವರಿಯುವುದು ಸಾಮ್ರಾಜ್ಯಶಾಹಿಗಳ ಪಿತೂರಿಯ ಒಂದು ಮುಖ್ಯ ಅಂಗ. ಜಯವರ್ಧನೆ ಸರ್ಕಾರ ಅದಕ್ಕೆ ಸಂಪೂರ್ಣ ನೆರವು ಅವಕಾಶ ನೀಡಿದೆ. ಭಾರತ ಸಮಾಜವಾದಿ ದೇಶಗಳು ಮತ್ತು ಶ್ರೀಲಂಕಾದ ಎಡ ಪಕ್ಷಗಳು ಈ ಸರ್ಕಾರದ ಪ್ರಥಮ ವೈರಿಗಳೆಂದರೆ ಇತರ ದೇಶಗಳ ಸ್ವಾತಂತ್ರ ಹರಣ ಮಾಡುವ ಸಾಮ್ರಾಜ್ಯಶಾಹಿಗಳು ಅದರ ಮಿತ್ರರು ಸಾಮ್ರಾಜ್ಯ ಶಾಹಿಯ ವಿರುದ್ಧ ಅಲಿಪ್ತ ದೇಶಗಳೆಲ್ಲಾ ಒಂದಾಗಬೇಕೆಂಬ ಅಲಿಪ್ತ ಆಂದೋಲನದ ಕರೆಯಲ್ಲಿ ತಾನೇ ಸ್ವತಃ ಭಾಗಿಯಾಗಿದ್ದರೂ ಅದನ್ನು ಮೂಲೆಗೆ ತಳ್ಳಿ, ತನ್ನದೇ ದೇಶದ ಒಂದು ಜನ ವಿಭಾಗದ ವಿರುದ್ಧ ಅಮೆರಿಕನ್ ಬ್ರಿಟಿಶ್ ಹಾಗೂ ಇಸ್ರೇಲಿ ಹಾಗೂ ಪಾಕಿಸ್ತಾನಿ ಬಾಡಿಗೆ ಸೈನಿಕರ ನೆರವು ಪಡೆದದ್ದು, ಈ ಬಾಡಿಗೆ ಸೈನಿಕರು ಸ್ವತಃ ಜಯವರ್ಧನೆಯವರೇ 'ಅತ್ಯಂತ ಅಶಿಸ್ತಿನ' ಪಡೆಯೆಂದು ಕರೆದ ಶ್ರೀಲಂಕಾ ಪಡೆಗೆ ಗೆರಿಲ್ಲಾ-ವಿರೋಧಿ ಕಾರ್ಯಾಚರಣೆಗಳ ತರಬೇತಿ ನೀಡಿ ಅದನ್ನೊಂದು ಅತ್ಯಂತ ಅಮಾನುಷ ಪಡೆಯಾಗಿ ಪರಿವರ್ತಿಸಿ ಸಾವಿರಾರು ಅಮಾಯಕ ತಮಿಳು ನಾಗರೀಕರ ಕೊಲೆ, ಸುಲಿಗೆ, ಅತ್ಯಾಚಾರ ನಡೆಸಿರುವುದು ಈಗ ಜಗಜ್ಜಾಹೀರಾಗಿರುವ ಸಂಗತಿ. ಭಾರತೀಯ ವಾಯುಪಡೆಗಳು ಜಾಫ್ನಾದ ಮೇಲೆ ಪರಿಹಾರ ಸಾಮಗ್ರಿ ಇಳಿಸಿದ್ದು ಶ್ರೀಲಂಕಾದ ಸಾರ್ವಭೌಮತ್ವದ ಉಲ್ಲಂಘನೆ ಎಂದು ಖಂಡಿಸಿರುವ ಶ್ರೀಲಂಕಾದ ರಾಜಕಾರಣಿಗಳಿಗೆ ತಮ್ಮದೇ ದೇಶದ ಜನರ ಮೇಲೆ, ವಿದೇಶಗಳ,ಅದರಲ್ಲೂ ಸಾಮ್ರಾಜ್ಯಶಾಹಿ ದೇಶಗಳ ಬಾಡಿಗೆ ಪಡೆಗಳನ್ನು ಹರಿಹಾಯ ಬಿಡುವುದು ತಮ್ಮ ದೇಶದ ಸ್ವಾತಂತ್ರ್ಯದ, ಸಾರ್ವಭೌಮದ ಉಲ್ಲಂಘನೆಯೆಂದು ಅದೇಕೋ ಅನ್ನಿಸುತ್ತಿಲ್ಲ.

ಇಸ್ರೇಲ್‌ನೊಂದಿಗೆ ಶ್ರೀಲಂಕಾ ಸರ್ಕಾರದ ನೇರ ರಾಜತಾಂತ್ರಿಕ ಸಂಬಂಧವಿಲ್ಲದ್ದರಿಂದ ಕೊಲಂಬೋದ ತನ್ನ ದೂತಾವಾಸದಲ್ಲಿ ಇಸ್ರೇಲಿ ವಿಭಾಗ ತೆರೆದು ಜಯವರ್ಧನೆಗೆ ನೆರವಾದ ಸಾಮ್ರಾಜ್ಯ ಶಾಹಿಗಳು ಸದ್ಯಕ್ಕಂತೂ, ಶ್ರೀಲಂಕಾದ ಜನತೆಯನ್ನು ವಿಭಜಿಸುವಲ್ಲಿ, ಪ್ರಜಾಪ್ರಭುತ್ವ ಚಳುವಳಿಯನ್ನು ದಾರಿ ತಪ್ಪಿಸುವಲ್ಲಿ, ಭಾರತದ ಬಗ್ಗೆ ತಪ್ಪು ಅಭಿಪ್ರಾಯ ಹರಡುವಲ್ಲಿ ಯಶಸ್ವಿಯಾಗಿದ್ದಾರೆ. ಜಯವರ್ಧನೆ ಸರ್ಕಾರದಿಂದ ಒಂದಾದ ಮೇಲೊಂದರಂತೆ ರಿಯಾಯ್ತಿ ಪಡೆಯುತ್ತಿದ್ದಾರೆ. ಈಗಾಗಲೇ ತಮ್ಮ ಅಪಪ್ರಚಾರಕ್ಕೆ 'ವಾಯ್ಸ್ ಆಫ್ ಅಮೆರಿಕಾ'ದ ಒಂದು ಪ್ರಬಲ ಪ್ರಸಾರಣ ಕೇಂದ್ರ ಸ್ಥಾಪಿಸಿದ್ದಾರೆ. ಅಮೆರಿಕನ್ ನಾವಿಕ ಪಡೆಗಳಿಗೆ ತಂಗುವ ಸೌಲಭ್ಯ ಪಡೆದಿದ್ದಾರೆ. ಈಗ ತಮಿಳರು ಬಹುಸಂಖ್ಯೆಯಲ್ಲಿರುವ ಟ್ರಿಂಕೋಮಾಲಿಯಲ್ಲಿ ನಾವಿಕ ನೆಲೆ ಪಡೆಯಲು ಸರ್ವ ಪ್ರಯತ್ನ ನಡೆಸುತ್ತಿದ್ದಾರೆ.

ಅಮೆರಿಕ, ಇಸ್ರೆಲ್‌ಗಳು ಅಂದು ಆಳುತ್ತಿದ್ದ ಜಯವರ್ಧನೆ ಸರ್ಕಾರಕ್ಕೆ ಶಸ್ತ್ರಾಸ್ತ್ರಗಳನ್ನು ನೀಡಿ ತಮಿಳರ ಮೇಲಿನ ಹಲ್ಲೆಯನ್ನು ಪ್ರೋತ್ಸಾಹಿಸಿ ಸಮಸ್ಯೆಯನ್ನು ಕೆರಳಿಸಿತ್ತು. ಅದೇ ಶಕ್ತಿಗಳು ಎಲ್‌ಟಿಟಿಇಗಳಿಗೂ ಪ್ರೋತ್ಸಾಹಿಸುತ್ತಿದ್ದಾರೆ. ಈ ಇಬ್ಬಗೆಯ ಆಟ ಯಾತಕ್ಕಾಗಿ?

ಅಮೆರಿಕನ್ ಬೇಹುಗಾರರು ಎರಡೂ ಕಡೆಯಿಂದ ಸಕ್ರಿಯರಾಗಿದ್ದಾರೆ. ಎಲ್.ಟಿ.ಟಿ.ಇ. ನಲ್ಲೂ ಒಂದು ಸಿ.ಐ.ಎ. ಗುಂಪು ಸಕ್ರಿಯವಾಗಿದೆ. ಯಾವುದೇ ಒಪ್ಪಂದವಾಗದಂತೆ ಅಮೆರಿಕನ್ ಬೇಹುಗಾರರು ನೋಡಿಕೊಳ್ಳುತ್ತಿದ್ದಾರೆ.

ಭಾರತದ ರಾಜತಾಂತ್ರಿಕತೆ ಕೂಡಾ ಶ್ರೀಲಂಕಾದ ಸಮಗ್ರತೆ, ಸಾರ್ವಭೌಮತೆಗೆ ತಾನು ಬದ್ಧನಾಗಿದ್ದೇನೆ ಎಂದು ಶ್ರೀಲಂಕಾದ ಜನತೆಗೆ ಮನವರಿಕೆ ಮೂಡಿಸುವಲ್ಲಿ ತನ್ನ ದೌರ್ಬಲ್ಯ ತೋರ್ಪಡಿಸಿದೆ. ಅಮೆರಿಕ ಹಾಗೂ ಭಾರತ ಎರಡರ ನೀತಿಯೂ ಶ್ರೀಲಂಕಾದ ವಿಷಯದಲ್ಲಿ ಒಂದೇ ಎಂದು ಅಮೆರಿಕಾ ಹೇಳುತ್ತಿದೆ. ಇದು ನಿಜವಾಗಿದ್ದರೆ ಆತಂಕಕಾರಿ.

ಜಯವರ್ಧನೆ ಸರ್ಕಾರ ತನ್ನ ಮಿಲಿಟರಿ ಕಾರ್ಯಾಚರಣೆ ನಿಲ್ಲಿಸಿ, ಪ್ರತಿಯಾಗಿ ತಮಿಳು ಸಮರಶೀಲ ಸಂಘಟನೆಗಳು ತಮ್ಮ ಪ್ರತೀಕಾರ ಕಾರ್ಯಾಚರಣೆ ನಿಲ್ಲಿಸಿ ಡಿಸೆಂಬರ್ 19 ರ ಪ್ರಸ್ತಾಪಗಳ ಆಧಾರದ ಮೇಲೆ ಮಾತುಕತೆ ಮುಂದುವರಿಸಿ ಶ್ರೀಲಂಕಾದ ಸಮಗ್ರತೆಯ ಚೌಕಟ್ಟಿನೊಳಗೆ ತಮಿಳರ ನ್ಯಾಯಬದ್ಧ ಆಕಾಂಕ್ಷೆಗಳನ್ನು ಈಡೇರಿಸುವ ರಾಜಕೀಯ ಪರಿಹಾರಕ್ಕೆ ಪ್ರಯತ್ನಿಸಬೇಕೆಂದು ಈ ಎಲ್ಲಾ ಶಕ್ತಿಗಳು ಒತ್ತಾಯಿಸಬೇಕು.

ವಿಶ್ವರಂಗ ದಿನಾಂಕ-ಜೂನ್ 14, 1987

ಪ.ಬಂಗಾಳದಲ್ಲಿ ಪಂಚಾಯತ್ ಒಂದು ಅನುಭವ

ಡಾ|| ಸೂರ್ಯಕಾಂತ್ ಮಿಶ್ರ
ಪ.ಬಂಗಾಳದ ಪಂಚಾಯತ್ ರಾಜ್ಯ, ಗ್ರಾಮೀಣ ಅಭಿವೃದ್ಧಿ ಸಚಿವರು

ದೇಶ-ವಿದೇಶಗಳ ಜನರನ್ನು ಆಕರ್ಷಿಸಿರುವ ಪ.ಬಂಗಾಳದ ಪಂಚಾಯತ್ ವ್ಯವಸ್ಥೆ ಬಹುಮುಖ್ಯವಾಗಿ ಗ್ರಾಮೀಣದ ಆರ್ಥಿಕ, ಸಾಮಾಜಿಕ ಬದುಕನ್ನು ಬದಲಾಯಿಸಿದೆ. ಹಲವಾರು ಕ್ರಮಗಳು ಹಾಗೂ ಮುಂಚೂಣಿ ಕ್ರಿಯೆಗಳು 'ಅಳಿಸುತ್ತಿದ್ದ ಜೀವನ'ವನ್ನು ಪುನಶ್ಚೇತನಗೊಳಿಸಿದೆ.

1952 ರಲ್ಲಿ ಬಹುತೇಕ ಎಲ್ಲಾ ರಾಜ್ಯಗಳಲ್ಲಿಯೂ ಪಂಚಾಯತ್ ಕಾನೂನು ಅಸ್ತಿತ್ವಕ್ಕೆ ಬಂತು. ಆದರೆ ಸ್ವಾತಂತ್ರ್ಯಪೂರ್ವದ ಪಂಚಾಯತ್ ವ್ಯವಸ್ಥೆಯೇ 1958 ರವರೆಗೂ ಬಂಗಾಳದಲ್ಲಿ ಮುಂದುವರಿಯಿತು. 1953 ರಲ್ಲಿ ಜಮೀನ್ದಾರಿ ಪದ್ಧತಿ ರದ್ದತಿ ಕಾನೂನು ಬಂದರೂ ಪಂಚಾಯತ್ ಬದಲಾಗಲಿಲ್ಲ. 1955 ರಲ್ಲಿ ಭೂಸುಧಾರಣಾ ಕಾನೂನು ತಂದರೂ 1958 ರವರೆಗೂ ಜಾರಿಯಾಗಲಿಲ್ಲ. ಆಗಿನ 'ಸಂಯುಕ್ತ ಮಂಡಳಿ(ಯೂನಿಯನ್ ಬೋರ್ಡ್) ಆಯ್ಕೆಗೆ ಮತದಾರರು ಯಾರೆಂದರೆ ಕೇವಲ ತೆರಿಗೆ ಕಟ್ಟುವವರು ಮಾತ್ರ. ಇದರಿಂದ 1963 ರವರೆಗೂ 1957 ರ ಕಾಯ್ದೆಯಂತೆ ಶೇ 50 ರಷ್ಟು ಹಳ್ಳಿಗಳು, ಮತ್ತು ಶೇ 40 ರಷ್ಟು ಗ್ರಾಮೀಣ ಜನತೆ ಪಂಚಾಯತ್ ವ್ಯವಸ್ಥೆಯಿಂದ ದೂರವೇ ಉಳಿಯುತ್ತಿದ್ದರು. 1963 ರಲ್ಲಿ ಜಿಲ್ಲಾ ಪರಿಷತ್ ರಚನೆಯಾಯಿತು. ಎರಡು ಕೆಳಹಂತದ ಮತ್ತು ಎರಡು ಮೇಲ್ ಹಂತದ ವ್ಯವಸ್ಥೆ ಇದಾಗಿತ್ತು. ಈ ಮೇಲಿನ ಎರಡು ಹಂತ - ಬ್ಲಾಕ್ ಹಂತದ ಅಂಚಲಿಕ್ ಪರಿಷತ್ ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪರಿಷದ್ ಸಹ ಹೊಂದಿತ್ತು. ಅಂದರೆ 4 ಹಂತಗಳ ವ್ಯವಸ್ಥೆ. ಆದಾಗ್ಯೂ ಎಲ್ಲರಿಗೂ ಸಾರ್ವತ್ರಿಕ ಮತದಾನದ ಹಕ್ಕು ಇರಲಿಲ್ಲ.

1967-69 ರ ಸಂಯುಕ್ತರಂಗದ ಸಂಕ್ಷಿಪ್ತ ಆಡಳಿತಾವಧಿಯಲ್ಲಿ ಅಂದುಕೊಂಡಿದ್ದನ್ನು ಮಾಡಲಾಗದಿದ್ದರೂ ಬದಲಾವಣೆಯ ತನ್ನ ದೃಷ್ಟಿಯನ್ನು ಏನೆಂದು ತಿಳಿಸಿತು. 1972 ರ ಮೋಸದ ಚುನಾವಣೆ ನಂತರ 1997 ರ ಆಗಸ್ಟ್ 30 ರಂದು ಪಂಚಾಯತ್ ಸಚಿವ ಸುಬ್ರತೋ ಮುಖರ್ಜಿಯವರು ಪಂಚಾಯತ್ ಕಾಯ್ದೆ ಮಂಡಿಸಿದರು. ಕೆಲವು ಸಣ್ಣಪುಟ್ಟ ಬದಲಾವಣೆ ಹೊಂದಿ(ಗ್ಯಾನ್‌ಸಿಂಗ್ ಸಿತಂಪಾಲ್‌ರ ಸಲಹೆಗಳಲ್ಲಿ) ಅಕ್ಟೋಬರ್ 31 ಕ್ಕೆ ಅನುಮೋದಿಸಲಾಯಿತು.

1978 ರಲ್ಲಿ ಅಧಿಕಾರಕ್ಕೇರಿದ ಎಡರಂಗ ಸರ್ಕಾರದ ಅವಧಿಯಲ್ಲಿ ಪಂಚಾಯತ್ ಮಸೂದೆಯನ್ನು ಜನಪರವಾಗಿ ಬದಲಾಯಿಸಲು ಹಲವಾರು ಕ್ರಮ ಅನುಸರಿಸಲಾಯಿತು. ಒಟ್ಟು 19 ಬಾರಿ ತಿದ್ದುಪಡಿಗಳನ್ನು ತರಲಾಯಿತು. ಮೂರು ಹಂತಗಳ ಪಂಚಾಯತ್ ಚುನಾವಣೆ ಪದ್ಧತಿ ಮತ್ತು ಪ್ರಾಮುಖ್ಯವಾಗಿ ಎಲ್ಲರಿಗೂ ಮತದಾನ ಹಕ್ಕನ್ನು ನೀಡಲಾಯಿತು. ಅಂದಿನಿಂದ ಇಂದಿನವರೆಗೂ ನಿರಂತರವಾಗಿ 5 ವರ್ಷಕ್ಕೊಮ್ಮೆ ಚುನಾವಣೆಗಳು ನಡೆಯುತ್ತಲೇ ಬಂದಿವೆ. ಜನತೆ ವಿಶಾಲವಾಗಿ ತಮ್ಮ ಪ್ರತಿನಿಧಿಗಳನ್ನು ಆರಿಸುತ್ತಾ ಬಂದಿದ್ದಾರೆ. ಇನ್ನೊಂದು ಗಮನಾರ್ಹವಾದ ವಿಷಯ - ಎಲ್ಲ ಹಂತದ ಪಂಚಾಯತ್‌ಗಳಲ್ಲಿ ಮಹಿಳೆಯರ ಸ್ಥಾನ ಕಡ್ಡಾಯಗೊಳಿಸಿದ್ದು.


ಕಾಲಕಾಲಕ್ಕೆ ತರಲಾದ ಪಂಚಾಯತ್ ತಿದ್ದುಪಡಿಯಲ್ಲಿ ಸಂಪನ್ಮೂಲಗಳ ವಿಕೇಂದ್ರೀಕರಣ, ಯೋಜನೆ ರೂಪಿಸುವ ಅಧಿಕಾರ, ಪಂಚಾಯತ್ ಸಂಸ್ಥೆಗೆ ಚುನಾಯಿತ-ನಾಗರೀಕ ಆಡಳಿತ ಹೊಂದುವ ಅಧಿಕಾರ(ಅಧಿಕಾರಶಾಹಿ ಹಿಡಿತದ ಬದಲಿ), ಇವು ವಿಶೇಷವಾದವು. ಇನ್ನೊಂದು ವಿಶೇಷ ಅಂಶವೆಂದರೆ ಈ ಚುನಾವಣೆಗಳಲ್ಲಿ ಪ್ರತಿಯೊಂದು ರಾಜಕೀಯ ಪಕ್ಷಗಳು ಹಾಗೂ ಅವರ ಚಿಹ್ನೆ ಆಧರಿಸಿಯೇ ಚುನಾವಣಾ ಸ್ಪರ್ಧೆ, ಆಯ್ಕೆ ಆಗುವುದು. ಇದಕ್ಕೆ 1978 ರಿಂದಲೂ ಕಾಂಗ್ರೆಸ್ ಪಕ್ಷವು ರಾಜಕೀಯ ರಹಿತ ಚುನಾವಣೆ ಮಾಡಬೇಕೆಂದು ತೀವ್ರವಾದ ವಿರೋಧ ಒಡ್ಡುತ್ತಲೇ ಬರುತ್ತಿದೆ.

ಜನಸಮೂಹದ ಪೂರ್ಣ ಪಾಲ್ಗೊಳ್ಳುವಿಕೆ

ಪ್ರಜಾಸತ್ತಾತ್ಮಕ, ಅಧಿಕಾರದ ವಿಕೇಂದ್ರೀಕರಣ ಪಂಚಾಯತ್ ವ್ಯವಸ್ಥೆಯ ಯಶಸ್ಸಿನ ಮುಖ್ಯ ಅಂಶ, ಜನತೆಯ ಪೂರ್ಣ ಪಾಲ್ಗೊಳ್ಳುವಿಕೆಯಾಗಿದೆ. ಚುನಾವಣಾ ಸಂದರ್ಭದಲ್ಲಿ ತೀಕ್ಷ್ಣವಾದ ರಾಜಕೀಯ ಹೋರಾಟವು ಜನತೆಯನ್ನು ಪಾಲ್ಗೊಳಿಸಿ, ಮತದಾನದಲ್ಲಿಯೂ ಅಧಿಕವಾಗಿ ಭಾಗವಹಿಸುತ್ತಿದೆ. ಪ.ಬಂಗಾಳದ ಈ ಚುನಾವಣೆಗಳು ನಿಜಕ್ಕೂ ಅದ್ಭುತವಾಗಿವೆ.

ಅನು: ಪಾಲ್ ಮತ್ತು ಎಸ್.ವೈ.ಗುರುಶಾಂತ್

ಬಹುತೇಕವಾಗಿ ದೇಶದ ಎಲ್ಲಾ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳಲ್ಲಿ ಜನರ ಮತದಾನದ ಪ್ರಮಾಣ ಅತ್ಯಂತ ನೀರಸ ಎಂದೆಲ್ಲಾ ಪ್ರತಿಬಾರಿ ಸುದ್ದಿ ಓದುತ್ತೇವೆ. ಆದರೆ ಬಂಗಾಳದ ಪಂಚಾಯತ್‌ನ ಮೂರು ಹಂತಗಳಲ್ಲಿಯೂ ಜನರ ಪಾಲ್ಗೊಳ್ಳುವಿಕೆ ಚೇತೋಹಾರಿ. ಶೇ 78 ರಿಂದ 92 ರವರೆಗೂ ಮತದಾನವಾಗಿವೆ.



ಒಂದು ಗ್ರಾಮ ಸಭೆ

ಅರಣ್ಯ ರಕ್ಷಣೆ ಮತ್ತು ಪಂಚಾಯತ್‌ಗಳು

ಹಸಿರು ಪ್ರದೇಶ ಹೆಚ್ಚಳ ಹಾಗೂ ಅದರ ರಕ್ಷಣೆಯಲ್ಲಿ ಪಂಚಾಯತ್‌ಗಳ ಪಾತ್ರ ಮಹತ್ವದ್ದು. ರಾಜ್ಯದಲ್ಲಿ 3289 ಅರಣ್ಯ ರಕ್ಷಣಾ ಸಮಿತಿಗಳಿದ್ದು, 4493 ಚ.ಕಿಮಿ. ಅರಣ್ಯವನ್ನು ಪೋಷಿಸುತ್ತಿವೆ. ಈ ಕಾರ್ಯದಲ್ಲಿ 3 ಲಕ್ಷದ 71 ಸಾವಿರ ಕುಟುಂಬಗಳು ತಮ್ಮನ್ನು ತೊಡಗಿಸಿಕೊಂಡಿವೆ. ಇವರು ಪೋಷಿಸಿದ ಮರಗಳ ಕಾಲು ಭಾಗ ಆದಾಯ ಇವರಿಗೆ

ಪುಟ 7 ಕ್ಕೆ

ಬಂಗಾಳದ ಪಂಚಾಯತ್‌ಗಳು ಭಿನ್ನ

"................. ಭಾರತದ ಒಟ್ಟು ರಾಜಕೀಯ ಪರಂಪರೆಗೆ ಹೋಲಿಸಿದರೆ ಪ.ಬಂಗಾಳದ ಪಂಚಾಯತ್‌ಗಳು ಭಿನ್ನ. ಪ.ಬಂಗಾಳದಲ್ಲಿ ಪಂಚಾಯತ್‌ಗಳು ಜಮೀನ್ದಾರರ ಅಥವಾ ಶ್ರೀಮಂತ ರೈತರ ಹಿಡತದಿಂದ ಮುಕ್ತವಾಗಿವೆ.

ನಾನು ಅಧ್ಯಯನ ನಡೆಸಿದ ಜಿಲ್ಲೆಗಳ ಪೈಕಿ ಬರ್ದಮಾನ್ ಮತ್ತು ಮಿಡ್ನಾಪುರ ಜಿಲ್ಲೆಗಳಲ್ಲಿ 6019. ಪಂಚಾಯತ್‌ಗಳ ಪೈಕಿ ಪಂಚಾಯತ್ ಸದಸ್ಯರು ರೈತಾಪಿ ವಿಭಾಗವಲ್ಲದವರು.(ಪ್ರಾಥಮಿಕ ಶಿಕ್ಷಕರು, ಸಾಮಾಜಿಕ ಕಾರ್ಯಕರ್ತರು). ಉಳಿದವರು ಕನಿಷ್ಟ 5 ಎಕರೆಗಿಂತ ಕಡಿಮೆ ಭೂ ಹಿಡುವಳಿ ಹೊಂದಿದ ರೈತಾಪಿ ಸಮುದಾಯ(ಶೇ 77 ರಷ್ಟು), ಉಳಿದ ಶೇ 8.3 ರಲ್ಲಿ ಸಹಜವಾಗಿ ಕೃಷಿಕೂಲಿಕಾರರು ಮತ್ತು ಬಡ ರೈತರು ಇದ್ದಾರೆ.

- **ಪ್ರೊ. ಅತುಲ್ ಕೋಹ್ಲಿ**
ಅಮೆರಿಕನ್ ವಿಶ್ವವಿದ್ಯಾಲಯ, 1983

ಪಂಚಾಯತ್‌ಗಳಲ್ಲಿ ಚುನಾಯಿತ ಸದಸ್ಯರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿ-ಗತಿ

S.C ಸದಸ್ಯರು	S.T ಸದಸ್ಯರು	ಮಹಿಳೆ ರಹಿತರು	ಭೂ ಕಮ್ಮಿ ಇರುವವರು	2 ಎಕರೆಗಿಂತ	ಗೇಣಿದಾರರು	ಪದವೀಧರರು	ಮಾಧ್ಯಮಿಕ	ಪ್ರಾಥಮಿಕ
ಗ್ರಾಮಪಂಚಾಯತ್								
32.0705.17	34.6	32.9	80.6	2.98	10.5	42.73	27.0	
ತಾಲ್ಲೂಕು ಪಂಚಾಯತ್ ಸಮಿತಿ								
32.11	4.86	33.69	31.47	60.75	2.50	17.30	50.09	15.87
ಜಿಲ್ಲಾಪಂಚಾಯತ್								
31.4	5.76	34.54	30.6	57.57	02.12	30.6	47.27	5.76

ಪ.ಬಂಗಾಳ

ಪ.ಬಂಗಾಳದಲ್ಲಿ ಜಿಲ್ಲಾ ಪರಿಷತ್ ವ್ಯವಸ್ಥೆ ಅತ್ಯಂತ ಯಶಸ್ವಿಯಾಗಿ ಕೆಲಸ ಮಾಡಿರುವುದರ ಗುಟ್ಟೇನು?

ಇದು ಒಮ್ಮೆ ನಾನು ಕಾಂ. ಬಿನೋಯ್ ಚೌಧುರಿ(ಪ.ಬಂಗಾಳದ ಭೂಸುಧಾರಣೆ, ಗ್ರಾಮೀಣ ಅಭಿವೃದ್ಧಿಗಳ ಸಚಿವರು)ಯವರಿಗೆ ಹಾಕಿದ ಪ್ರಶ್ನೆ ಅದಕ್ಕೆ ಅವರ ಉತ್ತರವೇನಿತ್ತು ಗೊತ್ತೆ?

ಪ.ಬಂಗಾಳದ ಯಶಸ್ವಿಗೆ ಮುಖ್ಯವಾದ ಮೂರು ಕಾರಣಗಳು

1. ನಿರಂತರವಾಗಿ ರೈತರೆ ಸಮಸ್ಯೆಗಳಿಗಾಗಿ, ಗ್ರಾಮಾಂತರದ ಅಭಿವೃದ್ಧಿಗಾಗಿ ಮಾಡುತ್ತಾ ಬಂದಿರುವ ಹೋರಾಟ. ತೇಭಾಗ ಹೋರಾಟಕ್ಕೆ ಮೊದಲೇ ಆರಂಭವಾಗಿದ್ದ 40 ವರ್ಷಗಳ ದೀರ್ಘ ಹೋರಾಟ.
2. ಈ ದೀರ್ಘ ಹೋರಾಟದ ಫಲವಾಗಿ 67-69 ರ ಅವಧಿಯಲ್ಲಿ ಹಾಗೂ 77 ರ ನಂತರ ತಂದ ಭೂಸುಧಾರಣೆ. ಇದರ ಫಲವಾಗಿ ಭೂಮಾಲೀಕ ಶಕ್ತಿಗಳ ಪ್ರಭಾವ ಕುಗ್ಗಿದ್ದು, ಆಸ್ತಿಯ ಹಂಚಿಕೆಯಾಗಿದ್ದು.

ಕರ್ನಾಟಕದಲ್ಲಿ ಒಂದು ಹೆಕ್ಟೇರ್(2.5 ಎಕರೆ) ಭೂಮಿಗಿಂತ ಕಡಿಮೆ ಭೂಮಿ ಉಳ್ಳವರ ಸಂಖ್ಯೆ ಶೇ 34.4 ಪಶ್ಚಿಮ ಬಂಗಾಳದಲ್ಲಿ ಅವರ ಸಂಖ್ಯೆ ಶೇ 69.7 ಈ ವರ್ಗದ ಕೈಯಲ್ಲಿರುವ ಭೂಮಿ ಕರ್ನಾಟಕದಲ್ಲಿ ಕೇವಲ ಶೇ 6.2 ರಷ್ಟು ಪ.ಬಂಗಾಳದಲ್ಲಿ ಶೇ 29.2 ರಷ್ಟು ಈ ಬಡ ರೈತರ ಕೈಯಲ್ಲಿ ಗಮನಾರ್ಹವಾದುದೆಂದರೆ ಹತ್ತು ಎಕರೆಗಿಂತ ಹೆಚ್ಚು ಭೂಮಿಯುಳ್ಳವರ ಸಂಖ್ಯೆ ಕರ್ನಾಟಕದಲ್ಲಿ ಶೇ 5 ಕ್ಕಿಂತ ಕಡಿಮೆಯಾದರೂ ಅವರ ಹಿಡಿತದಲ್ಲಿರುವ ಭೂಮಿ ಶೇಕಡಾ 24.4 ಒಟ್ಟು ಭೂಮಿಯ ಕಾಲು ಭಾಗದಷ್ಟು. ಭೂಮಾಲೀಕರ ಹಿಡಿತದಲ್ಲಿ ಇಷ್ಟರ ಮೇಲೂ ಮನೆಮಂದಿಯ ಹೆಸರಲ್ಲಿ ಕೆಲವೊಮ್ಮೆ ಸತ್ತವರ ಹೆಸರಲ್ಲಿ ಇನ್ನೂ ಹುಟ್ಟದವರ ಹೆಸರಿನಲ್ಲಿ ಇರುವ ಭೂಮಿಯನ್ನೆಲ್ಲಾ ಸೇರಿಸಿದರೆ ಇನ್ನು ಎಷ್ಟು ಭೂಮಿಯಾಗುವುದೋ ಯಾರು ಹೇಳಬಲ್ಲರು? ಆದರೆ ಪಶ್ಚಿಮ ಬಂಗಾಲದಲ್ಲಿ 10 ಹೆಕ್ಟೇರ್‌ಗಿಂತ ಹೆಚ್ಚು ಭೂಮಿಯಿರುವವರು ಇಲ್ಲವೇ ಇಲ್ಲ. 4 ರಿಂದ 10 ಹೆಕ್ಟೇರ್ ಭೂಮಿಯಿರುವವರೂ ಕೂಡಾ ಕೇವಲ ಶೇ 2 ಕ್ಕಿಂತ ಕಡಿಮೆ.

3. ಪಂಚಾಯತಿ, ಜಿಲ್ಲಾ ಪರಿಷತ್‌ಗಳಲ್ಲಿ 1978 ರ ಚುನಾವಣೆಗಳಲ್ಲಿ ಶೇ 71, 1983 ರ ಚುನಾವಣೆಯಲ್ಲಿ ಶೇ 85 ಸದಸ್ಯರು 5 ಎಕರೆಗಿಂತ ಕಡಿಮೆ ಭೂಮಿ ಉಳ್ಳವರು ಬಡ ರೈತರು ಕೃಷಿಕೂಲಿಕಾರರು.

ಇದೇ ಮೂಲಶಕ್ತಿ. ಒಬ್ಬ ಗ್ರಾಮೀಣ ಬಡವ, ಕೃಷಿ ಕಾರ್ಮಿಕ ಹತ್ತಾರು ಎಕರೆ ಆಸ್ತಿಯುಳ್ಳವರ ಜತೆ ತಲೆಎತ್ತಿ ಸಮಾನನಂತೆ ವ್ಯವಹರಿಸಬಹುದಾದ ಶಕ್ತಿ. ಆದರೆ ಕರ್ನಾಟಕದಲ್ಲಿ ಭೂಮಾಲೀಕರು ಶ್ರೀಮಂತ ರೈತರ ಪಾಳೆಯಪಟ್ಟುಗಳಾಗಿ ಪರಿವರ್ತಿತವಾದ ಜಿಲ್ಲಾ ಪರಿಷತ್ ವ್ಯವಸ್ಥೆ ಯಾವ ರೀತಿಯಲ್ಲಿ ಕಾರ್ಯನಿರ್ವಹಿಸಬಹುದು.

ಈಗ ನಮ್ಮ ದೇಶದಲ್ಲಿ ಎಡರಂಗ ಸರಕಾರ ಜಾರಿಗೆ ತಂದಿರುವ ಜಿಲ್ಲಾ ಪರಿಷತ್ ವ್ಯವಸ್ಥೆಯ ಮಾದರಿ ಒಂದು ಕಡೆಗೆ ಇತರ ಪಕ್ಷಗಳ ಸರಕಾರಗಳು ಜಾರಿಗೆ ತಂದಿರುವ

[illegible]

ಜಿಲ್ಲಾ ಪರಿಷತ್ ವ್ಯವಸ್ಥೆ ಒಂದು ಕಡೆಗೆ ಕಾಂಗ್ರೆಸ್ (ಐ) ಸರಕಾರಗಳಿರುವೆಡೆಯಲ್ಲಿ ಅಧಿಕಾರದ ಪೈಪೋಟಿಯಲ್ಲಿ ಇನ್ನಷ್ಟು ಹೆಚ್ಚು ಜನಕ್ಕೆ ಸ್ಥಾನ ಕೊಡಲು ಜಿಲ್ಲಾ ಪರಿಷತ್‌ಗಳು ಆಶ್ರಯತಾಣ ಗಳಾಗಿವೆಯೇ ಹೊರತು ಮತ್ತೇನೂ ಇಲ್ಲಾ. ಈ ಯಾವ ರಾಜ್ಯಗಳಲ್ಲಿಯೂ ಭೂಸುಧಾರಣೆ ಮಂಡಲ ಪಂಚಾಯ್ತಿಗಳ ಅಧೀನದಲ್ಲಿಲ್ಲ. ಪಂಚವಾರ್ಷಿಕ ಯೋಜನೆಗಳ ನಿರೂಪಣೆಯ ಬಗ್ಗೆ ಮಾತಿಲ್ಲ. ಪ.ಬಂಗಾಳದಲ್ಲಿ ರಾಜ್ಯದ ಕಾಮಗಾರಿಗಳಿಗಿಂತ ಕಡಿಮೆ ವೆಚ್ಚದಲ್ಲಿ ಅರ್ಧದಷ್ಟು ಮೂರನೇ ಒಂದು ಭಾಗದಷ್ಟು ವೆಚ್ಚದಲ್ಲಿ ಸಮರ್ಪಕವಾಗಿರುತ್ತವೆ. ಸಾಲ ಮೇಳದ ಯೋಜನೆ ಐ.ಆರ್.ಡಿ.ಪಿ.ಯನ್ನು ಪಂಚಾಯ್ತಿ ವ್ಯವಸ್ಥೆ ಮೂಲಕ ಕಾರ್ಯಗತಗೊಳಿಸಿದುದರ ಬಗ್ಗೆ ಕೇಂದ್ರ ಸರ್ಕಾರದ ಯೋಜನಾ ಆಯೋಗವೇ ಹೊಗಳಬೇಕಾಗಿ ಬಂದಿದೆ. ಆದರ ಪ್ರಕಾರ ಬಡತನದ ರೇಖೆಯಿಂದ ಬಡಜನರನ್ನು ಮೇಲೆತ್ತುವಲ್ಲಿ



ಬಿನೊಯ್ ಪ್ರಮಾಣ ವಚ ಸ್ವೀಕಾರ

ಜಿಲ್ಲಾ ಪರಿಷತ್ ವ್ಯವಸ್ಥೆಗೆ ಶಕ್ತಿ ನೀಡಿರುವುದೇ ಭೂಸುಧಾರಣೆಗೆ ಸಂಬಂಧಿಸಿದ ಕಾರ್ಯ ಅವುಗಳ ಜೊತೆಯಲ್ಲಿ ಅಭಿವೃದ್ಧಿ ಕಾರ್ಯಗಳು ಅಭಿವೃದ್ಧಿ ಕಾರ್ಯಗಳಲ್ಲಿನ ಕಾಮಗಾರಿಗಳೆಲ್ಲಾ ಪಂಚಾಯತಿ ಸದಸ್ಯರುಗಳ ನೇತೃತ್ವದಲ್ಲಿ ನಡೆಯುತ್ತವೇ ಮಾತ್ರವಲ್ಲ ಬೇರೆ ಯಾವುದೇ ಇಡೀ ದೇಶದಲ್ಲಿಯೇ ಅತ್ಯಂತ ಮುಂದಿರುವುದು ಪಂಜಾಬ್ ನಂತರ ಬಂಗಾಳವೇ. ಇಲ್ಲಿಯವರೆಗೂ ಯೋಜನಾ ವೆಚ್ಚದ ಮೂರನೇ ಒಂದು ಭಾಗ ಪೂರ್ತಿ ಈ ಪಂಚಾಯ್ತಿ ವ್ಯವಸ್ಥೆಯ ಮೂಲಕ ಕಾರ್ಯಗತವಾಗುತ್ತಿತ್ತು. ಈಗ 86-97 ರಿಂದ ಇಡೀ ದೇಶದಲ್ಲಿಯೇ ವಿನೂತನವಾದ ಒಂದು ಪ್ರಯೋಗವನ್ನು ಪ.ಬಂಗಾಳ ಸರ್ಕಾರ ಮಾಡಿದೆ. ಬ್ಲಾಕ್‌ಲೆವೆಲ್ ಪ್ಲಾನಿಂಗ್, ತಾಲ್ಲೂಕು ಮಟ್ಟದಲ್ಲಿ ಯೋಜನೆಗಳ ತಯಾರಿ ಎಂದು ಈ ಪ್ರಯೋಗದ ಹೆಸರು. ಇದರ ಫಲವಾಗಿ ಪ್ರತಿಗ್ರಾಮದ ಜನರ ಅಭಿಪ್ರಾಯಗಳ ಸಂಗ್ರಹ ಮಾಡಿ ಅವರ ಬೇಕು ಬೇಡಗಳಿಗೆ ಗಮನ ನೀಡುವ ಪದ್ಧತಿ ಆದರ ಜೊತೆಗೆ ರಾಜ್ಯದ ಪಂಚವಾರ್ಷಿಕ ಯೋಜನೆಗಳ ಮೂರನೇ ಎರಡು ಭಾಗ ಹಣ ಈ ಜಿಲ್ಲಾ ಪರಿಷತ್ ವ್ಯವಸ್ಥೆಯ ಮೂಲಕ ಜಾರಿಗೆ ಬಂದಿದೆ. ಆದರೆ ಕಾಂಗ್ರೆಸ್(ಐ) ರಾಜ್ಯಗಳ ಭ್ರಷ್ಟಾಚಾರ, ಕಂಟ್ರಾಕ್ಟರ್‌ಗಳ ಹಾವಳಿಗಳು ಇವಕ್ಕೆ ಮಿತಿಯಿದೆಯೇ? ಗ್ರಾಮೀಣ ಬಡಜನರಿಗೆ ಅಧಿಕಾರವಿದೆಯೇ?

ಆದರೂ ಈ ಜಿಲ್ಲಾ ಪರಿಷತ್ ವ್ಯವಸ್ಥೆಯಿಂದ ಪ್ರಜಾಸತ್ತಾತ್ಮಕ ಚಳುವಳಿಗೆ ಆಗುವ ಉಪಯೋಗ ಅಪಾರ. ಅದು ಗ್ರಾಮೀಣ ಶೋಷಕರ ಭೂಮಾಲೀಕರ ನಿಜ ಮುಖವನ್ನು ತನ್ನ ಎಲ್ಲಾ ಕರಾಳತೆಯೊಂದಿಗೆ ಜನರ ಮುಂದೆ ಒಡ್ಡುತ್ತದೆ.

ಜನತಾದಳ ಪಕ್ಷ 1983 ರಲ್ಲಿ ಅಧಿಕಾರಕ್ಕೆ ಬಂದ ಕೂಡಲೇ ಅತಿ ಉತ್ಸಾಹದಿಂದ ರಚಿಸಿದ ಥಿಂಕ್ ಟ್ಯಾಂಕ್ ಅಥವಾ ಪರಿಣಿತರ ಕೂಟಕ್ಕಾಗಿ ಜನತಾ ಸರ್ಕಾರವೇ ತಯಾರಿಸಿದ ಒಂದು ವರದಿ ಹೇಳುತ್ತದೆ:

ಭೂಮಿಯೇ ಗ್ರಾಮೀಣ ಆರ್ಥಿಕದ, ಜನಜೀವನದ ಮೂಲಾಧಾರವಾಗಿರುವಾಗ ಭೂಮಿಯ ಹಂಚಿಕೆಯಿಂದ ಮಾತ್ರ ಎಲ್ಲರೂ ಭಾಗವಹಿಸಬಹುದಾದ ಪ್ರಜಾಸತ್ತೆಯನ್ನು ಊರ್ಜಿತಗೊಳಿಸಲು ಸಾಧ್ಯ. ಅತೀವ ಅಸಮಾನತೆಯ ಸಮಾಜದಲ್ಲಿ ಗ್ರಾಮೀಣ ಅಭಿವೃದ್ಧಿಯ ಕಾರ್ಯದಲ್ಲಿ ಪಂಚಾಯತಿ ಮೊದಲಾದ ಸಂಸ್ಥೆಗಳನ್ನು ಒಳಗೊಳ್ಳುತ್ತವೆ ಎಂಬ ಮಾತಿಗೆ ಅರ್ಥವೇ ಇಲ್ಲ" ಈ ಪಂಚಾಯತಿಗಳು ದೊಡ್ಡ ಜಮೀನುದಾರರ ಸೃಷ್ಟಿಯಾಗಿ ಪರಿಣಮಿಸುತ್ತದೆ.

ಇದು ಜನತಾ ಸರ್ಕಾರದ ವರದಿಯೇ ಜಿಲ್ಲಾ ಪರಿಷತ್ ಚುನಾವಣೆಗೆ ಬಹಳ ಮೊದಲೇ ನುಡಿದ ಭವಿಷ್ಯ. ಈ ಮಾತು ನೂರಕ್ಕೆ ನೂರ ನಿಜವಾಗಿರುವುದನ್ನು ನಾವು ನೋಡಬಹುದು.

ಕರ್ನಾಟಕದ ಪಂಚಾಯತ್ ಚುನಾವಣೆಗಳು

ಸಂಪಾದಕೀಯ

ಕರ್ನಾಟಕದಾದ್ಯಂತ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಚುನಾವಣೆಗಳ ಬಿರುಸು. ಗ್ರಾಮೀಣ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಯ ಬಗ್ಗೆ ಎಲ್ಲ ಪಕ್ಷಗಳೂ ಚಿಂತಿಸಬೇಕಾದ ಹಾಗೂ ಸ್ಪಷ್ಟ ಯೋಜನೆಯನ್ನು ಮುಂದಿಡಬೇಕಾದ ಸಮಯ. ಆದರೆ ಅಂತಹ ಯಾವುದೇ ಪ್ರಯತ್ನವನ್ನು ಒಂದು ಬಂಡವಾಳಶಾಹಿ ಪಕ್ಷವೂ ಮಾಡುತ್ತಿಲ್ಲ. ಕೇವಲ ಜಾತಿ, ಹಣ, ಹೆಂಡ, ಜೊತೆಗೆ ತಮ್ಮ ಪಕ್ಷಗಳು ಹೊಂದಿರುವ ಸಾಂಪ್ರದಾಯಕ ಹಿಡಿತ ಇವುಗಳ ಮೇಲೆಯೇ ಚುನಾವಣೆ ನಡೆಯುತ್ತಿದೆ.

ಬೆಲೆ ಏರಿಕೆಯಿಂದ, ಗ್ರಾಮೀಣ ಅಭಿವೃದ್ಧಿಗೆ ಹಣ ನೀಡಿಕೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಆಗುತ್ತಿರುವ ವಂಚನೆಯಿಂದ, ಉದ್ಯೋಗ ನಿರ್ಮಾಣ ಕುಗ್ಗಿರುವುದರಿಂದ ಗ್ರಾಮೀಣ ರಸ್ತೆ, ಶಾಲೆ, ಆಸ್ಪತ್ರೆಗಳ ಕಟ್ಟಡಗಳ ಪರಿಸ್ಥಿತಿ ಹದಗೆಟ್ಟಿರುವುದರಿಂದ ಬವಣೆಗೊಳಗಾಗಿರುವ ಜನತೆಯಲ್ಲಿಯೂ ಉತ್ಸಾಹ ಕಾಣುತ್ತಿಲ್ಲ. ಮತ್ತದೇ ಗುತ್ತೇದಾರರು (ಕಂಟ್ರಾಕ್ಟರ‍ಗಳು) ಗ್ರಾಮೀಣ ಶ್ರೀಮಂತ ವರ್ಗದ ಮೇಲಾಟ, ಅವರ್‌ಬಿಟ್ ಇವರ್‌ಬಿಟ್ ಇವರ್‍ಯಾರು ಎನ್ನುವ ಆಯ್ಕೆಯ ಪರಿಸ್ಥಿತಿ! ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯ್ತಿಗಳಿಗೆ 'ಗ್ರಾಮೀಣ ಪ್ರದೇಶದ ಹಾಗೂ ಜನರ ಅಭಿವೃದ್ಧಿಗೆಂದು ನೀಡುವ ಅಲ್ಪಹಣದಲ್ಲಿ ಒಂದಷ್ಟನ್ನು ದರೋಡೆ ಮಾಡುವವರಾರು? ಜನರ ಹಣದಿಂದ ಇನ್ನಷ್ಟು ಶ್ರೀಮಂತಿಕೆಯನ್ನು ಯಾರು ಪಡೆಯಬೇಕು? ಎಂಬುದೇ ಈಗ ಜನರ ಮುಂದಿರುವ ಆಯ್ಕೆಯಾದರೆ ಉತ್ಸಾಹ ಮೂಡುವುದಾದರೂ ಸಾಧ್ಯವೇ?

ಇದಕ್ಕೆ ಪ್ರತಿಯಾಗಿ ಕೇರಳ-ಪ.ಬಂಗಾಳಗಳ ಪರಿಸ್ಥಿತಿ ನೋಡಿ. ಜನರೂಪಿತ ಯೋಜನೆಗಳ ಮೂಲಕ ಗ್ರಾಮಗಳಲ್ಲಿ ಪ್ರತಿಯೊಬ್ಬರನ್ನು ಮಕ್ಕಳನ್ನೂ ಮುದುಕರನ್ನೂ ಬಿಡದೆ ಒಳಗೊಂಡು ತಮ್ಮ ಪ್ರದೇಶದ ಎಲ್ಲಾ ಅಭಿವೃದ್ಧಿಯ ಕೀಲಿಕೈಯನ್ನು ತಮ್ಮಲ್ಲೇ ಒಳಗೊಳ್ಳುವ ಮೂಲಕ ತಮಗೆ ತಾವೆ ಹೊಣೆಗಾರರು ಎನ್ನುವ ಅಲ್ಲಿಯ ಭಾಗವಹಿಸುವಿಕೆ, ಅದರಿಂದ ಮಾಡಿದ ರಾಜಕೀಯ ಎಚ್ಚರ ಒಂದು ಕಡೆ. ಭೂಮಿ ನಿರ್ವಹಣೆಯಿಂದ ಹಿಡಿದು ಅರಣ್ಯದವರೆಗೆ ಎಲ್ಲವೂ ಪಂಚಾಯ್ತಿಗಳ ಕೈಯಲ್ಲಿ ಗ್ರಾಮೀಣ ಜನರ ಕೈಯಲ್ಲಿ ಎನ್ನುವುದರಿಂದ ಹುಟ್ಟಿದ ಸ್ಫೂರ್ತಿ, ಆತ್ಮವಿಶ್ವಾಸ ಮತ್ತೊಂದು ಕಡೆ. ಇದರಿಂದ ಒಂದು ಲಕ್ಷ ರೂಪಾಯಿ ಸರ್ಕಾರಿ ಹಣಕ್ಕೆ ಪ್ರತಿಯಾಗಿ ಜನರ ಹಣ, ಶ್ರಮ ಸೇರಿ ಮೂರು ಲಕ್ಷ ರೂ. ಕಾಮಗಾರಿ. ಅದು ಕೂಡ ಜನ ತಮಗೆ ಬೇಕಾದ್ದನ್ನು ತಾವೇ ನಿರ್ಣಯಿಸಿದ್ದು. ಯಾವ ಗುತ್ತೇದಾರರ ಕೈವಾಡವಿಲ್ಲದೆ ಅಧಿಕಾರಿಗಳ ಬಳಕೆಯಿಲ್ಲದೆ ನೇರವಾಗಿ ಜನರ ಉಸ್ತುವಾರಿಯಲ್ಲಿ ಉತ್ತಮ ಗುಣಮಟ್ಟದ ಕಾಮಗಾರಿ. ಆದರೆ ಇಲ್ಲಿ ಕರ್ನಾಟಕದಲ್ಲಿ! ಹಿಂದೆ ಎರಡು ಲಕ್ಷವಿದ್ದ ಹಣ ಈಗ ಒಂದು ಲಕ್ಷವಾಗಿದೆ. ಅದರಲ್ಲಿ ರಾಜಕಾರಣಿ-ಕಂಟ್ರಾಕ್ಟರ್-ಅಧಿಕಾರಿಗಳ ಭ್ರಷ್ಟಾಚಾರದ ದರೋಡೆಯಾಗಿ ಎಷ್ಟು ಸಾವಿರ ನೆಲದ ಮೇಲೆ ಬೀಳುತ್ತದೆ? ಒಂದೊಂದು ಪ್ರದೇಶದಲ್ಲಿ ಒಂದೊಂದು ಕಾಮಗಾರಿಯಲ್ಲಿ ಒಂದೊಂದು ಉತ್ತರ! ೨೦,೦೦೦ ದಿಂದ ೪೦,೦೦೦ ಮಾತ್ರ.

ಪಂಚಾಯ್ತಿಗಳಿಂದ ಭೂಹೀನರಿಗೆ ಭೂಮಿ, ಭೂಮಿಯಲ್ಲಿ ಉಳುವವರಿಗೆ ಗೇಣಿಯ ಹಕ್ಕು, ಗ್ರಾಮೀಣ ಉದ್ಯೋಗದ ಸೃಷ್ಟಿ, ಕನಿಷ್ಟ ಕೂಲಿಯ ಗ್ಯಾರಂಟಿ, ಅರಣ್ಯದ ವೃದ್ಧಿ, ಸಾಕ್ಷರತೆ ಎಲ್ಲವೂ-(ಈ ಬಗ್ಗೆ ಪತ್ಯೇಕ ಲೇಖನಗಳಿವೆ ಓದಿ).ಆದರೆ ಕರ್ನಾಟಕದಲ್ಲಿ ಪಂಚಾಯ್ತಿಗಳಲ್ಲಿ ಈ ಕೆಲಸಗಳಿಗೂ ಸಂಬಂಧವೇ ಇಲ್ಲ. ಭೂಮಿ, ಕೂಲಿಯ ಪ್ರಶ್ನೆಯೇ ಇಲ್ಲ.

ಈ ಎಲ್ಲಾ ಕೆಲಸಗಳ ಫಲವಾಗಿ ಇಂದು ಕೃಷಿ ಉತ್ಪಾದನೆಯಲ್ಲಿ ಹೆಚ್ಚಳ, ಹಾಲು, ಮೊಟ್ಟೆಗಳ ಉತ್ಪಾದನೆಯಲ್ಲಿ ದೇಶಕ್ಕೇ ದಾಖಲೆಯಾದ ಬೆಳವಣಿಗೆ, ಅರಣ್ಯದ ಭೂಮಿ ಎಲ್ಲ ರಾಜ್ಯಗಳಲ್ಲಿ ಕುಗ್ಗುತ್ತಿದ್ದರೆ. ಅದರ ಹೆಚ್ಚಳವಾದ ರಾಜ್ಯವೊಂದೇ ಅದು ಪ.ಬಂಗಾಳ ಎನ್ನುವ ಕಿರೀಟ. ಇತ್ಯಾದಿ.

ಕರ್ನಾಟಕದಲ್ಲಿಯೂ ಈ ಉತ್ಸಾಹ ಮೂಡಬೇಕಾದರೆ ಭೂಸುಧಾರಣೆಗಾಗಿ, ಪಾಳೆಯಗಾರಿ ದಬ್ಬಾಳಿಕೆಯ ನಾಶಕ್ಕಾಗಿ ಹೋರಾಡಬೇಕು ಹಾಗೂ ಪಂಚಾಯ್ತಿಗಳನ್ನು ಜನತೆಯ ಕೈಯ ಆಯುಧಗಳನ್ನಾಗಿ ಗ್ರಾಮೀಣ ಬಡಜನರೆ ಬಳಸುವ ಎಚ್ಚರ ಮೂಡಿಸಲು ನಿರಂತರ ಶ್ರಮಿಸಬೇಕು.

ಕರ್ನಾಟಕದ ಈಗಿನ ಸಂದರ್ಭದಲ್ಲಿ ಪಕ್ಷಗಳ ಒಟ್ಟು ಧೋರಣೆ ಹಾಗೂ ರಾಷ್ಟ್ರೀಯ, ರಾಜ್ಯ ಮಟ್ಟದ ಕೆಲಸಗಳನ್ನು ಗಮನಿಸಿಯೇ ಮತದಾನ ಮಾಡಬೇಕು. ದೇಶದಲ್ಲಿ ಏಳುತ್ತಾ ರೇಷನ್ ಬೆಲೆ, ಗೊಬ್ಬರ, ಸೀಮೆಎಣ್ಣೆಗಳ ಬೆಲೆ ಏರಿಸಿದ ಗ್ರಾಮೀಣ ಕೈಗಾರಿಕೆಗಳು ನಾಶವಾಗುವಂತೆ ವಿದೇಶಿ ವಸ್ತುಗಳು ದೇಶದೊಳಕ್ಕೆ ಪ್ರವಾಹವಾಗಿ ಹರಿಯಬಿಟ್ಟಿರುವ ಬಿಜೆಪಿ ಮುಸ್ಲಿಂ ಹಾಗೂ ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲೆ ನಿರಂತರ ಧಾಳಿಯೆಸಗುತ್ತಿರುವ ಬಿಜೆಪಿ, ತೀವ್ರ ಬರಗಾಲದ ಸಮಯದಲ್ಲಿ ಜನತೆಯ ನೆರವಿಗೆ ಬಾರದ ಬಿಜೆಪಿಯನ್ನು ರಾಜ್ಯದೆಲ್ಲೆಡೆ ಸೋಲಿಸಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಅಲ್ಲಲ್ಲಿ ಅದಕ್ಕೆ ಮೂಡಿದ್ದ ಬೇರುಗಳು ಈಗಾಗಲೇ ಸಡಿಲವಾಗಿದೆ ಅದನ್ನು ಕಿತ್ತೆಸೆಯಬೇಕು.

ಹಾಗೆಯೇ ಬೆಲೆ ಏರಿಕೆ ವಿರುದ್ಧ ದನಿ ಎತ್ತಿದರೂ, ಬಿಜೆಪಿ ಸರ್ಕಾರದ ಆರ್ಥಿಕ ನೀತಿಗಳನ್ನು ಬೆಂಬಲಿಸುತ್ತಿರುವ ಕಾಂಗ್ರೆಸ್ ಪಕ್ಷ, ರಾಜ್ಯದಲ್ಲಿ ಉದಾರೀಕರಣ, ಖಾಸಗೀಕರಣ, ಜಾಗತೀಕರಣ ನೀತಿಯನ್ನು ಅನುಸರಿಸುತ್ತಾ ವಿದೇಶಿ ಸಾಲದ ಕೂಪಕ್ಕೆ ರಾಜ್ಯದ ಜನತೆಯನ್ನೊಡ್ಡುತ್ತಿರುವ, ಗ್ರಾಮೀಣ ಪ್ರದೇಶವನ್ನು ನಿರ್ಲಕ್ಷಿಸುತ್ತಿರುವ ಕಾಂಗ್ರೆಸ್ ಸೋಲಬೇಕು.

ತೃತೀಯ ಶಕ್ತಿಯನ್ನು - ಎಡ, ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬಲಪಡಿಸಬೇಕು. ಎಲ್ಲ ಪಕ್ಷಗಳ ಮೇಲೆಯೂ ಗ್ರಾಮೀಣ ಜನತೆ ಗ್ರಾಮೀಣ ಅಭಿವೃದ್ಧಿಯ ಅಜೆಂಡಾವನ್ನು ಹೇರಬೇಕು.

ಆಸ್ತಿಯ ವಿಕೇಂದ್ರೀಕರಣವಿಲ್ಲದೆ ಅಧಿಕಾರ ವಿಕೇಂದ್ರೀಕರಣವಾಗದು

ಲಕ್ಷಗಟ್ಟಲೆ ಹಣ ಸುರಿಯುವ ಪ್ರತಿಸ್ಪರ್ಧಿ ಭೂಮಾಲಕ, ಶ್ರೀಮಂತ ರೈತರ ಎದುರು ಒಬ್ಬ ಕೃಷಿ ಕಾರ್ಮಿಕ ಗೆಲ್ಲಲು ಸಾಧ್ಯವೇ? ಅವಿರೋಧವಾಗಿ ಆಯ್ಕೆಯಾದ ಅಭ್ಯರ್ಥಿಗಳ ಸಂಖ್ಯೆಯನ್ನು ನೋಡಿದರೆ ಸಾಕು ಚುನಾವಣೆಯಲ್ಲಿ ನಿಲ್ಲುವ ಸ್ವಾತಂತ್ರ್ಯ ಎಷ್ಟು ಜನಕ್ಕಿದೆ ಎಂಬುದು ಸ್ಪಷ್ಟವಾಗುತ್ತದೆ. ರಾಜ್ಯದಲ್ಲಿ ಎಲ್ಲೆಲ್ಲಿ ಪಾಳೆಯಗಾರಿ ಭೂಮಾಲೀಕತ್ವ ಪ್ರಬಲವಾಗಿದೆಯೋ ಭೂಕೇಂದ್ರೀಕರಣ ಅತ್ಯಂತ ತೀಕ್ಷ್ಣವಾಗಿದೆಯೋ ಅಲ್ಲಿ ಕಾಲುಭಾಗದಷ್ಟು ಸ್ಥಾನಗಳು ಅವಿರೋಧ ಆಯ್ಕೆ. ಉದಾ: ಗುಲ್ಬರ್ಗಾ, ಬಿಜಾಪುರ, ಬೆಳಗಾಂ, ರಾಯಚೂರು ಜಿಲ್ಲೆಗಳು ಭೂಮಿಯ ಮೇಲೆ ಪ್ರತಿಷ್ಠಿತ ಶಕ್ತಿಗಳ ಹಿಡಿತ ಇತರೆಡೆಗಳಿಗೆ ಹೋಲಿಸಿದಾಗ ಕಡಿಮೆ ಇರುವ ಕಡೆ, ರಾಜಕೀಯ ಪ್ರಜ್ಞೆ ಹೆಚ್ಚಿರುವ ಕಡೆಗಳಲ್ಲಿ ದ.ಕ., ಬೆಂಗಳೂರು, ಕೋಲಾರ, ತುಮಕೂರುಗಳಲ್ಲಿ ಅವಿರೋಧ ಆಯ್ಕೆಯ ಪ್ರಮಾಣ ಕಡಿಮೆ.

ಹೀಗೆ ಚುನವಾಣೆಯಲ್ಲಿ ನಿಲ್ಲುವ ಸ್ವಾತಂತ್ರ್ಯ, ತನ್ನ ಮನಸ್ಸಿನಂತೆ ಮತ ನೀಡುವ ಸ್ವಾತಂತ್ರ್ಯದಿಂದ ವಂಚಿತರಾದ ಸಾಮಾನ್ಯ ಜನತೆಗೆ ಅಧಿಕಾರ ಬಂದಂತಾಯಿತೆ? ಅಧಿಕಾರ ವಿಕೇಂದ್ರೀಕರಣವಾಯಿತೇ? ಆಸ್ತಿಯ ವಿಕೇಂದ್ರೀಕರಣವಾಗದೆ ಅಧಿಕಾರ ವಿಕೇಂದ್ರೀಕರಣವಾಗದು ಎಂಬುದಕ್ಕೆ ಇದು ಒಳ್ಳೆಯ ಸೂಚನೆ.

ಪಶ್ಚಿಮ ಬಂಗಾಳದಲ್ಲಿ ಪಂಚಾಯತ್ ಅನುಭವ

ಪುಟ 6 ರಿಂದ

ನೀಡಲಾಗುತ್ತಿದೆ. ಕಳೆದ ವರ್ಷ ಒಂದು ಕೋಟಿ ರೂ.ಗಳನ್ನು ವಿತರಿಸಲಾಗಿದೆ. ಉಪಗ್ರಹದ ವಿಶ್ಲೇಷಣೆಯಂತೆ ಪ.ಬಂಗಾಳದಲ್ಲಿ ಹಸಿರುಕಾಡು 15.06% ಹೆಚ್ಚಿದೆ. ಒಟ್ಟು ಹಸಿರು ಪ್ರದೇಶ ಶೇ 19 ರಷ್ಟಕ್ಕೆ ವಿಸ್ತರಿಸಿದೆ.

ಇದು ಭೂಸುಧಾರಣೆಯ ಪರಿಣಾಮ. ಅತ್ಯಧಿಕ ಜನತೆಯನ್ನು ಇದರಲ್ಲಿ ಪಾಲ್ಗೊಳಿಸಿದ ಮತ್ತು ಅದನ್ನೇ ಗುರಿಯಾಗಿಸಿಕೊಂಡ ಪಂಚಾಯತ್ ವ್ಯವಸ್ಥೆಯ ಫಲ. ಕೆಲವೇ ಶ್ರೀಮಂತ ರೈತರಿಗೆ ಆಧುನಿಕ ತಂತ್ರಜ್ಞಾನ - ಕೃಷಿ ಅವಕಾಶ ಕಲ್ಪಿಸಿ ಅದನ್ನೇ ಹಾಡಿಹೊಗಳುವ ಪರಿ ಪ್ರಶ್ನಾರ್ಹ. ಉಳುವವನಿಗೇ ಭೂಮಿ ಎಂಬುದು ಕೇವಲ ಘೋಷಣೆಯಲ್ಲ ಅದು ವಾಸ್ತವ.


ಸಾಕ್ಷರತೆ: ಸಾಮೂಹಿಕ ಸಾಕ್ಷರತೆಯಲ್ಲಿಯ ಸಾಧನೆಯಲ್ಲಿಯೂ ಪ.ಬಂಗಾಳದ್ದು ಗಮನಾರ್ಹ ಸಾಧನೆ. ಕೇಂದ್ರ ಸರ್ಕಾರ ರಾಜ್ಯವನ್ನು 'ವಿಶೇಷ ಸಾಕ್ಷರತಾ ರಾಜ್ಯ'(ಎಲೈಟ್ ಗ್ರೂಪ್) ಎಂದು ಗುರುತಿಸಿದೆ. ಶೇ 72 ರಷ್ಟು ಸಾಧನೆಯಲ್ಲಿ ಪಂಚಾಯತ್‌ಗಳ ಪಾತ್ರ ಮುಖ್ಯವಿದೆ. ಇದರಲ್ಲಿ ಪುರುಷರದ್ದು 81%, ಮಹಿಳೆ 63%. 1991 ರಲ್ಲಿ ಒಟ್ಟು ಸಾಕ್ಷರತೆ 57.7%. ಇದರಲ್ಲಿ ಪುರುಷರು 69.8%, ಮಹಿಳೆ 46.56% ಇತ್ತು. ಶಿಕ್ಷಣ ರಂಗದಲ್ಲಿ ಪುರುಷರದ್ದು 13.19%, ಮಹಿಳೆ 16.44% ಪಾಲಿದೆ. ಇದೆಲ್ಲಾ ಬೆಳವಣಿಗೆಗೆ ಮುಖ್ಯ ಕಾರಣ ಸರಿಯಾದ ವರ್ಗ ದೃಷ್ಟಿಕೋನ ಅನುಸರಿಸಿದ್ದರಿಂದ ಸಾಧ್ಯವಾಗಿದೆ.

ಜಿಂಬಾಬ್ವೆಯಲ್ಲಿ ಕ್ರಾಂತಿಕಾರಿ ಭೂಮಿ ಹೋರಾಟದ ಅಲೆ

ಮುಗಾಬೆ ಈಗ ಸಾಮ್ರಾಜ್ಯಶಾಹಿಗಳ ಹೊಸ 'ವಿಲನ್'

ಶರತ್‌ಚಂದ್ರ

ಜಿಂಬಾಬ್ವೆ ಸುದ್ದಿಯಲ್ಲಿದೆ. ಭೂಹೀನ ಕರಿಯರು ಲಕ್ಷಾಂತರ ಎಕರೆಗಳ ಬಿಳಿಯ ಎಸ್ಟೇಟ್ ಮಾಲಿಕರ ಭೂಮಿ ಹಿಡಿಯುವ ಚಳುವಳಿಗೆ ಇಳಿದಿದ್ದಾರೆ. ವಿಶ್ವದೆಲ್ಲೆಡೆ ಸಾಮ್ರಾಜ್ಯಶಾಹಿ ಮಾಧ್ಯಮ ಇದರ ವಿರುದ್ಧ ಅಪಪ್ರಚಾರದಲ್ಲಿ



ಅಧ್ಯಕ್ಷ ಮುಗಾಬೆ

ತೊಡಗಿದೆ. ಈ ಹೋರಾಟಕ್ಕೆ ಬೆಂಬಲ ನೀಡಿರುವ ಅಧ್ಯಕ್ಷ ಮುಗಾಬೆ ಈಗ "ಸಾಮ್ರಾಜ್ಯಶಾಹಿಗಳಿಗೆ ಹೊಸ 'ವಿಲನ್' ಆಗಿದ್ದಾರೆ. ಹಲವು ತಿಂಗಳುಗಳಿಂದ ಇರಾಕ್‌ನ ಸದ್ದಾಂಹುಸೇನ್ ಮತ್ತು ಯುಗೋಸ್ಲಾವಿಯಾದ ಮಿಲೋಸೊವಿಕ್ ನಂತರ ಮುಗಾಬೆಯನ್ನು ಹೊಸ 'ವಿಲನ್' ಆಗಿಸುವ ಪ್ರಯತ್ನ ನಡೆದಿದೆ. ಜಿಂಬಾಬ್ವೆಯ ಬೆಳವಣಿಗೆಗಳ ಬಗ್ಗೆ ಸಾಮ್ರಾಜ್ಯಶಾಹಿ ಅಪಪ್ರಚಾರ ಬಯಲುಗೊಳಿಸಿ, ಜನಪರ ದೃಷ್ಟಿಕೋನದಿಂದ ಅರ್ಥೈಸುವ ಪ್ರಯತ್ನ ಇದು.

ಜಿಂಬಾಬ್ವೆಯ ಭೂಹೀನ ಕರಿಯರು ಭೂಗ್ರಹಣ ಚಳುವಳಿ ಆರಂಭಿಸಿದ್ದಾರೆ. ಈ ಚಳುವಳಿಯ ನಾಯಕತ್ವವನ್ನು 60-70ರ ದಶಕದ ರಾಷ್ಟ್ರೀಯ ವಿಮೋಚನಾ ಯುದ್ಧದ ಮಾಜಿ ಯೋಧರು ವಹಿಸಿದ್ದಾರೆ. ಎಂಟು ನೂರಕ್ಕೂ ಹೆಚ್ಚು ಎಸ್ಟೇಟ್‌ಗಳನ್ನು ಭೂಹೀನ ಮತ್ತು ಬಡರೈತರಾದ ಕರಿಯರು ವಶಪಡಿಸಿಕೊಂಡಿದ್ದಾರೆ. ಭೂಗ್ರಹಣ ಚಳುವಳಿ ಹಲವು ಕಡೆಗೆ ಹಿಂಸಾತ್ಮಕ ಘರ್ಷಣೆಗೆ ಎಡೆಮಾಡಿ, 10 ಜನ ಈವರೆಗೆ ಸತ್ತಿದ್ದಾರೆ.

ಬಿಳಿಯ ಎಸ್ಟೇಟ್ ಮಾಲಿಕರು ಕೋರ್ಟಿಗೆ ಹೋಗಿದ್ದು, ಜಿಂಬಾಬ್ವೆ ಸುಪ್ರಿಂಕೋರ್ಟ್ ಈ ಭೂಗ್ರಹಣ 'ಕಾನೂನುಬಾಹಿರ' ಎಂದು ಘೋಷಿಸಿದೆ. ಭೂಗ್ರಹಣ ಮಾಡಿರುವ ಭೂಹೀನರನ್ನು ತೆರವು ಮಾಡಬೇಕೆಂದು ಆಜ್ಞೆ ಮಾಡಿದೆ. ಅಧ್ಯಕ್ಷ ಮುಗಾಬೆಯವರ ಸರ್ಕಾರ ಇದನ್ನು ಕಾನೂನು ಮತ್ತು ವ್ಯವಸ್ಥೆಯ ಪ್ರಶ್ನೆ ಮಾತ್ರವಾಗಿ ಪರಿಗಣಿಸಲು ನಿರಾಕರಿಸಿದೆ. ಬಡ ಕರಿಯರು 'ಅನ್ಯಾಯಯುತ' ಕಾನೂನು ವಿರುದ್ಧ ಹೋರಾಡುತ್ತಿದ್ದಾರೆ. ಇದಕ್ಕೆ ನಿರ್ದಿಷ್ಟ ಸಾಮಾಜಿಕ ಚರಿತ್ರೆಯ ಹಿನ್ನೆಲೆ ಇದೆ. ಸರ್ಕಾರ ಇದರಲ್ಲಿ ಮಿಲಿಟರಿ ಪೊಲೀಸು ಬಳಸಿ 'ಕಾನೂನು' ಜಾರಿ ಮಾಡಲು

ಇಂತಹ ಆಸ್ಫೋಟಕ ಸಾಮಾಜಿಕ ಪರಿಸ್ಥಿತಿಯಲ್ಲಿ ಭೂಮಿಯ ಪ್ರಶ್ನೆ ಮುಖ್ಯ ಪ್ರಶ್ನೆಯಾಗಿ ಹೊಮ್ಮಿದೆ. ಭೂಗ್ರಹಣ ಚಳುವಳಿಯನ್ನು ಈ ಹಿನ್ನೆಲೆಯಲ್ಲಿ ನೋಡಬೇಕು. ಇಂತಹ ಸಂದರ್ಭದಲ್ಲಿ ಸರ್ಕಾರದ ಮುಂದೆ ಎರಡೇ ಆಯ್ಕೆಯಿರುವುದು. ಐಎಂಎಫ್- ವಿಶ್ವಬ್ಯಾಂಕ್ - ಸಾಮ್ರಾಜ್ಯಶಾಹಿ ಧಣಿಗಳ ಪರವಾಗಿ ಕರಿಯ ಭೂ-ಹೀನರ ದಮನ ಮಾಡುವುದು, ಇಲ್ಲವೇ ರಾಷ್ಟ್ರೀಯ ವಿಮೋಚನೆಯ ಎರಡನೇ ಹಂತದ ಭೂ-ಸುಧಾರಣೆ ಚಳುವಳಿಗೆ ಬೆಂಬಲ ನೀಡುವುದು. ಮುಗಾಬೆ ಸರ್ಕಾರ ಎರಡನೇ ಆಯ್ಕೆ ಮಾಡಿದೆ. ಆದ್ದರಿಂದ ಮುಗಾಬೆ ಸಾಮ್ರಾಜ್ಯಶಾಹಿಗಳ ಕಣ್ಣಲ್ಲಿ 'ವಿಲನ್' ಆಗಿದ್ದಾರೆ.

ಬಯಸುವುದಿಲ್ಲ ಎಂದು ಸರ್ಕಾರದ ಪರವಾಗಿ ಅಡ್ವೋಕೇಟ್ ಜನರಲ್ ಸುಪ್ರಿಂ ಕೋರ್ಟಿಗೆ ತಿಳಿಸಿದ್ದಾರೆ. ವಸಾಹತುಶಾಹಿ ಚರಿತ್ರೆ ಸೃಷ್ಟಿಸಿದ ಈ ಅನ್ಯಾಯಯುತ ಭೂಮಿ ಒಡೆತನದ ವ್ಯವಸ್ಥೆಗೆ ಬಹುಸಂಖ್ಯಾತ ಕರಿಯ ಬಡವರು ಸವಾಲು ಹಾಕಿರುವ ಸಮಯದಲ್ಲಿ, ಸರ್ಕಾರ ಇದನ್ನು ಮಾತುಕತೆಗಳ ಮೂಲಕ ಪರಿಹರಿಸಲು ಪ್ರಯತ್ನಿಸುತ್ತದೆ ಎಂದು ಹೇಳಿದ್ದಾರೆ. ಈ ರೀತಿ ಸುಮಾರು ಹತ್ತುಲಕ್ಷ ಹೆಕ್ಟೇರ್ (25 ಲಕ್ಷ ಎಕರೆ)ಜಮೀನು ವಿವಾದಿತವಾಗಿದೆ.

ಭೂಗ್ರಹಣ ಚಳುವಳಿ

ಮುಗಾಬೆಯವರ ಆಳುವ ಪಕ್ಷ ಝಾನು ಪಿಎಫ್ (Zánu-PF) ಸಹ ಭೂ-ಗ್ರಹಣ ಚಳುವಳಿಯನ್ನು ಬೆಂಬಲಿಸಿದೆ. ಬ್ರಿಟನ್ ವಸಹತುಶಾಹಿಯ ಜಿಂಬಾಬ್ವೆಯ ವಿಮೋಚನಾ ಸಮರದಲ್ಲಿ ನಾಯಕತ್ವ ವಹಿಸಿದ ಈಗಿನ ಆಳುವ ಪಕ್ಷದ ಕಾರ್ಯಕರ್ತರು, ದೊಡ್ಡ ಪ್ರಮಾಣದಲ್ಲಿ ಈ ಹೋರಾಟದಲ್ಲಿ ಭಾಗವಹಿಸಿದ್ದಾರೆ. ಬಿಳಿ ಎಸ್ಟೇಟ್ ಮಾಲಿಕರು ಇದನ್ನು 'ಸರ್ಕಾರ-ನಿರ್ದೇಶಿತ ಹಿಂಸಾತ್ಮಕ ಕ್ರಮ' ಎಂದು ಕರೆದು, ಇದು ಆಸ್ತಿಯನ್ನು 'ಕಾನೂನು ಬಾಹಿರವಾಗಿ' ಹಿಂಸಾತ್ಮಕವಾಗಿ' ಕಸಿದುಕೊಳ್ಳುತ್ತಿರುವುದು ಎಂದು ದೂರಿದ್ದಾರೆ. ಬ್ರಿಟನ್‌ನ ನಾಯಕತ್ವದಲ್ಲಿ ಪಾಶ್ಚಿಮಾತ್ಯ ಸರ್ಕಾರಗಳು ಬಿಳಿಯ ಎಸ್ಟೇಟ್ ಮಾಲಿಕರ ಆಸ್ತಿ 'ಕಸಿದುಕೊಳ್ಳಲಾಗುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ಮಿಲಿಟರಿ ಪೊಲೀಸು ಬಳಸಿ ಬಿಳಿಯ ಎಸ್ಟೇಟ್ ಮಾಲಿಕರ 'ಆಸ್ತಿ' ವಾಪಸು ಮಾಡಬೇಕೆಂದು ಅಂತರ್ರಾಷ್ಟ್ರೀಯ ಒತ್ತಾಯ ತರುತ್ತಿದ್ದಾರೆ. 'ಯೂನಿಯನ್ ಆಫ್ ಕಮರ್ಶಿಯಲ್ ಫಾರ್ಮರ್ಸ್' (ಯುಸಿಎಫ್) ಎಂಬ ಬಿಳಿ ಎಸ್ಟೇಟ್ ಮಾಲಿಕರ ಸಂಘಟನೆಯನ್ನು ಜಿಂಬಾಬ್ವೆ ಸರ್ಕಾರದ ವಿರುದ್ಧದ ಪ್ರಜಾಸತ್ತಾತ್ಮಕ ಚಳುವಳಿ, ಅದನ್ನು ಚುನಾವಣೆ ಸಮಯದಲ್ಲಿ ದಮನ ಮಾಡಲು ಮುಗಾಬೆ ಭೂ-ಗ್ರಹಣ ಚಳುವಳಿಯನ್ನು ಹರಿದು ಬಿಟ್ಟಿದ್ದಾರೆ ಎಂದು ಪಾಶ್ಚಿಮಾತ್ಯ ಸುದ್ದಿ ಮಾಧ್ಯಮಗಳು ಪ್ರಚಾರ ಮಾಡುತ್ತಿವೆ ಆದರೆ ನಿಜ ಏನು?.

ಬಿಳಿಯರ 'ಆಸ್ತಿ' ಅಲ್ಲ - ದರೋಡೆ ಮಾಲು

ಜಿಂಬಾಬ್ವೆ ಬ್ರಿಟಿಷ್ ವಸಹತುಶಾಹಿಯಿಂದ ಸ್ವಾತಂತ್ರಗಳಿಸಿ ಇದೇ ಏಪ್ರಿಲ್ 18ಕ್ಕೆ ಸರಿಯಾಗಿ ಇಪ್ಪತ್ತು ವರ್ಷಗಳಾಗಿವೆ. ಅದಕ್ಕಿಂತ ಮೊದಲು ಜಿಂಬಾಬ್ವೆಯನ್ನು ರೋಡೇಶಿಯಾ ಎಂದು ಕರೆಯಲಾಗುತ್ತಿತ್ತು. ಸಿಸಿಲ್ ರೋಡ್ಸ್ ಎಂಬ ಬ್ರಿಟಿಷ್ ತನ್ನ' ಬ್ರಿಟಿಷ್ ದಕ್ಷಿಣ ಆಫ್ರಿಕಾ ಕಂಪನಿ' ಈಗಿನ ಜಿಂಬಾಬ್ವೆಯ ಭೂಮಿಯನ್ನು ಕಬಳಿಸಿದ್ದ. ಈತ ಮತ್ತು ಈತನ ಕಂಪನಿ ಮೋಸ ಮತ್ತು ಭಾರಿ ಹಿಂಸಾಚಾರದಿಂದ ಈಗಿನ ಜಿಂಬಾಬ್ವೆಯ ಭಾರಿ ಭೂಮಿಯನ್ನು ಕಬಳಿಸಿತ್ತು. ಆಗಿನ ಕರಿಯ ಆದಿವಾಸಿಗಳನ್ನು ಹಾಡುಹಗಲಲ್ಲೇ ಕಗ್ಗೊಲೆ ಮಾಡಲಾಗಿತ್ತು. ಅವರದ್ದೇ ಭೂಮಿಯಿಂದ ಓಡಿಸಲಾಗಿತ್ತು. ಬ್ರಿಟಿಷ್ ಮತ್ತು ಇತರ ವಸಾಹತುಶಾಹಿ ಲೂಟಿ ಗೊತ್ತಿದ್ದವರಿಗೆ ಇದೇನು ಹೊಸ ಕಥೆಯಲ್ಲ. 19ನೇ ಶತಮಾನದ ಮತ್ತು 20ನೇ ಶತಮಾನದ ಆದಿಯಲ್ಲಿ ವಿದೇಶಿ ಬಿಳಿಯರ ಕಂಪನಿಗಳು ಸ್ಥಳೀಯ ಕಂಪನಿಗೂ ಭೂ ಒಡೆತನ, ಇಲ್ಲಿನ ಪ್ರಾಕೃತಿಕ ಸಂಪನ್ಮೂಲಗಳ ಒಡೆತನದ ಬಗ್ಗೆ ಹಲವು ಹೋರಾಟಗಳಾದವು. 1893ರಲ್ಲಿ ಈಗಿನ ಜಿಂಬಾಬ್ವೆಯ ಕರಿಯರು ಸೋತು ಬಿಳಿಯರ ಆಡಳಿತ ಪ್ರದೇಶಗಳು ರೂಪುಗೊಂಡವು. 1922ರಲ್ಲಿ ಬ್ರಿಟಿಷ್ ದಕ್ಷಿಣ ಆಫ್ರಿಕಾ ಕಂಪನಿಯ ನಿಯಂತ್ರಣದ ಬದಲು ಬ್ರಿಟಿಷ್ ಸರ್ಕಾರದ ಅಧೀನವಾಗಿರುವ ಸರ್ಕಾರ ಸ್ಥಾಪನೆಯಾಯಿತು. (1857ರಲ್ಲಿ ಭಾರತದಲ್ಲಿ ಆದಂತೆ). ಇದಕ್ಕಿಂತ ಮೊದಲು ಹಲವು ಆದಿವಾಸಿ ಜನಾಂಗಗಳು ಹೋರಾಟದಲ್ಲಿ ನಾಶವಾದವು. ಅಳಿದುಳಿದು ಶೋಣಾ, ನೆಡಬೆಲೆ ಪಂಗಡಗಳು ಬಿಳಿ ಎಸ್ಟೇಟ್‌ಗಳ ಕಂಪನಿಗಳ ಗುಲಾಮರಾದರು. ಬಿಳಿಯರ ಅಮಾನವೀಯ ಶೋಷಣೆಗೆ ಬಲಿಯಾದರು. 20ನೇ ಶತಮಾನದಲ್ಲಿ ಬಿಳಿಯರ ನಿಯಂತ್ರಣ ಬಲವಾಗುತ್ತಿದ್ದಂತೆ, ಯುರೋಪಿನ ಹಲವಾರು ಬಿಳಿಯರು ಈಗಿನ ಜಿಂಬಾಬ್ವೆ (ಆಗಿನ ರೋಡೇಶಿಯಾಕ್ಕೆ)ಗೆ ವಲಸೆ ಬರಲಾರಂಭಿಸಿದರು. ಎರಡನೇ ಮಹಾಯುದ್ಧದ ಹೊತ್ತಿಗೆ ಸುಮಾರು 2 ಲಕ್ಷ ಬಿಳಿಯರು ವಲಸೆ ಬಂದಿದ್ದರು. ಅವರೆಲ್ಲ ಕರಿಯರನ್ನು ಭೂಹಿನ ನಿರ್ಗತಿಕರನ್ನಾಗಿ ಮಾಡಿ ಫಲವತ್ತಾದ ಭೂಮಿಯನ್ನು ಭಾರಿ ಎಸ್ಟೇಟ್‌ಗಳನ್ನಾಗಿಸಿಕೊಂಡರು. ಜಿಂಬಾಬ್ವೆಯ ಫಲವತ್ತಾದ ಭೂಮಿಯಲ್ಲಿ ಅರ್ಧಕ್ಕೂ ಹೆಚ್ಚನ್ನು ಬಿಳಿಯರು ಈ ರೀತಿ ಕಬಳಿಸಿದ್ದರು. ಉಳಿದ ಅರ್ಧ ಬರಡು ಭೂಮಿ ಮಾತ್ರ ಕರಿಯರ ಬಳಿ ಇತ್ತು.

ಇಂತಹ ಬಿಳಿಯ ಎಸ್ಟೇಟ್ ಮಾಲಿಕರ ಬರ್ಬರತೆಯ ವಿರುದ್ಧ 60-70ರ ದಶಕದಲ್ಲಿ ಕರಿಯರು ವಿಮೋಚನಾ ಹೋರಾಟ ಆರಂಭಿಸಿದ್ದು. ಮುಗಾಬೆಯವರ ನಾಯಕತ್ವದ ZANU ಮತ್ತು ಎನ್ಕೊಮೋದವರ ZAPU ಕರಿಯರ ಸಶಸ್ತ್ರ ಹೋರಾಟದ ನಾಯಕತ್ವ ವಹಿಸಿದ್ದವು. ಬಿಳಿಯರ ವರ್ಣಭೇಧ ರಾಜಕೀಯ ವ್ಯವಸ್ಥೆ ಮತ್ತು ಭೂ-ಒಡೆತನದ 'ಆರ್ಥಿಕ ವರ್ಣಬೇಧ' ಎರಡೂ ಈ ಚಳುವಳಿ ಎಬ್ಬಿಸಿದ ಪ್ರಶ್ನೆಗಳಾಗಿದ್ದವು. ಆದರೆ 1980ರಲ್ಲಿ ಬಿಳಿಯರು ಅಧಿಕಾರವಹಿಸಿದಾಗ ರಾಜಕೀಯ ವರ್ಣಭೇದ ವ್ಯವಸ್ಥೆ' ಮುಂದುವರೆಯಿತು. ಪಾಶ್ಚಿಮಾತ್ಯ ದೇಶಗಳು ಮತ್ತು ದಕ್ಷಿಣ -ಆಫ್ರಿಕಾದ ವರ್ಣಭೇದ ಸರ್ಕಾರಗಳೆಲ್ಲ ಆಗಿನ ಬ್ರಿಟಿಷ್ ವಸಹತುಶಾಹಿಗಳ ಬೆಂಬಲಕ್ಕಿದ್ದವು. ಹಾಗಾಗಿ ಆಗಿನ ದಕ್ಷಿಣ ಆಫ್ರಿಕಾದ ವಿಮೋಚನಾ



ಭೂಗ್ರಹಣ ಚಳುವಳಿಯಲ್ಲಿ ನಿರತ ಭೂಹೀನರು

ಹೋರಾಟಗಳಾದ ANC,SWAPO ಇವೆಲ್ಲ ಮತ್ತು ಟಾನ್‌ಝಾನಿಯಾ, ಝಾಂಬಿಯಾ, ಮೊಜಾಂಬಿಕ್‌ನ ಕರಿಯರ ಸರ್ಕಾರಗಳು ವಿಮೋಚನಾ ಹೋರಾಟಕ್ಕೆ ಬೆಂಬಲವಿತ್ತಿದ್ದವು.

'ಆರ್ಥಿಕ ವರ್ಣಭೇಧ' ಕೊನೆಗಾಣಿಸುವಲ್ಲಿ ವಿಳಂಬವೇ ಭೂಗ್ರಹಣಕ್ಕೆ ಕಾರಣ

ಜಿಂಬಾಬ್ವೆ ರಾಜಕೀಯ ಸ್ವಾತಂತ್ರ್ಯ ಪಡೆದ ವಿಶಿಷ್ಟ ಸನ್ನಿವೇಶದಲ್ಲಿ, ಹೊಸ ಸರ್ಕಾರ ಹಳೆಯ ವಸಾಹತುಶಾಹಿ ಸಂವಿಧಾನ ಉಳಿಸಿಕೊಳ್ಳ ಬೇಕಾಯಿತು. ಬಿಳಿಯರ ನಿಯಂತ್ರಣದಲ್ಲಿರುವ ಆರ್ಥಿಕ ಒಂದೇ ಬಾರಿಗೆ ಬದಲಿ ವ್ಯವಸ್ಥೆ ಇಲ್ಲದೆ ಕುಸಿಯದಂತೆ, ಬಿಳಿಯರು ಒಂದೇ ಬಾರಿಗೆ ದೇಶ ಬಿಟ್ಟುಹೋಗದಂತೆ ತಡೆಯಲು ಮುಗಾಬೆ ನಾಯಕತ್ವದ ಸರ್ಕಾರ 'ಆರ್ಥಿಕ ವರ್ಣಬೇಧ'ದ ವ್ಯವಸ್ಥೆ ಬದಲಾಯಿಸಲು ತತ್‌ಕ್ಷಣ ಮುಂದಾಗಲಿಲ್ಲ. ಮುಗಾಬೆ ನಾಯಕತ್ವದ ರಾಷ್ಟ್ರೀಯ ವಿಮೋಚನಾ ಹೋರಾಟ ಜಿಂಬಾಬ್ವೆಯನ್ನು ಬಹು-ಜನಾಂಗೀಯ, ಬಹು-ಬುಡಕಟ್ಟು ದೇಶವನ್ನಾಗಿ ಕಟ್ಟಬೇಕೆಂದು ಬಯಸಿ, ಆರ್ಥಿಕ ಬದಲಾವಣೆಗೆ ಸ್ವಲ್ಪ ಸಮಯ ಕಾಯಲು ನಿರ್ಧರಿಸಿತು. ಅಲ್ಲದೆ, ಆಗಿನ ಸಂವಿಧಾನ ಬಿಳಿಯ ಎಸ್ಟೇಟ್ ಮಾಲಿಕರಿಗೆ ವಿಶೇಷ ಹಕ್ಕುಗಳನ್ನು ಕೊಟ್ಟಿತ್ತು. ಮುಗಾಬೆ ಸರ್ಕಾರ 15 ಲಕ್ಷ ಹೆಕ್ಟೇರ್ ಭೂಮಿಯನ್ನು ಭೂಹೀನ ಕರಿಯರಿಗೆ ಹಂಚಲು ಬಯಸಿತ್ತು. ಇದಕ್ಕಾಗಿ ಅಷ್ಟು ಬಿಳಿಯರ ಜಮಿನು ವಶಪಡಿಸಿಕೊಳ್ಳಬೇಕೆಂದು ಬಯಸಿತ್ತು. **ಸ್ವಾತಂತ್ರ್ಯದ ಬಗ್ಗೆ ಬ್ರಿಟಿಷ್ ಸರ್ಕಾರದ ಜತೆ ಮಾಡಿಕೊಂಡ ಒಪ್ಪಂದದ ಪ್ರಕಾರ, ಬ್ರಿಟಿಷ್ ಸರ್ಕಾರ ಹೀಗೆ ವಶಪಡಿಸಿಕೊಳ್ಳಲಾಗುವ ಬಿಳಿಯ ಎಸ್ಟೇಟ್ ಮಾಲಿಕರಿಗೆ ಪರಿಹಾರ ಕೊಡಬೇಕಾಗಿತ್ತು. ಆದರೆ ಅಂದಿನಿಂದ ಇಂದಿನವರೆಗೆ ಬ್ರಿಟಿಷ್ ಸರಕಾರಗಳು ಈ ಒಪ್ಪಂದ ಜಾರಿ ಮಾಡಲಿಲ್ಲ. ಮುಗಾಬೆ ಸರ್ಕಾರ ಅಂದಿನಿಂದ ಆರುಸಾವಿರ ಬಿಳಿಯರು, ಆರುಲಕ್ಷ ಕರಿಯರು ಹೊಂದಿರುವಷ್ಟು ಭೂ ಒಡೆತನ ಹೊಂದಿರುವ 'ಅನ್ಯಾಯಯುತ ಮತ್ತು ಅಸಹನೀಯ' ಪರಿಸ್ಥಿತಿಯನ್ನು ಬಹುಸಂಖ್ಯಾತ ಕಂಪನಿಯು ಬಹಳಕಾಲ ತಾಳಿಕೊಳ್ಳುವುದಿಲ್ಲ - ಎಂದು ಎಚ್ಚರಿಸುತ್ತಾ ಬಂದಿತ್ತು. ಇಪ್ಪತ್ತು ವರ್ಷದಲ್ಲಿ.** ಈ ಸಹನೆಯ ಕಟ್ಟೆ ಒಡೆದಿದೆ. ಈಗಿನ ಭೂಗ್ರಹಣ ಚಳುವಳಿ ಕರಿಯರ ಸಹನೆ ಕಟ್ಟೆ ಒಡೆದಿದ್ದರ ಫಲ. ಇದಕ್ಕೆ ಜವಾಬ್ದಾರ' ವಾದ ದ್ದು ಯೂರೋಪಿನ ಮುಖ್ಯವಾಗಿ ಬ್ರಿಟಿಷ್ ಸರ್ಕಾರದ ಬಿಳಿಯರ ಪರ ಪ್ರಜಾಸತ್ತಾತ್ಮಕ-ವಿರೋಧಿ ನೀತಿ 'ಆರ್ಥಿಕ ವರ್ಣಭೇದ' ಮುಂದುವರೆಸುವ ನೀತಿ.

ಐಎಂಎಫ್ - ವಿಶ್ವಬ್ಯಾಂಕ್ ಹೊರಿಸಿದ ಬಿಕ್ಕಟ್ಟು

ಮುಗಾಬೆ ಸರ್ಕಾರ ಸ್ವಾತಂತ್ರ್ಯ ನಂತರದ ಮೊದಲ ದಶಕದಲ್ಲಿ ಶಿಕ್ಷಣ ಮತ್ತು ಆರೋಗ್ಯ ಸೇವೆಯನ್ನು ಕರಿಯರಿಗೆ ಮುಟ್ಟಿಸುವ ಕೆಲಸವನ್ನು ಆದ್ಯತೆಯಿಂದ ಕೈಗೆತ್ತಿಕೊಂಡಿತು. ಆದರೆ ಆರ್ಥಿಕ ಬಿಳಿಯರ ಕೈಯಲ್ಲಿತ್ತು. ಕೃಷಿ ಮತ್ತು ಗಣಿಗಳು ಆರ್ಥಿಕದ ಬೆನ್ನೆಲುಬಾಗಿರುವ ಈ ದೇಶದಲ್ಲಿ, ಭೂಸುಧಾರಣೆಯಲ್ಲದೆ 'ಆರ್ಥಿಕ ವರ್ಣಬೇದ' ಕೊನೆಗೊಳಿಸವುದು ಮತ್ತು ಬಹುಸಂಖ್ಯಾತರ ಜೀವನ ಮಟ್ಟ ಸುಧಾರಣೆಯ ಮುಖ್ಯ ವಿಚಾರವನ್ನು ಕೈಗೆತ್ತಿಕೊಳ್ಳಲು ಮುಗಾಬೆ ಸರ್ಕಾರಕ್ಕೆ ಆಗಿಲ್ಲ. ಸಾಲದೆಂಬಂತೆ ಕೃಷಿ, ಗಣಿಗಳಂತಹ ಪ್ರಾಥಮಿಕ ಸರಕುಗಳ ಬೆಲೆ ಅಂತರ್ರಾಷ್ಟ್ರೀಯದಲ್ಲಿ ಬಿದ್ದು ಹೋಗಿದ್ದು ಆರ್ಥಿಕ ಕುಸಿತಕ್ಕೆ ಕಾರಣವಾಗಿ, ಜಿಂಬಾಬ್ವೆ ಸಹ ಐಎಂಎಫ್- ವಿಶ್ವಬ್ಯಾಂಕ್ ಸಾಲಕ್ಕೆ ಅದರ ನೀತಿಗಳಿಗೆ ತುತ್ತಾಗಬೇಕಾಯಿತು. ಇಂದು ಮೂರನೇ ಜಗತ್ತಿನ ಇತರ ಹಲವು ದೇಶಗಳಂತೆ ನೀತಿಗಳಿಂದ ಜಿಂಬಾಬ್ವೆ ಇನ್ನಷ್ಟು ಬಡವಾಗಿದೆ. ಇನ್ನಷ್ಟು ಆರ್ಥಿಕ ಬಿಕ್ಕಟ್ಟಿಗೆ ಸಿಕ್ಕಿದೆ. ಜನರ ಅತೃಪ್ತಿ ಹೆಚ್ಚಿದೆ. ಇತ್ತೀಚಿಗೆ ಪೆಟ್ರೋಲಿಯಂ ಬೆಲೆ ಏರಿಕೆ ವಿರುದ್ಧ ದಂಗೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. **ಇಂತಹ ಆಸ್ಫೋಟಕ ಸಾಮಾಜಿಕ ಪರಿಸ್ಥಿತಿಯಲ್ಲಿ ಭೂಮಿಯ ಪ್ರಶ್ನೆ ಮುಖ್ಯ ಪ್ರಶ್ನೆಯಾಗಿ ಹೊಮ್ಮಿದೆ. ಭೂಗ್ರಹಣ ಚಳುವಳಿಯನ್ನು ಈ ಹಿನ್ನೆಲೆಯಲ್ಲಿ ನೋಡಬೇಕು. ಇಂತಹ ಸಂದರ್ಭದಲ್ಲಿ ಸರ್ಕಾರದ ಮುಂದೆ ಎರಡೇ ಆಯ್ಕೆಯಿರುವುದು. ಐಎಂಎಫ್- ವಿಶ್ವಬ್ಯಾಂಕ್ - ಸಾಮ್ರಾಜ್ಯಶಾಹಿ ಧಣಿಗಳ ಪರವಾಗಿ ಕರಿಯ ಭೂ-ಹೀನರ ದಮನ ಮಾಡುವುದು, ಇಲ್ಲವೇ ರಾಷ್ಟ್ರೀಯ ವಿಮೋಚನೆಯ ಎರಡನೇ ಹಂತದ ಭೂ-ಸುಧಾರಣೆ ಚಳುವಳಿಗೆ ಬೆಂಬಲ ನೀಡುವುದು. ಮುಗಾಬೆ ಸರ್ಕಾರ ಎರಡನೇ ಆಯ್ಕೆ ಮಾಡಿದೆ. ಆದ್ದರಿಂದ ಮುಗಾಬೆ ಸಾಮ್ರಾಜ್ಯಶಾಹಿಗಳ ಕಣ್ಣಲ್ಲಿ 'ವಿಲನ್' ಆಗಿದ್ದಾರೆ.** ಈ ಬಿಕ್ಕಟ್ಟು, ಪರಿಸ್ಥಿತಿ ಸೃಷ್ಟಿಸಿದ್ದು ಮುಗಾಬೆಯಲ್ಲ, ಭೂಹೀನ ಕರಿಯರಲ್ಲ, ಬಿಳಿಯರಿಗೆ ನೀಡುವ ಪರಿಹಾರದ ಬಗ್ಗೆ ವಿಳಂಬ ನೀತಿ ಅನುಸರಿಸುತ್ತಿರುವ ಟೋನಿ ಬ್ಲೇರ್ ಬ್ರಿಟಿಷ್ ಸರ್ಕಾರ ಈ ಆರ್ಥಿಕ ಬಿಕ್ಕಟ್ಟು ನಿರ್ಮಿಸಿರುವುದು


ಪ.ಬಂಗಾಳದಲ್ಲೊಂದು ಬಂದ್

ಮೇ 11ರ ಸಾರ್ವತ್ರಿಕ ಮುಷ್ಕರ ಒಂದು ಪ್ರತ್ಯಕ್ಷ ವರದಿ

ಅಭಿಪ್ರಾಯ ಕೇಳಿಬರುತ್ತದೆ. ಈ ರಾಜ್ಯದಲ್ಲಿ ಒಂದು ನಾಯಿ ಬಂದ್‌ಗೆ ಕರೆ ನೀಡಿದರೂ ಅದು ಯಶಸ್ವಿಯಾಗಿಬಿಡುತ್ತದೆ ಎಂಬುದು ಒಂದು ಅಭಿಪ್ರಾಯ. ಕಳೆದ ಹನ್ನೊಂದು ತಿಂಗಳಲ್ಲಿ ಯಾವುದೇ ಬಂದ್‌ಗೆ ಕರೆ ಬಂದಿದ್ದಿಲ್ಲವಾದ್ದರಿಂದ ಬಂದ್ ಅನ್ನು ನೋಡುವ ಅವಕಾಶವಂತೂ ಇರಲಿಲ್ಲ.

ಬಂದ್‌ನ ದಿನ ಏನೇನೂ ಸಿಗುವುದಿಲ್ಲ ರೋಗಿಗಳು ಸಾಯಬೇಕಾಗುತ್ತದೆ. ಎಳನೀರು ಸಿಗುವುದೂ ಕಷ್ಟ ಎಂಬಿತ್ಯಾದಿ ಮಾತುಗಳು ಮಾತ್ರ ಕೇಳಿಬಂದಿದ್ದವು. ಹಿಂಸೆ ತುಂಬಾ ಆಗುತ್ತದೆ ಎಂಬ ಮಾತೂ ಕೇಳಿ ಬಂದಿತ್ತು. ಒಟ್ಟಾರೆಯಾಗಿ ಬಂದ್ ಇಲ್ಲಿ ಬೇರೆಲ್ಲೆಡೆಗಿಂತ ವಿಭಿನ್ನ

ಬೆಳಿಗ್ಗೆ ಎದ್ದರೆ ಒಂದು ತರಹ ನೀರವ ಮೌನ



ಕಲ್ಕತ್ತದಲ್ಲಿಯೇ ಅತ್ಯಂತ ಗಜಿಬಿಜಿಯ ತಾಣವಾದ ಹೌರಾಬ್ರಿಜ್

ಮತ್ತು ವಿಶಿಷ್ಟವಾಗಿರುತ್ತದೆ ಎಂಬ ಮಾತಂತೂ ಮನದಟ್ಟಾಗಿತ್ತು. ಆದರೆ ನಿಜದಲ್ಲಿ ಹೇಗಿರುತ್ತದೆ ಎಂಬುದನ್ನು ನೋಡುವ ಅವಕಾಶ ಕಳೆದ ಮೆ 11ರ ಮುಷ್ಕರದ ದಿನ ಒದಗಿ ಬಂತು.

ಹೊಡೆದಾಟ ಬಡಿದಾಟ ಹಿಂಸೆ, ಘರ್ಷಣೆ ಇತ್ಯಾದಿಗಳೆಲ್ಲ ಸೇರಿದ ದೃಶ್ಯಗಳನ್ನು ಕಾಣುವ ಸಾಧ್ಯತೆಗೆ ಮನಸ್ಸನ್ನು ತಯಾರು ಮಾಡಿಕೊಂಡೆ.

ಬಂದ್‌ನ ಕೆಲವು ದಿನಗಳ ಹಿಂದೆಯೂ ಕಲ್ಕತ್ತಾ ನಗರದ ಕೆಲವು ಕಡೆ ತಿರುಗಾಡುವ ಅವಕಾಶ ಒದಗಿ ಬಂತು. ಅಂಗಡಿ ಅಂಗಡಿಗಳಲ್ಲಿ ಬೀದಿ ಬೀದಿಗಳಲ್ಲಿ ಜನ ಬಂದ್ ಬಗ್ಗೆ ಮಾತನಾಡುತ್ತಿದ್ದರು. ಮೇ 11 ರಂದು ಪೂರ್ತಿ ರಜದ ದಿನವೆಂದೇ ಆಗಲೇ ಅವರೆಲ್ಲ ಪರಿಗಣಿಸಿಬಿಟ್ಟಿದ್ದರು. ಎಲ್ಲ ಕಡೆಗೆ ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳು ಮತ್ತು ಬೆಲೆ ಏರಿಕೆಯ ವಿರುದ್ಧ ಭಾರತ್ ಬಂದ್ ನಡೆಸುವ ಬಗ್ಗೆ ಭಿತ್ತಿ ಪತ್ರಗಳು ಕಾಣಿಸಿಕೊಂಡಿದ್ದವು. ಸಿಐಟಿಯುವಿನಂತಹ ಕಾರ್ಮಿಕ ಸಂಘಟನೆಗಳು ಹಾಗೂ ವಿವಿಧ ಸಾಮೂಹಿಕ ಸಂಘಟನೆಗಳು ಬಂದ್‌ನ ಯಶಸ್ಸಿಗಾಗಿ ಪೂರ್ಣ ಪ್ರಮಾಣದ ತಯಾರಿ ನಡೆಸಿದ್ದು ಕಂಡುಬಂದಿತು. ಮುಖ್ಯ ವ್ಯಾಪಾರ ವಹಿವಾಟು ನಡೆವ ಕಡೆಗಳಲ್ಲಿ ಮೇ 10 ರಂದೇ ಕಾರ್ಮಿಕರ ಸಂಘಟನೆಗಳ ಕಾರ್ಯಕರ್ತರ ಮೆರವಣಿಗೆಗಳು ಬಂದ್ ಯಶಸ್ವಿಗೊಳಿಸಲು ಕರೆ ನೀಡಿದವು. ಬಂದ್‌ಗೆ ಪೂರ್ಣ ಪ್ರಮಾಣದ ತಯಾರಿ ನಡೆದದ್ದರ ಲಕ್ಷಣ ಇಲ್ಲಿ ಎದ್ದು ಕಾಣುತ್ತಿತ್ತು.

ಮೇ 11 ರ ಬೆಳಿಗ್ಗೆ ಆಫೀಸಿಗೆ ಹೋಗಬಹುದೆ? ಹೇಗೆ ಹೋಗುವುದು ಎಂದು ವಿಚಾರ ಮಾಡುತ್ತಿದ್ದೆ. ನನ್ನ ಮನೆಯ ಹತ್ತಿರದ ವಾಹನ ನಿಬಿಡ ರಸ್ತೆಯಲ್ಲಿ ಒಂದೇ ಒಂದು ವಾಹನವೂ ಕಂಡುಬರುತ್ತಿರಲಿಲ್ಲ. ಬೆಳಿಗ್ಗೆ ಎದ್ದರೆ ಒಂದು ತರಹದ ನೀರವ ಮೌನ. ಹಾಲು ಸಿಗುವುದಿಲ್ಲವೇನೂ ಎಂದುಕೊಂಡು ಅವಸರದಲ್ಲಿ ಹಾಲಿನ ಬೂತಿಗೆ ಓಡಿದೆ. ಎಂದಿನಂತೆ ಹಾಲು ದೊರೆಯಿತು. ಕುಡಿಯುವ ನೀರು ದೊರೆಯದೇನೊ ಎಂದು ಕೊಂಡೆ ಯಾಕೆಂದರೆ ನೀರು ಸರಬರಾಜಿನ ಕಾರ್ಮಿಕರೂ ಬಂದ್ ಮಾಡುವವರಲ್ಲವೆ? ಎಂದಿನಂತೇ ನಲ್ಲಿಯಲ್ಲಿ ನೀರು ಬಂತು.

ಮುಂಚಿನ ದಿನವೇ ಮೆಟ್ರೊ ರೈಲಿನವರನ್ನು 11 ರಂದು ಮೆಟ್ರೊ ಓಡುವುದೇ ಎಂದು ವಿಚಾರಿಸಿದ್ದೆ. ಹೇಳಲು ಸಾಧ್ಯವಿಲ್ಲ ಎಂದಿದ್ದ. ಬಂದ್‌ನ ದಿನ ಆಫೀಸಿಗೆ ಹೋಗಲು ಸಾಧ್ಯವೇ ಎಂಬ ವಿಚಾರ ಬಂತು. ಸರಿ ರಸ್ತೆಗೆ ಬಂದೆ ಮುಖ್ಯ ರಸ್ತೆಯಲ್ಲಿ ಹುಡುಗರ ಕ್ರಿಕೆಟ್ ನಡೆಯುತ್ತಿತ್ತು. ಯಾವುದೇ ವಾಹನವಿಲ್ಲ. ಮನುಷ್ಯರು ಎತ್ತಿನ ಗಾಡಿಯೂ ಇಲ್ಲ. ಸೈಕಲ್ ರಿಕ್ಷಾವೂ ಇಲ್ಲ, ಮೆಟ್ರೊ ಸ್ಟೇಷನ್ ಹತ್ತಿರ ವಾಸಿಸುವ ಸ್ನೇಹಿತರಿಗೆ ಫೋನ್ ಮಾಡಿದೆ. ಮೆಟ್ರೊ ಓಡುತ್ತಿಲ್ಲ ಎಂಬ ಸುದ್ದಿ ಬಂತು.

ಆದರೂ ಹೋಗಿ ನೋಡೋಣವೆಂದು ಕೊಂಡೆ. ಬೆಳಿಗ್ಗೆ ಹತ್ತು ಗಂಟೆಗೂ ನಮ್ಮ ಮನೆಯ ಸುತ್ತ ಹಕ್ಕಿಗಳ ಕಲರವ, ಕಾಗೆಯ ಕೂಗು ಕೇಳಿಸುತ್ತಿತ್ತು.

ರಸ್ತೆಯಲ್ಲಿ ನಡೆಯ ತೊಡಗಿದರೆ ಮತ್ತದೇ ಕ್ರಿಕೆಟ್ಟಿನ ದೃಶ್ಯ. ಅಲ್ಲಲ್ಲಿ ನಡೆದಾಡುವ ಒಬ್ಬಿಬ್ಬರು ಒಂದೆರಡು ಅಂಬುಲೆನ್ಸ್‌ಗಳ ಓಡಾಟ. ಯಾರೂ ಈ ಅಂಬುಲೆನ್ಸ್‌ಗಳಿಗೆ ತೊಂದರೆ ಮಾಡಿದಂತೆ ಕಾಣಲಿಲ್ಲ. ನರ್ಸಿಂಗ್ ಹೋಮ್ ಒಂದರ ಮುಂದೆ ಒಂದು ಟ್ಯಾಕ್ಸಿಯನ್ನು ಕಂಡೆ. ಇಬ್ಬರು ಹುಷಾರಿಲ್ಲದ ಒಂದು



ನಿರ್ಜನವಾಗಿರುವ ರಸ್ತೆ ಮತ್ತು ವೃತ್ತ

ಮುದುಕಿಯನ್ನು ಟ್ಯಾಕ್ಸಿಯಲ್ಲಿ ತೆಗೆದುಕೊಂಡು ಬಂದಿದ್ದರು. ಮುಂದೆ "ಹಾಸ್ಪಿಟಲ್" ಎಂಬ ಒಂದು ಕೈ ಬರಹದ ಬೋರ್ಡಿತ್ತು. ಅಂದರೆ ರೋಗಿಗಳನ್ನು ತರಲಾದ ವಾಹನಗಳಿಗೆ ಯಾರೂ ತೊಂದರೆ ಮಾಡಿಲ್ಲ ಎಂಬುದು ಸ್ಪಷ್ಟ.

ಮೆಟ್ರೋ ಓಡುತ್ತಿರಲಿಲ್ಲ. ಕೆಲವು ದಿನಗಳ ಹಿಂದೆ ಕಾರ್ತಿಕ್ ಎಂಬ ನಮ್ಮ ಜವಾನ ಹೇಳಿದ ಮಾತು ನೆನಪಿಗೆ ಬಂತು. ಆತ ಹೇಳಿದ್ದ ಸರ್ ಬೇರೆ ಕಡೆಗೆ ಬಂದ್ ಎಂದರೆ ಅರ್ಧಕ್ಕರ್ಧ ವಾಣಿಜ್ಯ ಚಟುವಟಿಕೆಗಳು ನಡೆಯಬಹುದು. ಆದರೆ ಪ.ಬಂಗಾಳದಲ್ಲಿ ಏನೂ ನಡೆಯುವುದಿಲ್ಲ. ವಿಮಾನಗಳೂ ಹಾರಾಡುವುದಿಲ್ಲ. ಮೇ 11 ರಂದು ರೈಲುಗಳು ಓಡಲಿಲ್ಲ. ವಿಮಾನಗಳೂ ಹಾರಲಿಲ್ಲ. ಯಾವುದೇ ಆಫಿಸುಗಳೂ ನಡೆಯಲಿಲ್ಲ. ವ್ಯಾಪಾರ ವಹಿವಾಟುಗಳಂತೂ ಕೇಳುವುದೇ ಬೇಡ.

ನಿಜ ಔಷಧದ ಅಂಗಡಿಗಳಿಗೆ ಈ ಬಂದ್‌ನಿಂದ ವಿನಾಯತಿಯಿತ್ತು. ಅವು ಯಾವುದೇ ತೊಂದರೆ ಇಲ್ಲದೆ ಸಹಜವಾಗಿ ತೆರೆದಿದ್ದವು. ಅಲ್ಲಲ್ಲಿ ಹೂವು ಮಾರುವವರು ಹೂವನ್ನಿಟ್ಟುಕೊಂಡು ಮಾರುತ್ತಿದ್ದುದು ಕಂಡು ಬಂತು.

ಮುಖ್ಯ ರಸ್ತೆಗಳಲ್ಲಿ ಬಂದ್ ಯಶಸ್ವಿಗಾಗಿ, ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳು ಮತ್ತು ಬೆಲೆ ಏರಿಕೆ ವಿರುದ್ಧ ಘೋಷಣೆ ಕೂಗುವ ಶಿಸ್ತಿನ ಕಾರ್ಯಕರ್ತರ ಮೆರವಣಿಗೆಗಳು ನಡೆದವು. ಯಾವುದೇ ಅಹಿತಕರ ಘಟನೆಯಂತೂ ಕಂಡು ಬರಲಿಲ್ಲ. ಕೆಲವು ಪ್ರದೇಶಗಳಲ್ಲಿ ದ್ವಿಚಕ್ರ ವಾಹನಗಳಲ್ಲಿ ವಿಹಾರಾರ್ಥ ಹೊರಟವರನ್ನು ತಡೆದು ಗಾಡಿಗಳನ್ನು ತಳ್ಳಿಕೊಂಡು ಹೋಗಿ ಎಂದು ಕಳುಹಿಸಿದ ವರದಿ ಮರು ದಿನ ಬಂತು.

ಎಲ್ಲ ದೂರದೂರಗಳ ರೈಲುಗಳನ್ನು ವೇಳಾ ಪಟ್ಟಿಯನ್ನೆ ಬದಲಿಸಿ ಮರುದಿನಕ್ಕೆ ಮುಂದಕ್ಕೆ ಹಾಕಲಾಗಿತ್ತು. ಇಪತ್ನಾಲ್ಕು ಗಂಟೆಗಳ ಕಾಲ ಬಸ್ಸು ಟ್ರಾಮು, ಟ್ಯಾಕ್ಸಿ, ಲಾರಿ, ಯಾ ಇತರೆ ಯಾವುದೇ ವಾಹನ ಸಂಚಾರ ವಿರಲಿಲ್ಲ.


ಬಂದ್ ಅತ್ಯಂತ ಅಮಾನವೀಯವಾಗಿರುತ್ತದೆ ಎಂಬ ಅಪಪ್ರಚಾರದಲ್ಲಿ ಯಾವುದೇ ಹುರುಳಿಲ್ಲ. ಬದಲಿಗೆ ಅದ

ಬೆಳಿಗ್ಗೆ ಹತ್ತು ಗಂಟೆಗೂ ನಮ್ಮ ಮನೆಯ ಸುತ್ತ ಹಕ್ಕಿಗಳ ಕಲರವ, ಕಾಗೆಯ ಕೂಗು ಕೇಳಿಸುತ್ತಿತ್ತು.

ಅತ್ಯಂತ ಜವಾಬ್ದಾರಿಯುತ ಬಂದ್ ಎಂಬುದು ಎಂತಹವರಿಗೂ ಮನದಟ್ಟಾಗುವಂತದ್ದು. ಹಿಂಸಾಚಾರ ಎಲ್ಲಿಯೂ ಇರಲಿಲ್ಲ. ಬದಲಿಗೆ ಕೇಂದ್ರದ ಆರ್ಥಿಕ ನೀತಿಗಳು ಮತ್ತು ಬೆಲೆ ಏರಿಕೆಯ ವಿರುದ್ಧ ಎಂಬ ಸಂದೇಶವನ್ನು ಸ್ಪಷ್ಟವಾಗಿ ನೀಡಿತು.

ಬಂದ್ ಎಲ್ಲಿಯೂ ಆಗಿಯೇ ಇಲ್ಲ. ಜನ ಜೀವನ ಎಂದಿನಂತೆ ಇತ್ತು ಎಂಬ ಕೇಂದ್ರ ಸರ್ಕಾರದ ಮತ್ತು ಬಿಜೆಪಿ ನೇತೃತ್ವದ ಸರ್ಕಾರದ ಪ್ರಚಾರ ಎಂತಹ ಅಪ್ಪಟ ಸುಳ್ಳು ಎಂಬುದನ್ನು ಇದು ಸ್ಪಷ್ಟವಾಗಿ ತಿಳಿಸುತ್ತದೆ. ಇದು ಹುಡುಗಾಟಿಕೆಯ ಬಂದ್ ಅಲ್ಲ. ಅತ್ಯಂತ ಜವಾಬ್ದಾರಿಯುತ ರಾಜಕೀಯ ಬಂದ್ ಎಂಬುದು ಎಂತಹವರಿಗೂ ಗೊತ್ತಾಗುತ್ತದೆ.

ಉದ್ಯೋಗ ಸೃಷ್ಟಿ ಒತ್ತಾಯಿಸಿ ಜಾಗತೀಕರಣ ನೀತಿ ವಿರೋಧಿಸಿ ಮೇ 10 ರಂದು ದಕ್ಷಿಣ ಆಫ್ರಿಕಾದಲ್ಲಿ ಸಾರ್ವತ್ರಿಕ ಮುಷ್ಕರ



ಸಾರ್ವತ್ರಿಕ ಮುಷ್ಕರಗಳು (ಅದೂ ಜಾಗತೀಕರಣವನ್ನು ವಿರೋಧಿಸಿದರಂತೂ ಮುಗಿದೇ ಹೋಯಿತು) ಯಾವಾಗಲೂ ಬೂರ್ಜ್ವಾ ಮಾಧ್ಯಮಗಳಿಗೆ ಸುದ್ದಿಗಳಾಗುವುದಿಲ್ಲ. ನಮ್ಮ ದೇಶದ ಮೇ 11ರ ಸಾರ್ವತ್ರಿಕ ಮುಷ್ಕರವನ್ನು ನಮ್ಮ ಸುದ್ದಿಮಾಧ್ಯಮಗಳು ಎಷ್ಟರ ಮಟ್ಟಿಗೆ ಸಾಧ್ಯವೋ ಅಷ್ಟು ನಿರ್ಲಕ್ಷಿಸಿದವು. ಇದೇ ಗತಿ ಅದರ ಹಿಂದಿನ ದಿನ (ಅಂದರೆ ಮೇ 10 ರಂದು) ದಕ್ಷಿಣ ಆಫ್ರಿಕಾದಲ್ಲಿ ನಡೆದ ಸಾರ್ವತ್ರಿಕ ಮುಷ್ಕರಕ್ಕೂ ಆಯಿತು. ಜಾಗತಿಕ ಸುದ್ದಿಮಾಧ್ಯಮಗಳು ದನ್ನು ಪೂರ್ತಿ ಸೆನ್ಸಾರ್ ಮಾಡಿದವು.

ಸುಮಾರು 40 ಲಕ್ಷ ಕಾರ್ಮಿಕರು ಭಾಗವಹಿಸಿದ ಈ ಸಾರ್ವತ್ರಿಕ ಮುಷ್ಕರ ದಕ್ಷಿಣ ಆಫ್ರಿಕಾದ ಸರ್ಕಾರ ಅನುಸರಿಸುತ್ತಿರುವ ಉದ್ಯೋಗ ನಷ್ಟಕ್ಕೆ ಹಾದಿ ಮಾಡಿಕೊಡುತ್ತಿರುವ ಜಾಗತೀಕರಣ -ಪರ ನೀತಿಗಳನ್ನು ವಿರೋಧಿಸಿ ಆಗಿತ್ತು. ಈ ಮುಷ್ಕರಕ್ಕೆ ದಕ್ಷಿಣ ಆಫ್ರಿಕಾದ ಅತಿ ದೊಡ್ಡ ಟ್ರೇಡ್ ಯೂನಿಯನ್ ಕೊಸಾಟು (Cosatu ದಕ್ಷಿಣ ಆಫ್ರಿಕಾದ ಟ್ರೇಡ್‌ಯೂನಿಯನ್‌ಗಳ ಕಾಂಗ್ರೆಸ್) ಕರೆ ಕೊಟ್ಟಿತ್ತು. ಮುಷ್ಕರದಲ್ಲಿ ಭಾಗವಹಿಸಿದ ಕಾರ್ಮಿಕರ ಸಂಖ್ಯೆ (40 ಲಕ್ಷ) 'ಕೊಸಾಟು'ನ ಸದಸ್ಯತ್ವದ(18ಲಕ್ಷ) ಇಮ್ಮಡಿಗಿಂತಲೂ ಹೆಚ್ಚು. ಅಂದರೆ ದಕ್ಷಿಣ ಆಫ್ರಿಕಾದ ಸಂಘಟಿತ ಕೈಗಾರಿಕಾ ಕಾರ್ಮಿಕರಲ್ಲಿ (ಸುಮಾರು 50 ಲಕ್ಷ) ಶೇಕಡಾ 80 ಇದರಲ್ಲಿ ಭಾಗವಹಿಸಿದ್ದರು. ಅಲ್ಲದೆ ಮುಷ್ಕರ ಯಾವುದೇ ಆರ್ಥಿಕ ಸವಲತ್ತಿನ ಬೇಡಿಕೆಗಾಗಿ ಇರದೆ, ಸರ್ಕಾರದ ನೀತಿಯ ಬಗ್ಗೆ ಇತ್ತು ಎಂದಾಗ ಈ ಮುಷ್ಕರದ ಮಹತ್ವ ಗೊತ್ತಾಗುತ್ತದೆ. ಆದ್ದರಿಂದ ಸಾಮ್ರಾಜ್ಯಶಾಹಿ ಮಾಧ್ಯಮಗಳ 'ಸೆನ್ಸಾರ್' ಸಹ.

ಕೊಸಾಟು ಹಮ್ಮಿಕೊಂಡಿದ್ದ ಈ ಸಾರ್ವತ್ರಿಕ ಮುಷ್ಕರ ಸುಮಾರು ಮೂರು ತಿಂಗಳ ಪ್ರಚಾರ - ಪ್ರಕ್ಷೋಭೆಯ ಆಖೈರು ಹಂತವಾಗಿತ್ತು. ಫೆಬ್ರುವರಿ - ಮಾರ್ಚ್‌ಗಳಲ್ಲಿ ಕೈಗಾರಿಕಾ ಕ್ಷೇತ್ರ ಪ್ರದೇಶವಾರಾಗಿ ಈ ಪ್ರಚಾರ ಪ್ರಕ್ಷೋಭೆಯ ಭಾಗವಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಇದು ದಕ್ಷಿಣ ಆಫ್ರಿಕಾದ ಇಡೀ ಕಾರ್ಮಿಕ ವರ್ಗವನ್ನು ಒಳಗೊಂಡ ಅತ್ಯಂತ ವ್ಯಾಪಕ ಕಾರ್ಯಕ್ರಮವಾಗಿತ್ತು. ಉದ್ಯೋಗನಾಶ ಮುಂದುವರೆಯುವವರೆಗೆ ಈ ಕಾರ್ಯಕ್ರಮ ಮುಂದುವರೆಯುತ್ತದೆ ಎಂದು ಕೊಸಾಟು ಕೇಂದ್ರ ಸಮಿತಿ ಹೇಳಿದೆ. ಕಾರ್ಮಿಕ ವರ್ಗದ ಒಕ್ಕೊರಲಿನ ಈ ಕೂಗನ್ನು ದಕ್ಷಿಣ ಆಫ್ರಿಕಾದ ಸರ್ಕಾರ, ಮತ್ತು ವಾಣಿಜ್ಯ-ಕೈಗಾರಿಕಾ ವಲಯಗಳ ಮನ್ನಿಸಿ ಕ್ರಮಕೈಗೊಳ್ಳಬೇಕು. ಉದ್ಯೋಗಾವಕಾಶ ಮತ್ತು ಜಾಗತೀಕರಣದ ಒತ್ತಡದಿಂದ ಸರ್ಕಾರ ಅನುಸರಿಸುತ್ತಿರುವ ನೀತಿಗಳ ನಡುವೆ ಇರುವ ಕೊಂಡಿ ದೇಶದ ಮುಂದಿರುವ ಅತ್ಯಂತ ಗಂಭಿರ ಸಮಸ್ಯೆ ಎಂಬುದನ್ನು ಕಾರ್ಮಿಕವರ್ಗ ಒಕ್ಕೊರಲಿನಿಂದ ಹೇಳಿದೆ. ಇದು ಬರಿಯ ಕೊಸಾಟುವಿನ 'ಸಮಸ್ಯೆ' ಈ ಕ್ರಮ 'ಬೇಜವಾಬ್ದಾರಿ ಮತ್ತು ಅನಗತ್ಯ ಕ್ರಮ' ಎಂದು ಕುಹಕ ಮತ್ತು ಟೀಕೆ ಮಾಡಿರುವವರು ಈಗ ಎಚ್ಚೆತ್ತು- ಕೊಳ್ಳಬೇಕು ಎಂದು ಕೊಸಾಟು ಕೇಂದ್ರ ಸಮಿತಿ ಹೇಳಿದೆ.

90 ರ ದಶಕದಲ್ಲಿ 8 ಲಕ್ಷ ಉದ್ಯೋಗ ನಷ್ಟ ಆಗಿದೆ. ಇದರಲ್ಲಿ ಒಂದುವರೆ ಲಕ್ಷ ಬರಿ ಗಣಿಕ್ಷೇತ್ರದಲ್ಲೇ ಆಗಿದೆ. ಸಾಮೂಹಿಕ ಉತ್ಪಾದನೆ ಮತ್ತು ಕಟ್ಟಡ ಕೈಗಾರಿಕೆಗೆ ತಲಾ ಒಂದು ಲಕ್ಷ ಉದ್ಯೋಗ ನಷ್ಟ ಆಗಿದೆ. ಇದಕ್ಕೂ ಜಾಗತೀಕರಣದ ಒತ್ತಡದಿಂದ (ಅದರಲ್ಲೂ WTO ಹೊರಿಸಿದುದು)



ಸರ್ಕಾರ ಅನುಸರಿಸುತ್ತಿರುವ ನೀತಿಗಳಿಗೂ ಸಂಬಂಧ ಇದೆ. ಆ ನೀತಿಗಳನ್ನು ಸರಿಪಡಿಸಬೇಕೆಂದು ಕೊಸಾಟು ಒತ್ತಾಯಿಸಿದೆ. ಉದ್ಯೋಗ ನಾಶ ನಿಲ್ಲಿಸಿ, ಉದ್ಯೋಗ ಸೃಷ್ಟಿಸುವ ನೀತಿಗಳನ್ನು ಅಂಗೀಕರಿಸುವತ್ತ ಕೊಸಾಟು ಈ ಕೆಳಗಿನ ಕ್ರಮಗಳಿಗೆ ಒತ್ತಾಯಿಸಿದೆ.

- ರಿಟ್ರೆಂಚ್‌ಮೆಂಟ್ ಮೊದಲು ಯೂನಿಯನ್‌ಗಳ ಜ... ಮಾತುಕತೆ ಅನಿವಾರ್ಯ ಮಾಡಲು ಲೇಬರ್ ಕಾನೂನಿನಲ್ಲಿ ಬದಲಾವಣೆ.
- ಬೇಕಾಬಿಟ್ಟಿ ಕಂಪನಿ ದಿವಾಳಿ ಘೋಷಣೆ ನಿಯಂತ್ರಿಸಲು ದಿವಾಳಿ ಕಾನೂನಿನಲ್ಲಿ ಅಗತ್ಯ ಪರಿವರ್ತನೆ.
- ಸರ್ಕಾರ ಮತ್ತು ಸರ್ಕಾರಿ -ಸ್ವಾಮ್ಯದ ಸಂಘಟನೆಗಳ ಏಕಪಕ್ಷೀಯ ಬದಲಾವಣೆಗಳನ್ನು ತಂದು ಉದ್ಯೋಗ ನಾಶಕ್ಕೆ ಕಾರಣವಾಗುವ ಎನ್.ಎಫ್.ಎ. ಒಪ್ಪಂದದ ಬಗ್ಗೆ ಸರ್ಕಾರ ಪುನರ್ವಿಮರ್ಶೆ ಮಾಡಬೇಕು.
- WTO ಜತೆ ಒಪ್ಪಂದದ ಪ್ರಕಾರ ಆಮದು ನಿರ್ಬಂಧಗಳನ್ನು ವೇಗವಾಗಿ ಸಡಿಲಿಸುವ ನೀತಿಗಳ ಪುನರ್ವಿಮರ್ಶೆ.
- ಈಗ ದೇಶದ ವಾಣಿಜ್ಯ-ಕೈಗಾರಿಕಾ ಸಂಘಟನೆಗಳು ಆಚರಿಸುತ್ತಿರುವ ಬಂಡವಾಳ 'ಹೂಡಿಕೆ ನಿಲ್ಲಿಸುವ ಮುಷ್ಕರ' ನಿಲ್ಲಿಸುವಂತೆ ಕ್ರಮಗಳು.
- ಉದ್ಯೋಗ ನಾಶ ಮಾಡುವ ಉದ್ಯೋಗ ಸೃಷ್ಟಿಗೆ ಮಾರಕವಾದ ಎಲ್ಲಾ ನೀತಿಗಳನ್ನು ನಿಲ್ಲಿಸುವುದು.

ಕೊಸಾಟು ಎಎನ್‌ಸಿ-ಕಮ್ಯೂನಿಸ್ಟ್ ಪಕ್ಷ ಎಂಬ ತ್ರಿವಳಿ ನಿಜವಾಗಿಯೂ ದಕ್ಷಿಣ ಆಫ್ರಿಕಾದ ಆಳುವ ರಂಗ ಎಂದು ಗೊತ್ತಿರುವವರಿಗೆ ಈ ಮುಷ್ಕರ ಆಶ್ಚರ್ಯ ತರಬಹುದು. ದಕ್ಷಿಣ ಆಫ್ರಿಕಾದ ಆಳುವವರ್ಗ, ಬಿಳಿಯರ ಪ್ರತಿರೋಧ, ಸಾಮ್ರಾಜ್ಯಶಾಹಿ ವಿರುದ್ಧ ಸೆಣಸಾಡಬೇಕಾಗಿರುವ ವಿಶಿಷ್ಟ ಪರಿಸ್ಥಿತಿ ಗೊತ್ತಿರುವವರಿಗೆ ಇದು ಆಶ್ಚರ್ಯ ತರಬೇಕಾಗಿಲ್ಲ. ಸಾಮ್ರಾಜ್ಯಶಾಹಿ, ದೇಶದ ಆಳುವ ವರ್ಗಗಳು ಹೊರಿಸಿರುವ ಮಿತಿಯೊಳಗೆ ಕೆಲಸ ಮಾಡಬೇಕಾಗಿರುವ ಸರ್ಕಾರದ ಅಸಹಾಯಕತೆ ಗೊತ್ತಿದ್ದೂ ಕೊಸಾಟು ಈ ಸಾಮೂಹಿಕ ಕಾರ್ಯಾಚರಣೆ ಮೂಲಕ ಬೇಕಾದ ಒತ್ತಡ ನಿರ್ಮಿಸುತ್ತಿದೆ. ಈ ಕಾರ್ಯಾಚರಣೆ ಸರ್ಕಾರವನ್ನು ಬಲಗೊಳಿಸುತ್ತದೆ. ಸಾಮ್ರಾಜ್ಯಶಾಹಿ ಹಾಗೂ ದೇಶದ ಆಳುವ ವರ್ಗದ ಮೇಲೆ ಒತ್ತಡ ಹೇರುತ್ತದೆ.

ದುಡಿಮೆಯ ಕೆಂಬಾವುಟ

ಮೇ ದಿನದ ಕಥಾನಕ

ಮೂರು ಕಾರ್ಖಾನೆಗಳು ಮೇ ದಿನೋತ್ಸವವನ್ನು ಜೊತೆಗೂಡಿ ಆಚರಿಸಲು ನಿರ್ಧರಿಸಿದವು. ನಗೋರ್ನಯ, ಲಿತೇಯ್ನಯ, ಮಾರ್ಷೆವಯ ಮತ್ತಿತರ ಬೀದಿಗಳ ಕಾರ್ಮಿಕರು ಒಟ್ಟಿಗೆ ಸೇರಿ ಒತ್ತಾದ ಸಾಲುಗಳಲ್ಲಿ ನಗರದ ಕೇಂದ್ರಕ್ಕೆ ನಡೆದರು.

ಬೆಳಗ್ಗೆ ಗೋಷ್ಕನ ತಂದೆ ಇತರ ಕಾರ್ಮಿಕರೊಂದಿಗೆ ತನ್ನ ಕಾರ್ಖಾನೆಗೆ ಹೊರಟ.

"ನಾನೂ ನಿನ್ನ ಜೊತೆಗೆ ಬರುತ್ತಿನಪ್ಪ" ಗೋಷ್ಕ ಅವನನ್ನು ಕೇಳಿದ "ನೀನಿನ್ನೂ ಚಿಕ್ಕವ" ತಂದೆ ನಗುತ್ತ ಹೇಳಿದ. "ನೀನು ಮನೆಯಲ್ಲೇ ಇರು."

"ಇಲ್ಲ. ನಾನೂ ಬರುತ್ತೀನಪ್ಪ" ಗೋಷ್ಕ ಹಟ ಹಿಡಿದ. "ನೋಡು ನಿನ್ನೆ ನಾನು ಏನು ಮಾಡಿದೀನಿ ಅಂತ" ಎಂದವನು ತನ್ನ ತಂದೆಗೆ ಒಂದು ಪುಟ್ಟ ಕೆಂಬಾವುಟವನ್ನು ತೋರಿಸಿದ.

"ಬಾವುಟ ಚೆನ್ನಾಗಿದೆ" ಅಪ್ಪ ಒಪ್ಪಿಕೊಂಡ. ಆದರೂ ಮಗನನ್ನು ಮನೆಯಲ್ಲೇ ಬಿಟ್ಟ.

ಗೋಷ್ಕ ಮನೆಯಲ್ಲೇ ಉಳಿದ. ಕೋಣೆಯಲ್ಲೇ ಶತಪಥ ಹಾಕಿದ. ತಾನು ಮಾಡಿದ್ದ ಕೆಂಬಾವುಟವನ್ನು ಎದೆಗೆ ಒತ್ತಿಹಿಡಿದ. ಅನಂತರ ಬಾಗಿಲಿನ ಬಳಿಗೆ ಹೋದ.

"ಎಲ್ಲಿಗೆ ಹೋಗುತ್ತಿದ್ದೀಯೋ?" ತಾಯಿ ತುಸು ಗಾಬರಿಯಿಂದ ಕೇಳಿದಳು.

"ಸುಮ್ಮನೆ ವಾಂಕ ಸೆರ್ಯೇಗಿನ್‌ನನ್ನು ಕಾಣಲು"

ಹಾಗೆಂದು ಅವನು ಅಂಗಳಕ್ಕೆ ಓಡಿದ. ಮೊದಲು ವಾಂಕನ ಮನೆಯತ್ತ ಹೋಗುವವನಂತೆ ಸೋಗು ಹಾಕಿದ. ಅನಂತರ ವಾಯು ವೇಗದಲ್ಲಿ ನಗೋರ್ನಯ ಬೀದಿಯ ದಿಕ್ಕಿನಲ್ಲಿ ಓಡಿದ.

ಅವನು ಅಲ್ಲಿಗೆ ಹೋದಾಗ ಆಗಲೇ ಒಂದು ಗುಂಪು ನೆರೆದಿತ್ತು. ಕಾರ್ಮಿಕರ ಒಂದು ಕಂಬಸಾಲು ಬೀದಿಯಲ್ಲಿ ನಡೆದಿದ್ದಿತು. ಮುಂದುಗಡೆ, ಅವರ ತಲೆಗಳ ಮೇಲೆ ಕೆಂಬಾವುಟವೊಂದು, ಹಾರಾಡುತ್ತಿದ್ದಿತು.

ಕಾರ್ಮಿಕರು ಹಾದುಹೋಗುವವರೆಗೂ ಕಾದಿದ್ದು ಗೋಷ್ಕ ಅನಂತರ ಕಂಬ ಸಾಲಿನ ಕೊನೆಯಲ್ಲಿ ತಾನೂ ಮೆರವಣಿಗೆಯನ್ನು ಸೇರಿಕೊಂಡ. ತನ್ನ ಪುಟ್ಟ ಕೆಂಬಾವುಟವನ್ನು ಹೊರಕ್ಕೆ ತೆಗೆದು ಹಿಡಿದುಕೊಳ್ಳಬೇಕೆನ್ನುವಷ್ಟರಲ್ಲೇ ಅವನಿಗೆ ಯಾರೋ ಗದರಿಸಿ ಹೇಳಿದರು.

"ಏಯ್, ಹೋಗು ಮನೆಗೆ ಹೋಗು! ಅಮ್ಮನ ಬಳಿಗೆ ಹೋಗು!"

"ಇಲ್ಲ. ನಾನೂ ನಿಮ್ಮ ಜೊತೆ ಇರ್ತಿನಿ. ನಾನೂ ಮೇ ದಿನೋತ್ಸವ ಆಚರಿಸುತ್ತೀನಿ"

"ಸುಮ್ಮನೆ ಹರಟ ಬೇಡ. ಹುಂ, ಹೊರಡು ಈ ಕೂಡಲೇ!"

ಹೊರಡುವುದು ಬಿಟ್ಟು ಗೋಷ್ಕನಿಗೆ ಬೇರೆ ಮಾರ್ಗವೇ ಇರಲಿಲ್ಲ.

ಗೋಷ್ಕ ಒಂದು ಘಳಿಗೆ ಯೋಚನೆ ಮಾಡುತ್ತ ನಿಂತಿದ್ದು ಅನಂತರ ಲಿತೇಯ್ನಯ ಬೀದಿಗೆ ಓಡಿದ. ಅಲ್ಲೂ ಆಗಲೇ ಕಾರ್ಮಿಕರು ಕಂಬ ಸಾಲಿನಲ್ಲಿ ಮೆರವಣಿಗೆ ನಡೆದಿದ್ದರು ಅವರ ತಲೆಗಳ ಮೇಲೂ ಕೆಂಬಾವುಟ ಹಾರಾಡುತ್ತಿದ್ದಿತು.

ಗೋಷ್ಕ ಮೆರವಣಿಗೆ ಸೇರಿಕೊಂಡ, ತನ್ನ ಪುಟ್ಟ ಕೆಂಬಾವುಟ ಹೊರಗೆ ತೋರಬೇಕೆನ್ನುವಾಗ ಯಾರೋ ತಟಕ್ಕನೆ ಕೇಳಿದರು

"ಏನಿಲ್ಲ. ನಾನು..."

"ಹೌದಾ? ನನ್ನ ಬೆಲ್ಟಿನ ರುಚಿ ತೋರಿಸಲಾ?! ಹುಂ, ಹೋಗು ಮನೆಗೆ!"

ಗೋಷ್ಕ ಹಿಂದೆ ನಿಂತ. ಒಂದು ಘಳಿಗೆ ಯೋಚಿಸಿದ. ಆಮೇಲೆ ಮಾರ್ಷೆವಯ ಬೀದಿಯ ಕಡೆಗೆ ಓಡಿದ.

ಅಲ್ಲೂ ಜನರ ಗುಂಪು ನೆರೆದಿತ್ತು. ಕಾರ್ಮಿಕರು ಮೆರವಣಿಗೆ ಹೊರಟಿದ್ದರು. ಅವರ ತಲೆಗಳ ಮೇಲೆ ಕೆಂಬಾವುಟ ಹಾರಾಡುತ್ತಿತ್ತು.

ಗೋಷ್ಕ ಕಾರ್ಮಿಕರ ಬಳಿಗೆ ಹೋಗಿ ಉಪಾಯದಿಂದ ಹೇಳಿದ :

"ನಾನು ಅಪ್ಪನನ್ನು ಕಾಣಬೇಕಾಗಿದೆ. ಅಮ್ಮ ಕಳಿಸಿಕೊಟ್ಟಿದ್ದಾಳೆ. ಅವನು ಅಲ್ಲಿ ಮುಂದಿದ್ದಾನೆ."

ಕಾರ್ಮಿಕರು ಪಕ್ಕಕ್ಕೆ ಸರಿದು ಗೋಷ್ಕಗೆ ಹೋಗಲು ದಾರಿಮಾಡಿಕೊಟ್ಟರು. ಅವನು ಮುಂದಿನ ಸಾಲಿನವರೆಗೂ ಹೋದ. ಆಳವಾಗಿ ಉಸಿರಾಡಿ ಸುತ್ತ ನೋಡಿದ. ಸ್ವಲ್ಪ ದೂರ ಬಲಗಡೆ ಅವನ ಅಪ್ಪ ನಡೆದಿದ್ದ. ಅವನು ಕೈಯಲ್ಲಿ ಕೆಂಬಾವುಟ ಹಿಡಿದು ನಡೆದಿದ್ದ.

ಗೋಷ್ಕ ಕೂಡಲೇ ಹಿಂದಿನ ಸಾಲಿಗೆ ಹೋಗಲು ಯತ್ನಿಸಿದ. ಆದರೆ ಆಗಲೇ ತಡವಾಗಿತ್ತು.

"ಏಯ್, ಬಾ ಇಲ್ಲಿ" ಅಪ್ಪ ಸಂಜ್ಞೆಮಾಡಿ ಕರೆದ.

ಗೋಷ್ಕ ವಿಧೇಯತೆಯಿಂದ ಹೋದ.

"ಏನಾಗಿದೆ ನಿನಗೆ? ಅಪ್ಪ ಅಮ್ಮನ ಮಾತು ಕೇಳಬಾರದು ಅಂತಾನಾ?

"ಇಲ್ಲಪ್ಪ. ನಾನೂ ಎಲ್ಲರಂತೆಯೇ ಇರಬೇಕೂಂತ. ನನಗೂ ಎಲ್ಲರ ಜೊತೆ ಹೋಗಬೇಕೂಂತ ಇಷ್ಟ. ನಾನಾಗಲೇ ಇದನ್ನು ಮಾಡಿಕೊಂಡಿದ್ದೀನಿ. ನೋಡು" ಎನ್ನುತ್ತ ಗೋಷ್ಕ ತನ್ನ ಕೋಟಿನ ಒಳಗೆ ಅಡಗಿಸಿಟ್ಟಿದ್ದ ಪುಟ್ಟ ಕೆಂಬಾವುಟವನ್ನು ಹೊರಗೆಳೆದು ತೋರಿಸಿದ.

ಅಪ್ಪ ತನ್ನ ಮಗನ ಜಾಣ್ಮೆಯನ್ನು ಕಂಡು ಸಂತಸದಿಂದ ನಕ್ಕ ಇತರ ಕಾರ್ಮಿಕರೂ ನಗ ತೊಡಗಿದರು.

"ಅಲ್ನೋಡು - ಕೆಂಬಾವುಟ!"

"ನಿಜವಾದ ಬಾವುಟ!"

"ಕೆಂಪಗೂ ಇದೆ!"

ಅಪ್ಪ ತನ್ನ ಕೈಲಿದ್ದ ದೊಡ್ಡದಾದ ಕೆಂಬಾವುಟವನ್ನು ನೋಡಿದ ಮತ್ತೊಮ್ಮೆ ನಕ್ಕು ಗೋಷ್ಕನ ಕೈಲಿದ್ದ ಪುಟ್ಟ ಕೆಂಬಾವುಟವನ್ನು ನೋಡಿದ. ಮತ್ತೊಮ್ಮೆ ನಕ್ಕು ಗೋಷ್ಕನ ತಲೆ ನೇವರಿಸಿದ.

"ಸರಿ. ಈಗ ಮನೆಗೆ ಅಮ್ಮನ ಬಳಿಗೆ ಹೋಗು."

"ಇಲ್ಲಪ್ಪ. ನಾನು..."

ಗೋಷ್ಕಗೆ ಮಾತು ಮುಗಿಸಲೂ ಅವಕಾಶ ಸಿಗಲಿಲ್ಲ. ಬಂದೂಕ ಧಾರಿಗಳಾದ ಸೈನಿಕರ ಒಂದು ತಂಡ ಪಕ್ಕದ ಬೀದಿಯಿಂದ ಹೊರ ಬಂದು ಮೆರವಣಿಗೆಕಾರರ ಮಾರ್ಗದಲ್ಲಿ ಅಡ್ಡ ನಿಂತಿತು.

"ನಿಲ್ಲಿಸಿ!" ಸೈನ್ಯಾಧಿಕಾರಿಯೊಬ್ಬ ಕಾರ್ಮಿಕರಿಗೆ ಕೂಗಿ ಹೇಳಿದ: "ಮುನ್ನಡೆಯದಿರಿ!"

ಮೆರವಣಿಗೆಗಾರರು ನಡಿಗೆ ನಿಧಾನಗೊಳಿಸಿ ಅನಂತರ ನಿಂತರು. "ಚೆದುರಿ!"

ಕಾರ್ಮಿಕರು ಹೆಚ್ಚು ಒತ್ತಾಗಿ ನಿಂತರು, ಗೋಷ್ಕನ ತಂದೆಯ ಮತ್ತು ಅವನು ಹಿಡಿದಿದ್ದ ಬಾವುಟದ ಸುತ್ತ ಒತ್ತಾಗಿ ನಿಂತರು.

"ಬಂದೂಕಗಳನ್ನು ಸಿದ್ಧಗೊಳಿಸಿ!" ಸೈನ್ಯಾಧಿಕಾರಿ ಸೈನಿಕರಿಗೆ ಅಜ್ಞೆ ನೀಡಿದ. ಸೈನಿಕರು ಬಂದೂಕಗಳನ್ನು ಎತ್ತಿ ಹಿಡಿದರು.

> **ಪುಟ್ಟ ಹುಡುಗ ಸುತ್ತ ನೋಡಿದ ಸೈನಿಕರು ತಮ್ಮ ಬಂದುಕಗಳನ್ನು ತಗ್ಗಿಸಿ ಕಾಲುದಾರಿಗೆ ಸರಿಯುತ್ತ ಕಾರ್ಮಿಕರಿಗೆ ದಾರಿ ಬಿಟ್ಟು ಕೊಡುತ್ತಿದ್ದರು.**

"ಮಗು.." ಗೋಷ್ಕನ ತಂದೆ ಪಿಸುಮಾತಿನಲ್ಲಿ ಹೇಳಿದ. "ಮಗು, ಓಡು, ಓಡಿ ಹೋಗು!" ಆದರೆ ಗೋಷ್ಕ ಮಿಸುಕಲಿಲ್ಲ.

"ಯಾರಿಗೆ ಹೇಳ್ತಿರೋದು, ಓಡು!" ಅಪ್ಪ ಕೂಗಿ ಗೋಷ್ಕನನ್ನು ಬಲವಂತವಾಗಿ ದೂರ ತಳ್ಳಿದ.

ಗೋಷ್ಕ ಮೆರವಣಿಗೆ ಬಿಟ್ಟು ಕಾಲುದಾರಿಗೆ ಹೋಗಿ ನಿಂತ ಮುಖದ ಮೇಲೆ ದಿಗ್ಭ್ರಮೆಯ ಭಾವನೆಯೊಂದಿಗೆ ಆ ಪುಟ್ಟ ಹುಡುಗ ಅಲ್ಲಿ ನಿಂತ. ಸೈನಿಕರಿಂದ ಕಾರ್ಮಿಕರತ್ತ, ಕಾರ್ಮಿಕರಿಂದ ಸೈನಿಕರತ್ತ ನೋಡುತ್ತ ನಿಂತ. ಸೈನ್ಯಾಧಿಕಾರಿ ಕೈ ಮೇಲೆತ್ತಿದುದನ್ನು, ಸೈನಿಕರು ತಮ್ಮ ಬಂದೂಕಗಳನ್ನು ಹೆಗಲಿಗೆ ಒತ್ತಿ ಹಿಡಿದುದನ್ನು, ಗಮನಿಸಿದ. ಇನ್ನೊಂದು ಕ್ಷಣ, ಅವರು ಗುಂಡು ಹಾರಿಸುವರು.

ಆಗ ಇದ್ದಕ್ಕಿದ್ದಂತೆ ಹಾಡು ಕೇಳಿ ಬಂದಿತು:

ಕಟ್ಟಿದೆಯ ಗೆಳೆಯರೇ, ಹೆಜ್ಜೆ ಹಾಕುತ ಬನ್ನಿ, ಮುಂದೆ ಬನ್ನಿ!
ಬೆಳೆಯುವೆವು ನಾವು, ಬಲಿಯುವೆವು ನಾವು,
ಹೋರಾಟದಲ್ಲಿ,
ಸ್ವಾತಂತ್ರ್ಯ, ಸಾಮ್ರಾಜ್ಯ ಕೊಯ್ಯುವಾ ಮಾರ್ಗವನು
ಸ್ವಂತ ಶ್ರಮದಿಂದ ತ್ಯಾಗಗಳಿಂದ ರಚಿಸೋಣ ಬನ್ನಿ!

ಗೋಷ್ಕನ ತಂದೆಯೇ ಈ ಹಾಡನ್ನು ಗಟ್ಟಿಯಾಗಿ ಹಾಡಿದ. ಹಾಡುತ್ತ ಅವನು ಕೆಂಬಾವುಟವನ್ನು ಬೀಸಿಕೊಂಡು ಮುನ್ನಡೆದ. ಕಾರ್ಮಿಕರೂ ಅವನೊಂದಿಗೇ ಒಟ್ಟಾಗಿ ಹಾಡುತ್ತ ನಡೆದರು. ಅವರ ಕ್ರಿಯೆಗಳೆಲ್ಲ ಒಬ್ಬ ವ್ಯಕ್ತಿಯ ಕ್ರಿಯೆಗಳೇ ಎನ್ನುವಂತೆ ಒಂದೇ ಸ್ಥಾಯಿಯಲ್ಲಿ ಚಲಿಸುತ್ತ ಅವರು ಸೈನಿಕರ ಮೇಲೆ ನುಗ್ಗಿ ನಡೆದರು.

"ಗುಂಡು ಹಾರಿಸಿ!" ಸೈನ್ಯಾಧಿಕಾರಿ ಅಜ್ಞಾಪಿಸಿದ.

"ಅಪ್ಪ! ಅಪ್ಪ!" ಗೋಷ್ಕ ಕೂಗಿಕೊಂಡು ತಾನೂ ಮೆರವಣಿಗೆಯ ಮಧ್ಯೆ ಸೇರಿಕೊಂಡ. ಅಪ್ಪನವರೆಗೂ ಓಡಿಹೋಗಿ ಅವನ ಷರಾಯಿಗಳಲ್ಲಿ ತನ್ನ ಮುಖ ಮುಚ್ಚಿಕೊಂಡು ಕೂಗಿದ. "ಅಪ್ಪ ! ಅಪ್ಪ!"

ಅವನ ತಂದೆ ಕೆಳಗೆ ಬಾಗಿ ಗೋಷ್ಕನನ್ನು ಎತ್ತಿಕೊಂಡು ತನ್ನ ಹೆಗಲ ಮೇಲೆ ಕೂರಿಸಿಕೊಂಡ.

ಪುಟ್ಟ ಹುಡುಗ ಸುತ್ತ ನೋಡಿದ : ಸೈನಿಕರು ತಮ್ಮ ಬಂದುಕಗಳನ್ನು ತಗ್ಗಿಸಿ ಕಾಲುದಾರಿಗೆ ಸರಿಯುತ್ತ ಕಾರ್ಮಿಕರಿಗೆ ದಾರಿ ಬಿಟ್ಟು ಕೊಡುತ್ತಿದ್ದರು.

"ಗುಂಡು ಹಾರಿಸಿ! ಗುಂಡು ಹಾರಿಸಿ!" ಸೈನ್ಯಾಧಿಕಾರಿ ಬೊಗುಳಿದ. ಆದರೆ ಯಾರೂ ಅವನ ಆಜ್ಞೆಗೆ ಕಿವಿಗೊಡಲಿಲ್ಲ.

ಗೋಷ್ಕ ಮುಗುಳ್ನಗುತ್ತ ಸೈನಿಕರನ್ನು ಅಭಿನಂದಿಸುವವನಂತೆ ತನ್ನ ಪುಟ್ಟ ಕೆಂಬಾವುಟವನ್ನು ಗಾಳಿಯಲ್ಲಿ ಆಡಿಸಿದ.

ಕಾರ್ಮಿಕರು ಮಾರ್ಷೆವಯ ಬೀದಿಯ ಉದ್ದಕ್ಕೂ ಹೋಗಿ ನಗೋರ್ನಯ ಬೀದಿಯಿಂದ ಬರುತ್ತಿದ್ದ ಕಾರ್ಮಿಕರನ್ನು ಸಂಧಿಸಿದರು. ಅನಂತರ ಲಿತೇಯ್ನಯ ಬೀದಿಯ ಕಾರ್ಮಿಕರೂ ಇವರ ಜೊತೆಗೂಡಿದರು. ಇತರ ಬೀದಿ ಚೌಕಗಳಿಂದ ಬಂದ ಕಾರ್ಮಿಕರೂ ಇವರಲ್ಲಿ ಬೆರೆತರು. ಕಾರ್ಮಿಕರ ಸಮೂಹ ಅಪಾರವಾಗಿ ಬೆಳೆಯಿತು. ಹತ್ತಾರು ಕೆಂಬಾವುಟಗಳು ಮೇ ದಿನದ ಗಾಳಿಯಲ್ಲಿ ಪಟಪಟನೆ ಹಾರಾಡುತ್ತಿದ್ದವು. ಹಾಡೊಂದು ನಗರದಾದ್ಯಂತ ಮೊಳಗಿತು.

ಕುಟ್ಟಿ ಪುಡಿ ಮಾಡುವೆವು ಯುಗಾಂತರಗಳ
ದಬ್ಬಾಳಿಕೆಯನು,
ನಿರ್ನಾಮ ಮಾಡುವೆವು ನಿರಂಕುಶ ಪ್ರಭುಗಳನು,
ನಮ್ಮ ಈ ಭುಜ ಬಲದಿಂದ!
ಹಾರಾಡಲಿರುವುದು ಅನಂತರ ಇಳೆಯ ಮೇಲೆ
ರಕ್ತರಂಗಿನ ಬಾವುಟ ದುಡಿಮೆಯ ಕೆಂಬಾವುಟ!

ಜಿಂಬಾಬ್ವೆಯಲ್ಲಿ ಹೋರಾಟದ ಅಲೆ

ಪುಟ 8 ರಿಂದ

ಐಎಂಎಫ್- ವಿಶ್ವಬ್ಯಾಂಕ್ ಹೊರಿಸಿದ ನೀತಿಗಳು. ಆದರೆ ಎಲ್ಲಾ ತಪ್ಪನ್ನು ಮುಗಾಬೆ ಮೇಲೆ ಹೊರಿಸಲಾಗಿದೆ.

ಮುಗಾಬೆ ಸಾಮ್ರಾಜ್ಯಶಾಹಿಗಳ ಹೊಸ 'ವಿಲನ್'

ಮುಗಾಬೆ ಸರ್ಕಾರ ಭೂಹೀನರಿಗೆ ಭೂವಿತರಣೆ ಮಾಡಲು ಭೂಮಿ ಕಸಿದುಕೊಳ್ಳುವ ಸಂವಿಧಾನ ತಿದ್ದುಪಡಿ ಮಾಡಿದೆ. ದೊಡ್ಡ ಪ್ಲಾಂಟೇಷನ್‌ಗಳಲ್ಲಿ ಶೇಕಡಾ 70ರಷ್ಟು ಬಿಳಿಯರ ಕೈಯಲ್ಲಿರುವ, ಕರಿಯರು ಭೂ-ಗ್ರಹಣ ಚಳುವಳಿಗೆ ಇಳಿಯುವಾಗ ಮುಗಾಬೆ ಸರ್ಕಾರ ಪೊಲೀಸು ಬಳಸಲು ಬಯಸುವುದಿಲ್ಲ. ಬ್ರಿಟಿಷ್ ಸರ್ಕಾರ ಪರಿಹಾರ ಕೊಡುವುದು ಇನ್ನೂ ವಿಳಂಬ ಮಾಡಿದರೆ, ಪರಿಹಾರವಿಲ್ಲದೆ ಭೂ-ವಿತರಣೆ ಮಾಡಬೇಕಾಗುತ್ತದೆ. ಸರ್ಕಾರದ ಬಳಿ ಇನ್ನು ಯಾವ ಆಯ್ಕೆಯೂ ಇಲ್ಲ ಎಂದು ಮುಗಾಬೆ ಹೇಳಿರುವುದು- ಸಾಮ್ರಾಜ್ಯಶಾಹಿ ಮಾಧ್ಯಮಗಳಿಗೆ ಗ್ರಾಸವಾಗಿದೆ. ಬ್ರಿಟಿಷ್ ಸರ್ಕಾರವಾಗಲಿ, ಬಿಳಿಯ ಎಸ್ಟೇಟ್ ಮಾಲಿಕರಾಗಲಿ ದರೋಡೆ ಮಾಡಿರುವ 'ಆಸ್ತಿ'ಯನ್ನು ಯಾವುದೇ ಪರಿಸ್ಥಿತಿಯಲ್ಲಿ ಬಿಟ್ಟುಕೊಡಲು ತಯಾರಿಲ್ಲ. ಆದ್ದರಿಂದ ಮುಗಾಬೆಯನ್ನು 'ವಿಲನ್' ಮಾಡಲು ಹೊರಟಿದೆ. ಮುಗಾಬೆ ಹಿಂದೇನೇ ಅವರಿಗೆ 'ವಿಲನ್' ಆಗಿದ್ದವರು. ಮುಗಾಬೆಯವರ ನಾಯಕತ್ವದಲ್ಲಿ ಜಿಂಬಾಬ್ವೆ ಇಂದು ಅಲಿಪ್ತ ಚಳುವಳಿಯ ನಾಯಕತ್ವ ಸ್ಥಾನದಲ್ಲಿದೆ. ಉತ್ತರ ಆಫ್ರಿಕಾದಲ್ಲಿ ಸಾಮ್ರಾಜ್ಯಶಾಹಿಯ ಆಟದಲ್ಲಿ (ಉದಾ: ರೈಬೀರಿಯ ಕಬಲಾ ವಿರುದ್ಧ ಸಾಮ್ರಾಜ್ಯಶಾಹಿ ಪಿತೂರಿಯಲ್ಲಿ) ಮುಗಾಬೆ ಸಹಕರಿಸುತ್ತಿಲ್ಲ ಮಾತ್ರವಲ್ಲ. ಪ್ರತಿರೋಧಿಸುತ್ತಿದ್ದಾರೆ. ಐಎಂಎಫ್ - ವಿಶ್ವಬ್ಯಾಂಕ್ - ಸಾಮ್ರಾಜ್ಯಶಾಹಿ ಬೆಂಬಲಿತ ವಿರೋಧಿ ಬಣಗಳ ಒತ್ತಡ ಇದ್ದಾಗ್ಯೂ ಜಿಂಬಾಬ್ವೆಯನ್ನು ಸ್ವತಂತ್ರ ನೀತಿಗಳನ್ನು ಹೊಂದಿದ್ದ ದೇಶವಾಗಿ ನಡೆಸುತ್ತಿದ್ದಾರೆ. ಇದು ಸಾಮ್ರಾಜ್ಯಶಾಹಿಗಳ ಕಣ್ಣು ಕೆಂಪು ಮಾಡಿದೆ.

ಜಿಂಬಾಬ್ವೆಯಲ್ಲಿ ಮುಗಾಬೆ 'ಸಾಮ್ರಾಜ್ಯಶಾಹಿ ಧಣಿಗಳ ಅಣತಿ' ಮೀರಿ ಭೂಸುಧಾರಣೆ ಜಾರಿ ಮಾಡಿದರೆ ದಕ್ಷಿಣ ಆಫ್ರಿಕಾದ ಇತರ ದೇಶಗಳಲ್ಲಿ ಈ 'ಕೆಟ್ಟ ಮಾದರಿ' ಜಾರಿಗೆ ಬರಬಹುದು ಎಂದೂ ಸಾಮ್ರಾಜ್ಯಶಾಹಿಗಳಿಗೆ ಗಾಬರಿಯಾಗಿದೆ. ದಕ್ಷಿಣ ಆಫ್ರಿಕಾದಲ್ಲೂ 'ಭೂಸುಧಾರಣೆಯ ವಿಳಂಬ ವಿವಾದಿತ ಸಾಮಾಜಿಕ - ರಾಜಕೀಯ ವಿಷಯ. ಆದ್ದರಿಂದ ಮುಗಾಬೆಗೆ 'ಬುದ್ಧಿಕಲಿಸಲು ಸಾಮ್ರಾಜ್ಯಶಾಹಿ ಯೋಚಿಸುತ್ತಿದೆ. ಪಾರ್ಲಿಮೆಂಟರಿ ಚುನಾವಣೆ ಬೇರೆ ಇರುವುದರಿಂದ ಬಿಳಿ -ಎಸ್ಟೇಟ್ ಮಾಲಿಕರ ಯುಸಿಎಫ್ ಬೆಂಬಲಿತ ಪ್ರಜಾಸತ್ತೆಗೆ ಚಳುವಳಿ ಹರಿಯಬಿಡಲಾಗಿದೆ. ಭೂಗ್ರಹಣ ಚಳುವಳಿ ಪ್ರಜಾಸತ್ತಾತ್ಮಕ ವಿರೋಧ ಪಕ್ಷಗಳ ವಿರುದ್ಧ ಧಾಳಿ ಎಂದೆಲ್ಲಾ ಬಣ್ಣಿಸಲಾಗಿದೆ. ಬಿಳಿಯರ ಮೇಲೆ 'ಜನಾಂಗೀಯ ಹಿಂಸಾಚಾರ' ಎಂದೆನ್ನುತ್ತಿದೆ.

ಜನ-ಪರ ಕಾಳಜಿ ಇರುವವರು, ಸಾಮ್ರಾಜ್ಯಶಾಹಿಗಳ ಮತ್ತು ಅವರ ಮಾಧ್ಯಮಗಳ ಈ ಆಟವನ್ನು ತಿಳಿಯಬೇಕು. ಬಯಲು ಮಾಡಬೇಕು, ಜಿಂಬಾಬ್ವೆಯ ಭೂ-ಗ್ರಹಣ ಚಳುವಳಿಯ ಕ್ರಾಂತಿಕಾರಿ ಮಹತ್ವವನ್ನು ಅರಿತುಕೊಳ್ಳಬೇಕು.

ಕರ್ನಾಟಕದಲ್ಲಿ ಈ ವಾರ

ಪುಟ 3 ರಿಂದ

ಸೀಮಿತವಾಗಬೇಕಿಲ್ಲ. ಸರ್ಕಾರ ರಚಿಸಿರುವ ವಿಷಯ ಸಮಿತಿಗಳು, ಆಡಳಿತ ಉಪ ಸಮಿತಿಗಳು ಉಸ್ತುವಾರಿ ವಹಿಸಬೇಕಿದೆ. ಬಹಳ ಮುಖ್ಯವಾಗಿ ಜನರ ಹಿಡಿತದಲ್ಲಿ ಆಡಳಿತ, ಜನರಿಗೆ ಆಡಳಿತದ ಹೊಣೆಗಾರಿಕೆ ಇದ್ದು, ಸದಾ ಜನರ ಕಣ್ಗಾವಲಿಗೆ ಒಳಪಡಿಸುವಂತಹ ದಿಶೆಯಲ್ಲಿ ಹೊಸ ಕ್ರಮಗಳು ಅಗತ್ಯ. ಇಲ್ಲವಾದರೆ 'ಸ್ಮಾರ್ಟ್‌ಕಾರ್ಡ್' ಕೊರಳಲ್ಲಿ ತೂಗುವ ಅಲಂಕಾರ ವಸ್ತುವಾಗಿಯೇ ಉಳಿಯುತ್ತದೆ.

ಬೆಂಗಳೂರು ದೂರದರ್ಶನದ ಅಧಿಕಾರಿಗಳ ಮನೆ ಮೇಲೆ ಸಿಬಿಐ ಧಾಳಿ

ಇದರ ವ್ಯಾಪಕತೆ ಎಷ್ಟೆಂದರೆ ಒಂದು ನೂರು ಅಧಿಕಾರಿಗಳು ಈ ಧಾಳಿಯಲ್ಲಿ ಪಾಲ್ಗೊಂಡು ಜಾಲಾಡತೊಡಗಿದ್ದಾರೆ.

ಕನ್ನಡನಾಡಿನ ಭಾಷೆ, ಸಾಹಿತ್ಯ ಸಂಸ್ಕೃತಿಯ ರಾಯಬಾರಿಯಾಗಬೇಕಿದ್ದ ದೂರದರ್ಶನ, ಜನರ ಪಾಲಿಗೆ ದುದರ್ಶನವಾಗಿದೆ. ದೂರದರ್ಶನಕೇಂದ್ರ ಇತರೆ ಖಾಸಗಿ ಚಾನಲ್‌ಗಳೆದುರು ಸ್ಪರ್ಧಿಸಿ ಗೆಲ್ಲಬೇಕಾಗಿರುವ ಸಮಯದಲ್ಲಿ ಇಂತಹ ಕ್ರಮಗಳು. ದೂರದರ್ಶನದ ಪ್ರತಿಯೊಂದು ಕಾರ್ಯಕ್ರಮಗಳು, ಸೆಕೆಂಡುಗಳೂ ಸಹ ಅಧಿಕಾರಿಗಳಿಗೆ ಹಣ ಸುರಿಸುವ ಚೀಲಗಳಾಗಿವೆ. ಹೀಗಾಗಿ ದೂರದರ್ಶನಕ್ಕೆ ಬರಬೇಕಾಗಿದ್ದ ಕೋಟಿ ಕೋಟಿ ರೂಪಾಯಿಗಳ ವಂಚನೆಗೊಂಡು ಅದಿಕಾರಿಗಳ ಪಾಲಾಗಿದೆ. ಹಣದ ಹಂಚಿಕೆಯಲ್ಲಿ ಸ್ವಜನಪಕ್ಷಪಾತ ನಡೆದು, ಭೀಕರ ಹಣಾಹಣಿಗಳು, ಕುಸ್ತಿಗಳು ನಡೆದಿವೆ. 1992 ರಿಂದಲೂ ನಡೆದು ಬಂದ ಈ ಹಗರಣದಲ್ಲಿ ನಿರ್ದೇಶಕರಾಗಿದ್ದ ಅನೀಸ್-ಉಲ್‌ಹಕ್, ಮಹೇಶ್ ಜೋಷಿ, ಎನ್.ಕೆ.ಮೋಹನ್ ರಾಂ, ಭಜಂತ್ರಿ, ಶಿವನಾಂದ ಬೇಕಲ್, ಭಾಸ್ಕರ, ಕಮಲಾ ಹೆಮ್ಮಿಗೆ, ಚಂದ್ರಕುಮಾರ್, ಎನ್.ಜಿ.ಶ್ರೀನಿವಾಸ್...... ಹೀಗೆ ಅನೇಕರ ಹೆಸರುಗಳು ಇವೆ.

ಇಷ್ಟೆಲ್ಲಾ ನಡೆಯುವಾಗ ಸರ್ಕಾರ ಏನು ಮಾಡುತ್ತಿತ್ತು? ಅದಕ್ಕೆಂದೇ ಒಬ್ಬ ಸಚಿವರು ಇಲ್ಲವೇ? ಕೇಂದ್ರ ಸಚಿವ ಅನಂತುಕಮಾರ್‌ಗೆ, ಜೆಟ್ಲಿಗೆ ಇವು ತಿಳಿಯದ ವಿಷಯಗಳೇನಲ್ಲ. ಈ ಸಚಿವರಿಗೆ ರಾಜ್ಯಕ್ಕೆ ಬಂದಾಗ ಹಿಂದೆ ಮುಂದೆಲ್ಲಾ ಚಿತ್ರಿಸಿ, ಪ್ರದರ್ಶಿಸಿದರೆ ಸಾಕು. ಇದು ಅಸಹ್ಯ ತರುವ ವಿಚಾರವಾಗಿದೆ. ಮತ್ತು ಅವರ ಆಶೀರ್ವಾದ, ಪ್ರಸಾದ ಹಂಚಿಕೆಯಲ್ಲಿ ಪಾಲು ಇಲ್ಲವೆನ್ನಲು ಬಲವಾದ ಯಾವ ಸಬೂಬುಗಳು ಕಾಣುತ್ತಿಲ್ಲ. ಈ ನಿಟ್ಟಿನಲ್ಲಿ ದಕ್ಷ, ಪ್ರಾಮಾಣಿಕತೆ ಕಾಯ್ದು, ಗುಣಮಟ್ಟ ಹೆಚ್ಚಿಸಲು ಬಿಗಿ ಕ್ರಮಗಳು ಅಗತ್ಯ.

ಕಾರ್ಯಗತಗೊಳಿಸಬೇಕಾದ ದಲಿತರ ಸಂಚಾರಿ ನ್ಯಾಯಾಲಯ

ದಲಿತರ ಮೇಲೆ ನಡೆಯುವ ದೌರ್ಜನ್ಯಗಳ ತಡೆಗಾಗಿ ವಿಶೇಷವಾದ ಸಂಚಾರಿ ನ್ಯಾಯಾಲಯ ಸ್ಥಾಪಿಸುವ ನಿರ್ಧಾರವನ್ನು ಪ್ರಾಧಿಕಾರದ ಸಮ್ಮೇಳನದಲ್ಲಿ ಕೈಗೊಂಡಿರುವುದು ಅತ್ಯಂತ ಸ್ವಾಗತಾರ್ಹವಾಗಿದೆ. ದಲಿತರ ಮೇಲೆ ದೌರ್ಜನ್ಯಗಳೂ ಹೆಚ್ಚುತ್ತಿವೆ. ನ್ಯಾಯ ಕೇಳುವುದು ಕಷ್ಟ. ನ್ಯಾಯ ದೊರೆಯುವುದು ದೂರದ ಮಾತು. ಹೀಗೆ ನೆನೆಗುದಿಗೆ ಬಿದ್ದು, ಏನೂ ಕ್ರಮವಿಲ್ಲದೇ 'ಪಾರಾಗಿ' ಹೋಗುವ ಪ್ರಕರಣಗಳೇ ಅಧಿಕ. ಆದ್ದರಿಂದ ಸರ್ಕಾರ ಸಂಚಾರಿ ನ್ಯಾಯಾಲಯ ಸ್ಥಾಪಿಸಲು ವಿಳಂಬಿಸದೇ ಮುಂದಾಗಬೇಕು. ಅದರಿಂದ ಕಿಂಚಿತ್ತಾದರೂ ಪ್ರಯೋಜನ ಆಗಬಹುದು...

ವಿಶ್ವವೇದಿಕೆಯಿಂದ

...ಸ್ವಮತಾಭಿಮಾನ, ಅನ್ಯಮತದ್ವೇಷ ಮತ್ತು ಇವುಗಳಿಂದ ಉತ್ಪನ್ನವಾದ ಘೋರ ಧಾರ್ಮಿಕ ದುರಭಿಮಾನ ಈ ಸುಂದರ ಜಗತ್ತನ್ನು ಬಹುಕಾಲದಿಂದಲೂ ಆವರಿಸಿಕೊಂಡಿರುವುದು. ಇವು ಜಗತ್ತನ್ನೆಲ್ಲ ಹಿಂಸೆಯಿಂದ ತುಂಬಿರುವುವು, ಹಲವು ವೇಳೆ ನರರಕ್ತದಿಂದ ತೋಯಿಸಿರುವುವು,



ಸಂಸ್ಕೃತಿಯನ್ನು ನಾಶಮಾಡಿರುವುವು. ಹಲವು ದೇಶಗಳನ್ನು ನಿರಾಶೆಯ ಕೂಪಕ್ಕೆ ತಳ್ಳಿರುವುವು. ಇಂತಹ ಉಗ್ರ ಧರ್ಮಾಂಧತೆಯ ದೈತ್ಯರಿಲ್ಲದೇ ಇದ್ದರೆ ಮಾನವ ಜನಾಂಗ ಇಂದಿಗಿಂತಲೂ ಎಷ್ಟೋ ಮುಂದುವರಿದು ಹೋಗಬೇಕಾಗಿತ್ತು. ಆದರೆ ಅವುಗಳ ಅಂತ್ಯಕಾಲ ಸಮೀಪಿಸಿದೆ. ಈ ಸಭೆಯು ಸಮಾರಂಭವನ್ನು ಸೂಚಿಸಿದ ಘಂಟಾನಾದವು ಖಡ್ಗದ ಮೂಲಕವಾಗಿಯಾಗಲೀ, ಲೇಖನಿಯ ಮೂಲಕವಾಗಿಯಾಗಲೀ ಆದ ಎಲ್ಲಾ ಮತಾಂಧತೆಯ, ಅನ್ಯಮತಹಿಂಸೆಯ ಮತ್ತು ಒಂದೇ ಗುರಿಯೆಡೆಗೆ ನಡೆಯುತ್ತಿರುವ ದಾರಿಗಳಲ್ಲಿ ಆದ ಮನಸ್ತಾಪಗಳೆಂಬ ಭೂತಗಳ ಅಂತ್ಯಕ್ರಿಯೆಯನ್ನು ಜಗತ್ತಿಗೆ ಸೂಚಿಸುವ ಧ್ವನಿಯಾಗಲೆಂಬುದೇ ನನ್ನ ಆಶಯ.

-ವಿವೇಕಾನಂದ

ಚಿಕಾಗೊ ವಿಶ್ವಧರ್ಮ ಸಮ್ಮೇಳನದಲ್ಲಿ 11-6-1862 ರಂದು ಮಾಡಿದ ಭಾಷಣದಿಂದ.

ಇತಿಹಾಸದ ಪುಟಗಳಿಂದ

ಕಾಗಕ್ಕ-ಗುಬ್ಬಕ್ಕನ ಕಥೆಗಳು

ಸಂಘಪರಿವಾರ ವಿವೇಕಾನಂದರನ್ನು ಕಂದಾಚಾರಿ ವಿಚಾರಗಳ ವಕ್ತಾರನೆಂಬಂತೆ, ಮನುವಿನ ಸಮರ್ಥಕನೆಂಬಂತೆ ಬಳಸಿಕೊಳ್ಳುತ್ತಿದ್ದಾರೆ. ಆದರೆ ವಿವೇಕಾನಂದರ ನಿಜವಾದ ವಿಚಾರಗಳು ಜನರಲ್ಲಿ ಪ್ರಚಲಿತವಾದರೆ ಸಂಘ ಪರಿವಾರದಕುತಂತ್ರ ತಾನಾಗಿಯೇ ಬಯಲಿಗೆ ಬೀಳುತ್ತದೆ

ನಮ್ಮ ಜನಾಂಗಕ್ಕೆ ಯಾವ ಭರವಸೆಯೂ ಇಲ್ಲ. ಯಾರ ತಲೆಯಲ್ಲೂ ಒಂದು ಹೊಸ ಸ್ವತಂತ್ರ ಆಲೋಚನೆ ಸುಳಿಯುವಂತೆ ಇಲ್ಲ. ಎಲ್ಲ ಹಳೆಯ ಕಂತೆಯ ಪುರಾಣದ ಮೇಲೆಯೇ ಇನ್ನೂ ಕಾದಾಡುತ್ತಿರುವರು. ತಲೆಯಿಲ್ಲದ ಬಾಲವಿಲ್ಲದ ಕಾಗಕ್ಕ ಗುಬ್ಬಕ್ಕನ ಕಥೆಗಳೇ!-ಇವತ್ತು ದೇವರ ಕೋಣೆಯಲ್ಲಿ ಒಂದು ಘಂಟೆ ಇದೆ. ನಾಳೆ ಒಂದು ಕೊಂಬನ್ನು ಸೇರಿಸುತ್ತೀರಿ, ಅಥವಾ ಇವತ್ತು ಮಂಚ, ನಾಳೆ ಅದರ ಕಾಲಿಗೆ ಬೆಳ್ಳಿಯ ಕಟ್ಟು, ಜನಗಳಿಗೆ ಬೇಕಾದಷ್ಟು ಪ್ರಸಾದ; ಹೀಗೆ ಮಾಡಿ ಒಂದೆರಡು ಸಾವಿರ ಕಟ್ಟು ಕಥೆಗಳನ್ನು ನೇಯುತ್ತೀರಿ. ಸ್ವಲ್ಪದರಲ್ಲಿ ಹೇಳಬೇಕಾದರೆ, ನಿಮ್ಮಲ್ಲಿರುವುದು ಬಾಹ್ಯ ಆಚಾರವಲ್ಲದೆ ಮತ್ತೇನೂ ಅಲ್ಲ. ಇದಕ್ಕೆ ಆಂಗ್ಲ-ಭಾಷೆಯಲ್ಲಿ Imbecility(ಬುದ್ಧಿಮಾಂದ್ಯ) ಎಂದು ಹೆಸರು. ಯಾರ ಬುದ್ಧಿಗೆ ಇಂತಹ ಕೆಲಸಕ್ಕೆ ಬಾರದ ಕಥೆಗಳಲ್ಲದೆ ಬೇರೆ ರುಚಿಸದೋ ಅವರನ್ನು ಕಡು ಮೂರ್ಖರೆಂದು ಕರೆಯುತ್ತಾರೆ.

ಘಂಟೆಯನ್ನು ಬಲಗಡೆ ಬಾರಿಸುವುದೇ ಅಥವಾ ಎಡಗಡೆಯಲ್ಲಿ ಬಾರಿಸುವುದೇ? ಗಂಧದ ಗುರುತನ್ನು ತಲೆಯ ಮೇಲೆ ಇಡುವುದೋ ಅಥವಾ ಇನ್ನೆಲ್ಲಿಯಾದರೂ ಇಡುವುದೋ? ಮಂಗಳಾರತಿಯನ್ನು ಎರಡು ಸಲ ಬೆಳಗುವುದೋ ಅಥವಾ ನಾಲ್ಕು ಸಲ ಬೆಳಗುವುದೋ? ಇಂತಹ ಮಹಾ ಪ್ರಶ್ನೆಗಳನ್ನು ಯಾರ ಮೆದುಳು ಹಗಲಿರುಳು ಆಲೋಚಿಸುತ್ತಿರುವುದೋ, ಇಂತಹವರನ್ನು ದುರ್ಭಾಗ್ಯರೆಂದು ಕರೆಯಬೇಕಾಗುವುದು. ಇಂತಹ ಅಭಿಪ್ರಾಯಗಳು ನಮಗೆ ಇರುವುದರಿಂದಲೇ ನಾವು ಭಾಗ್ಯಹೀನರಾಗಿರುವುದು. ಪಾಶ್ಚಾತ್ಯ ದೇಶಗಳವರು ಪ್ರಪಂಚದ ಒಡೆಯರಾದರೆ ನಾವು ಇನ್ನೊಬ್ಬರಿಂದ ಒದೆಸಿಕೊಳ್ಳುತ್ತಿರುವೆವು. ಅವರ ಧಿಕ್ಕಾರಕ್ಕೆ ಪಾತ್ರರಾಗಿರುವೆವು.

"ನಾನೇ ಶುದ್ಧ. ಉಳಿದವರೆಲ್ಲರೂ ಅಶುದ್ಧ"ರೆಂಬುದು. ಇದು ಮೃಗೀಯ ರಾಕ್ಷಸೀ ಧರ್ಮ. ನರಕ ಸದೃಶವಾದ ಧರ್ಮ. ಸ್ಪಾರ್ಟನರು ಹೆಲಾಟರನ್ನೂ ಮತ್ತು ಅಮೆರಿಕಾದವರು ನೀಗ್ರೋಗಳನ್ನು ತುಳಿದುದಕ್ಕಿಂತಲೂ ಹೆಚ್ಚಾಗಿ ಕೆಲವು ವೇಳೆ ನಮ್ಮ ದೇಶದ ಶೂದ್ರರು ತುಳಿಯಲ್ಪಟ್ಟಿದ್ದಾರೆ. ಎಂಬುದರಲ್ಲಿ ಸಂದೇಹವೇನೂ ಇಲ್ಲ.

ವಿವೇಕಾನಂದ ವಾಣಿ

ನಿಮ್ಮ ಬಾಹ್ಯಾಚಾರಗಳನ್ನೆಲ್ಲಾ ಆಚೆಗೆ ಕಿತ್ತೊಗೆಯಿರಿ. ಬದುಕಿರುವ ದೇವರನ್ನು, ಮಾನವರೂಪವನ್ನು ತಾಳಿದ ಪ್ರತಿಬಿಂಬವನ್ನು, ವ್ಯಷ್ಟಿ ದೃಷ್ಟಿಯಿಂದಲೂ ಸಮಷ್ಟಿ ದೃಷ್ಟಿಯಿಂದಲೂ ಆರಾಧಿಸಿ. ದೇವರ ಸಮಷ್ಟಿ ದೃಷ್ಟಿ ಎಂದರೆ ಜಗತ್ತು. ಅದನ್ನು ಪೂಜಿಸುವುದೆಂದರೆ ಸೇವಿಸುವುದು. ಇದೇ ನಿಜವಾದ ಕರ್ಮ. ಕೇವಲ ಬಾಹ್ಯಾಚಾರಗಳಲ್ಲಿ ಮಗ್ನರಾಗುವುದಲ್ಲ. ದೇವರ ಮುಂದೆ ಅನ್ನದ ತಟ್ಟೆಯನ್ನು ಹತ್ತು ನಿಮಿಷಗಳು ಇಟ್ಟಿರುವುದೆ ಅಥವಾ ಅರ್ಧಘಂಟೆ ಇಟ್ಟಿರುವುದೆ ಎಂದು ಅನುಮಾನಿಸುವುದು ಕರ್ಮವಲ್ಲ; ಹುಚ್ಚುತನವೆಂದು ಅದಕ್ಕೆ ಹೆಸರು. ಕಾಶಿಯ ಅಥವಾ ಬೃಂದಾವನದ ಗುಡಿಯ ಬಾಗಿಲನ್ನು ತೆರೆಯುವಾಗ ಘಂಟೆ ಹೊಡೆಯಲಿ ಎಂದು ಅದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುವರು! ದೇವರು ಈಗ ಸ್ನಾನ ಮಾಡುತ್ತಿರುವನು, ಈಗ ಅವನು ಬೋಜನ ಮಾಡುತ್ತಿರುವನು ಈಗ ನಿಮಗೆ ತಿಳಿಯದ ಯಾವುದೋ ಕಾರ್ಯದಲ್ಲಿ ನಿರತನಾಗಿರುವನು ಎನ್ನುವರು. ನಿಜವಾಗಿ ಬದುಕಿರುವ ದೇವರು ಹೊಟ್ಟೆಗಿಲ್ಲದೆ ವಿದ್ಯೆಯಿಲ್ಲದೆ ಸಾಯುತ್ತಿರುವಾಗ ಬೊಂಬಾಯಿಯ ಮಾರ್ವಾಡಿಗಳು ತಿಗಣೆಗೆ ಆಸ್ಪತ್ರೆ ಕಟ್ಟಿಸುತ್ತಿರುವವರು. ಅವರು ಮನುಷ್ಯನಿಗೆ ಅವನು ಸತ್ತರೂ ಕೂಡ ಏನೂ ಮಾಡುವುದಿಲ್ಲ! ಇಷ್ಟು ಸರಳವಾದ ವಿಷಯವನ್ನು ತಿಳಿದುಕೊಳ್ಳುವುದಕ್ಕೆ ನಿಮಗೆ ಬುದ್ಧಿ ಇಲ್ಲ. ಇದೇ ನಮ್ಮ ದೇಶದಲ್ಲಿರುವ ಒಂದು ಸಾಂಕ್ರಾಮಿಕ ಜಾಡ್ಯ. ದೇಶದಲ್ಲೆಲ್ಲಾ ಹುಚ್ಚರ ಮನೆಗಳು ಹೆಚ್ಚಿವೆ.

ಈಗ ಉಳಿದಿರುವುದು ಒಂದೇ ಧರ್ಮ

ಮುಟ್ಟಬೇಡ, ಮುಟ್ಟಬೇಡ

ನೀಚರೂ ಕುತಂತ್ರಿಗಳೂ ಆದ ಪುರೋಹಿತರು ಎಲ್ಲಾ ವಿಧದ ಮೂಢನಂಬಿಕೆಗಳನ್ನು ವೇದ ಮತ್ತು ಹಿಂದೂಧರ್ಮದ ಸಾರ ಎಂದು ಬೋಧಿಸುತ್ತಾರೆ. ಈ ಠಕ್ಕುಗಾರರಾದ ಪುರೋಹಿತರಾಗಲೀ ಅಥವಾ ಅವರ ತಾತ ಮುತ್ತಾತಂದಿರಾಗಲೀ ಕಳೆದ ನಾನೂರು ತಲೆಮಾರುಗಳಿಂದಲೂ ವೇದದ ಒಂದು ಭಾಗವನ್ನೂ ನೋಡಿಲ್ಲ. ಮೂಢಾಚಾರಗಳನ್ನು ಅನುಸರಿಸಿ ಹೀನಸ್ಥಿತಿಗೆ ಬರುತ್ತಾರೆ. ಕಲಿಯುಗದಲ್ಲಿ ಬ್ರಾಹ್ಮಣ ವೇಷದಲ್ಲಿರುವ ಈ ರಾಕ್ಷಸರಿಂದ ಮುಗ್ಧ ಜನರನ್ನು ಆ ದೇವರೇ ಕಾಪಾಡಬೇಕು.

ಭರತ ಖಂಡದಲ್ಲಿ ಧರ್ಮವೇನಾದರೂ ಉಳಿದುಕೊಂಡಿರುವುದೆಂದು ತಿಳಿದುಕೊಂಡಿರುವೆಯೇನು? ಜ್ಞಾನ, ಭಕ್ತಿ, ಯೋಗಗಳ ಮಾರ್ಗವೆಲ್ಲ ಹೋಯಿತು. ಈಗ ಉಳಿದಿರುವುದು ಒಂದೇ ಧರ್ಮ. ಅದೇ "ಮುಟ್ಟಬೇಡ ಮುಟ್ಟಬೇಡ" ಎಂಬುದು. ಪ್ರಪಂಚವೆಲ್ಲಾ ಮೈಲಿಗೆ, ನಾನೊಬ್ಬನೇ ಮಡಿ! ಆಹಾ! ಎಷ್ಟು ತಿಳಿಯಾದ ಬ್ರಹ್ಮಜ್ಞಾನ.

ಉತ್ತರ ಕನ್ನಡಕ್ಕೂ ವ್ಯಾಪಿಸಿದ ಭೂಗತ ಲೋಕ

ಸಿನೆಮಾದಲ್ಲಿ ನೋಡುವ ಕಾಲವೊಂದಿತ್ತು. ಅಲ್ಲಿಂದ ಮುಂಬೈನಲ್ಲಿ ನಡೆಯುವ ಘಟನೆಗಳನ್ನು ಪತ್ರಿಕೆಯಲ್ಲಿ ಓದಲು ಪ್ರಾರಂಭಿಸಿದೆವು. ತುಂಬಾ ದೂರದ ಮುಂಬೈ ಬಿಟ್ಟು ಕರ್ನಾಟಕದ ಗಡಿ ಜಿಲ್ಲೆಗಳಲ್ಲಿ, ಬೆಂಗಳೂರಿನ ಮಾಯಾನಗರಿಯಲ್ಲಿ ಕಾಣಸಿಕೊಂಡಿದ್ದೂ ಕೂಡ ನಮಗೆ ಅಂತಹ ಆತಂಕವನ್ನೇನೂ ಹುಟ್ಟಿಸಿರಲಿಲ್ಲ ಎಂದಲ್ಲ. ಕುತೂಹಲ ಕೂಡ ಇದರೊಂದಿಗೆ ಬೆರೆತಿತ್ತು. ಭೂಗತ ಜಗತ್ತಿನ ಪಾಪ ಲೋಕದಬಗ್ಗೆ ಕೇಳಿದ ಅಮಾನವೀಯ ಘಟನೆಗಳು, ಹೇಗೆ ಕೊಲೆಯಾಯಿತು? ಎಂದುಕೇಳಿದರೆ ಸುಫಾರಿಕೊಲೆ ಎಂದು ಎತ್ತರಿಸುವ ಘಟನೆಗಳು ಇಂದು ಉತ್ತರ ಕನ್ನಡದಂತ ಗ್ರಾಮೀಣಜಿಲ್ಲೆಗಳಲ್ಲಿ ಸಂಭವಿಸುತ್ತಿರುವುದನ್ನು ಗಂಭೀರವಾಗಿ ವಿಶ್ಲೇಷಿಸಬೇಕಾಗಿದೆ. ಇಂತಹ ಹಿಂಸಾಕೃತ್ಯ ನಡೆಯಲು ಕಾರಣಗಳೇನು? ಎಂದು ಸಮಸ್ಯೆಯ ಮೂಲಕ್ಕೆ ಹೋಗಿ ಬೇರನ್ನೇ ಕಿತ್ತೆಸೆದಲ್ಲಿ ಮಾತ್ರ ಉತ್ತರ ಕನ್ನಡ ನೆಮ್ಮದಿಯ ನಿಟ್ಟುಸಿರು ಬಿಡಬಹುದು.

ಭಟ್ಕಳದ ಶಾಸಕ ಯು. ಚಿತ್ತರಂಜನ್ ಅವರ ಕೊಲೆ ಘಟನೆ ಮಾಸಿಹೋಗುವ ಮುನ್ನ ಕಾರವಾರದ ಶಾಸಕ ವಸಂತ ಅಸ್ನೋಟಿಕರ್ ಅವರ ಕೊಲೆ. ಈ ಎರಡು ಕೊಲೆಗೂ ಕಾಕತಾಳೀಯವಾದ ಅಥವಾ ಸಹಜವಾದ ಸಾಮ್ಯವನ್ನು ಜನ ಗುರುತಿಸಿದ್ದಾರೆ. ಇಬ್ಬರೂ ಶಾಸಕರು, ಇಬ್ಬರ ಕೊಲೆಗಾರರೂ ತಲೆ ತಪ್ಪಿಸಿಕೊಂಡಿದ್ದಾರೆ, ಭಟ್ಕಳ ಮತ್ತು ಕಾರವಾರ ಕರ್ನಾಟಕದ ಎರಡು ಪ್ರಮುಖ ಬಂದರುಗಳು ಮತ್ತು ಸಾಗರೋತ್ತರ ವಹಿವಾಟು ಇರುವ ಪ್ರದೇಶ ಇಬ್ಬರ ಕೊಲೆಗಳಿಗೆ ಕಾರಣಗಳು ಬೇರೆ ಬೇರೆ ಆದರೂ ಇಬ್ಬರೂ ತಾವೇ ತೋಡಿದ ಗುಂಡಿಯಲ್ಲಿ ಬಿದ್ದು ಜೀವಕಳೆದುಕೊಂಡಿದ್ದಾರೆ.

ವಸಂತ ಅಸ್ನೋಟಿಕರ ದುಷ್ಕರ್ಮಿಗಳ ಅಮಾನವೀಯ ಕ್ರಿಯೆಗೆ ಒಳಗಾಗಿ ಅನೇಕ ದಿನಗಳು ಕಳೆದವು. ಒಂದು

ಸತ್ಯಾಸತ್ಯತೆಯ, ವಸ್ತುನಿಷ್ಠ ವಿಶ್ಲೇಷಣೆಗೆ ಇದು ಒಳ್ಳೆಯ ಕಾಲ. ಮೈಗೆ ನೆಟ್ಟ ಗುಂಡೇಟುಗಳು ಮತ್ತು ಚೆಲ್ಲಿದ ರಕ್ತಗಳು ಹಸಿ ಹಸಿ ಇರುವಾಗ ಆಡುವ ಪ್ರತಿಯೊಂದು ಮಾತುಗಳೂ ಜಗಳಕ್ಕೋ, ದ್ವೇಷಕ್ಕೋ ಕಾರಣ ಆಗುತ್ತವೆ.

ಒಂದು ಕಡೆ 'ಅಸ್ನೋಟಿಕರ್ ಅಭಿಮಾನಿ ಸಂಘ' ಎನ್ನುವ ಹೆಸರಿನಲ್ಲಿ ಧರಣಿ ಸತ್ಯಾಗ್ರಹ ಮುಂದುವರಿದಿದೆ. ಮಾರ್ಚ್‌ನಲ್ಲಿ ಪ್ರಾರಂಭ ಆಗಿದ್ದು ಏಪ್ರಿಲ್‌ನಲ್ಲಿಯೂ ಮುಂದುವರಿದಿದೆ. ಆದರೆ ಹಂತಕರನ್ನು ಒಂದು ವಾರದಲ್ಲಿ ಹಿಡಿಯುವುದಾಗಿ ಹೇಳಿದ ಆಡಳಿತ ಇನ್ನೂ ಸಫಲ ಆಗಿಲ್ಲ. ಹಂತಕರನ್ನು ಹಿಡಿಯುವ ಕಾರ್ಯ ಶೇ. 90 ಮುಕ್ತಾಯ ಆಗಿದೆ ಎಂದು ವಿಧಾನಸಭೆಯಲ್ಲಿ ಮುಖ್ಯಮಂತ್ರಿಗಳು ಹೇಳಿ 15 ದಿನಗಳೇ ಕಳೆದರೂ ಇನ್ನೂ ಸಾಕ್ಷಿಗಳನ್ನು ವಿಚಾರಿಸುವುದರಲ್ಲಿಯೇ ಪೊಲೀಸರು ತಲ್ಲೀನರಾಗಿದ್ದಾರೆ.

ಹಿಂದೆ ಹತ್ಯೆಗೊಳಗಾದ ಚಿತ್ತರಂಜನ್ ಅವರ ಹಂತಕರನ್ನು ಕೂಡ ಇದುವರೆಗೆ ಹಿಡಿಯಲು ಸಾಧ್ಯ ಆಗಲಿಲ್ಲ ಇನ್ನು ಇವರು ಅಸ್ನೋಟಿಕರ್ ಅವರ ಹಂತಕರನ್ನು ಹಿಡಿಯಬಲ್ಲರೇ ಎಂದು ಜನ ಸಂಶಯ ಪಡುತ್ತಿದ್ದಾರೆ. ಸಂಶಯದ ಹಿಂದೆ ಭಯ ಹೆಪ್ಪುಗಟ್ಟಿನಿಂತಿವೆ. ಒಬ್ಬ ಶಾಸಕನ ಕತೆಯೇ ಹೀಗಾದರೆ ಜನಸಾಮಾನ್ಯರ ಕತೆ ಏನು? ಶಾಸಕರನ್ನು ಕೊಂದವರನ್ನು ಹಿಡಿಯುವುದರಲ್ಲಿಯೂ ಪೊಲೀಸರು ಗಂಭೀರವಾಗಿ ತೊಡಗಿಕೊಳ್ಳಲಿಲ್ಲವೆ? ಇವರಿಗೆ ಗಂಭೀರವಾಗಿ ತೊಡಗಿಕೊಳ್ಳುವಲ್ಲಿ ಇದ್ದ ಅಡೆತಡೆಗಳೇನು? ಅಪರಾಧಿಗಳನ್ನು ಬಂಧಿಸಲು ವಿಳಂಬವಾದಷ್ಟೂ ಹೆಚ್ಚೆಚ್ಚು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಅನೇಕ ರಾಜಕಾರಣಿಗಳು ಇದರಲ್ಲಿ ಶಾಮೀಲಾಗಿದ್ದಾರೆಂದು ಕೆಲವು ಪತ್ರಿಕೆಗಳು ವರದಿಮಾಡಿವೆ.

ಇಷ್ಟು ದಿನದ ನಂತರ ಕೂಡ ಕೊಲೆಗಾರರ ಬಗ್ಗೆ, ಕೊಲೆ ಹಿಂದಿನ ಕೈಗಳ ಬಗ್ಗೆ 'ಊಹೆ'ಯ ಆಧಾರದಲ್ಲಿಯೇ

ಕಾರಣಗಳ ಬಗ್ಗೆ 'ಊಹೆ' ಮಾಡಬೇಕಾಗಿಲ್ಲ.

ಶಾಸಕರಾಗುವ ಮುನ್ನ ಅಸ್ನೋಟಿಕರ ಫಾರೆಸ್ಟ್ ಕಂಟ್ರಾಕ್ಟರ್, ಟಿಂಬರ್ ಮರ್ಚೆಂಟ್ ಮತ್ತು ಒಂದು ಸಾಮಿಲ್‌ನ ಮಾಲಿಕರಾಗಿದ್ದರು. 1990ರಲ್ಲಿ ಅಬಕಾರಿ ಜೀಪ್ ಚಾಲಕನ ಕೊಲೆ ಪ್ರಕರಣದಲ್ಲಿ ಅಸ್ನೋಟಿಕರ ಮೊದಲ ಆರೋಪಿ ಆಗಿದ್ದರು. ನಿರ್ದೋಷಿ ಎಂದು ನ್ಯಾಯಾಲಯ ತೀರ್ಪಿತ್ತಿದೆ. ಈ ಸಂದರ್ಭದಲ್ಲಿಯೇ ತನ್ನ ರಾಜಕೀಯ ಗುರು ಪ್ರಭಾಕರ ರಾಣೆಯವರ ಬಿಡದಿಯಿಂದ ಹೊರಬಂದು 1994ರಲ್ಲಿ ಪ್ರಭಾಕರ ರಾಣೆಯನ್ನೇ ಸೋಲಿಸಿ ವಿಧಾನ ಸಭೆಗೆ ಹೋದರು. 1999ರಲ್ಲಿ ಕಾಂಗ್ರೆಸ್ಸಿನಿಂದ ಪುನರಾಯ್ಕೆಗೊಂಡರು. ಕೆಲವು ಮುಖ್ಯ ಕೇಂದ್ರಗಳಲ್ಲಿ (ಕಾರವಾರ) ಕಾರ್ಮಿಕ ಸಂಘಗಳ ಅಧ್ಯಕ್ಷರೂ ಆಗಿದ್ದರು. ಇದು ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವಲ್ಲಿ ಮಹತ್ವದ ಪಾತ್ರವಹಿಸಿತ್ತು ಮತ್ತು ಬಾಹುಬಲವನ್ನು ಕೂಡ ಹೆಚ್ಚಿಸಿತ್ತು.



ದ್ವೇಷಕ್ಕೆ ಬಲಿಯಾಗ ಅಸ್ನೋಟಿಕರ್

ಅಸ್ನೋಟಿಕರ್ ಅವರ ಹತ್ಯೆಯ ಪ್ರಮುಖ ಆರೋಪಿ ಕಾರವಾರದ ದಿಲಿಪ್ ನಾಯ್ಕ ಭೂಗತ ಜಗತ್ತಿನೊಂದಿಗೆ ನೇರವಾದ ಸಂಪರ್ಕ ಇರುವ ಮನುಷ್ಯ. ದುಬೈನಲ್ಲಿ ಕೊನೆಗೆ ಪೊಲೀಸ್ ಬಂಧಿಸಿದರು. ಯಾರೇ ತಪ್ಪಿಸಿಕೊಂಡರೂ ದುಬೈಗೆ ಓಡಿ ಹೋಗಿದ್ದಾನೆನ್ನುವುದು.

ಅಸ್ನೋಟಿಕರ್ ಮತ್ತು ದಿಲೀಪ ನಾಯ್ಕ ಒಂದು ಕಾಲದಲ್ಲಿ ಗಳಸ್ಯಕಂಠಸ್ಯ. ಇಬ್ಬರೂ ಸ್ಮಗ್ಲಿಂಗ್ ವ್ಯವಹಾರದಲ್ಲಿ ಪಾಲುದಾರರು ಎನ್ನುತ್ತಿದೆ. ಕಾರವಾರದ

ಕಡಲ ಕಿನಾರೆ ಇವರಿಗೆ ವರದಾನವಾಗಿತ್ತು. ಜಿಲ್ಲೆಯ ಒಂದು ತುದಿಗೆ ಭಟ್ಕಳ ಕಳ್ಳದಂದೆಯ ಕೇಂದ್ರವಾಗಿದ್ದರೆ ಇನ್ನೊಂದು ತುದಿಗೆ ತಾಗಿಕೊಂಡಿರುವ ಕಾರವಾರ ಹಾಗಾಗಿ ಕಾರವಾರ ಬಂದರು ಕಾರ್ಮಿಕರ ಸಂಘವನ್ನು ಹಿಡಿತದಲ್ಲಿಟ್ಟುಕೊಳ್ಳಲು ಮೊದಲಿನಿಂದಲೂ ಪೈಪೋಟಿ ನಡೆಯುತ್ತಿದೆ. ಸಂಘರ್ಷ ನಡೆಯುತ್ತಿವೆ. ಇದು ಕಾರ್ಮಿಕರ ಒಳಿತಿಗಾಗಿ ನಡೆವ ಸಂಘರ್ಷ ಅಲ್ಲ ಇದನ್ನೇ ಜನ, ಪತ್ರಿಕೆ ಬೇರೆ ಬೇರೆ ರೀತಿಯಿಂದ ಅರ್ಥೈಸುತ್ತಿದ್ದಾರೆ.

ಭಟ್ಕಳದಲ್ಲಿಯೂ ಕೂಡ ಹಿಂದೂ-ಮುಸ್ಲಿಂ ನಡುವೆ ಗಲಭೆ ನಡೆಯುತ್ತಿರುತ್ತದೆ. ಅನೇಕ ಜನ ಈ ಭಟ್ಕಳ ಗಲಭೆಯ ಮೂಲ ಮುಸ್ಲಿಂರು ಎನ್ನುತ್ತಾರೆ. ಇನ್ನು ಕೆಲವರು ಹಿಂದುಗಳು ಎನ್ನುತ್ತಾರೆ. ಆದರೆ ಈ ಎರಡು ಧರ್ಮದ ಸಾಮಾನ್ಯ ಜನ ಅಮಾಯಕರು ಈಗಲೂ ಸೌಹಾರ್ದದಿಂದ ಬದುಕುತ್ತಿದ್ದಾರೆ. ಇಲ್ಲಿಯ ಗಲಭೆಯ ಮೂಲ ಇರುವುದು ಸ್ಮಗ್ಲಿಂಗ್‌ನಲ್ಲಿ. ಹಿಂದೂ ಮತ್ತು ಮುಸ್ಲಿಂ ಈ ಎರಡು ಬಣದಲ್ಲಿಯೂ ಮುಂಬೈ ಮತ್ತು ದುಬೈನೊಂದಿಗೆ ಸಂಬಂಧ ಇರಿಸಿಕೊಂಡವರಿದ್ದಾರೆ. ಈ ಕಳ್ಳ ಸಾಗಣೆ (ಸ್ಮಗ್ಲಿಂಗ್)ಯಲ್ಲಿ ಏಕಸ್ವಾಮ್ಯ ಗಳಿಸಲು ನಡೆದ ಹೋರಾಟ ಇದು. ಈ ವೈಷಮ್ಯದಲ್ಲಿ ಪೊಲೀಸ್ ಅಧಿಕಾರಿಗಳ ಕೊಡುಗೆ ಕೂಡ ಸಾಕಷ್ಟಿದೆ. ಈ ವೈಷಮ್ಯವನ್ನೇ ಬಿಜೆಪಿ ಉಪಯೋಗಿಸಿಕೊಂಡು ಅವನ್ನು ಕೋಮುಗಲಭೆಯನ್ನಾಗಿ ಪರಿವರ್ತಿಸಿತು. ಮುಸ್ಲಿಂ ಮೂಲಭೂತವಾದಿ ಸಂಘಟನೆ ಕೂಡ ಇದರಲ್ಲಿ ಪಾಲ್ಗೊಂಡು ಅದು ಬೆಳೆದು ಬೆಳೆದು ಚಿತ್ತರಂಜನ್ ಅವರ ಕೊಲೆಯವರೆಗೆ ಕೂಡ ಹೋಯಿತು. ಒಬ್ಬ ಶಾಸಕರನ್ನು ಕಳೆದುಕೊಂಡಿದ್ದು ಸತ್ಯವಾದರೂ ಇದರಿಂದ ಉತ್ತರ ಕನ್ನಡದಲ್ಲಿ ಒಂದು ಎಂ.ಪಿ. ಮತ್ತು ಕೆಲವು ಎಂ.ಎಲ್.ಎಗಳನ್ನು ಗೆಲ್ಲಿಸಲು ಸಾಧ್ಯವಾದದ್ದಂತೂ ಹೌದು. ಆದರೆ ಜನ ಹೆಚ್ಚು ದಿನ ಇದನ್ನು

ಪುಟ 12 ಕ್ಕೆ

ಹಿಂದಿ ಚಿತ್ರ ರಂಗದಲ್ಲಿ ಸಾಲು ಸಾಲು ಫ್ಲಾಪ್‌ಗಳು

ಹಿಂದಿ ಚಿತ್ರರಂಗ ಒಂದು ದೊಡ್ಡ ಆಘಾತವನ್ನು ಎದುರಿಸುತ್ತಿದೆ. ಈ ವರ್ಷದ ಮೊದಲ ನಾಲ್ಕು ತಿಂಗಳಲ್ಲಿ ಬಿಡುಗಡೆಯಾದ 26 ಚಿತ್ರಗಳಲ್ಲಿ ಲಾಭ ಕಂಡದ್ದು ಒಂದೇ ಚಿತ್ರವಂತೆ. ಇನ್ನು ಕೆಲವು ಸಾಧಾರಣ ಗಳಿಕೆಯವು. ಆದರೆ ಬಹಳಷ್ಟು ನೆಲಕಚ್ಚಿವೆ. ಶಾರುಖ್‌ಖಾನ್-ಜೂಹಿಚಾವ್ಲಾ ಜೋಡಿಯ 'ಫಿರ್ ಬಿ ದಿಲ್‌ಹೇ ಹಿಂದೂಸ್ತಾನಿ', ಕಮಲ್-ಶಾರುಖ್‌ಖಾನ್ ಜೋಡಿಯ 'ಹೇರಾಮ್' ನಂತಹ ಒಳ್ಳೆಯ ಕಥಾವಸ್ತುವಿನ ಚಿತ್ರಗಳೂ ಕೂಡಾ. ಬಾಂಬೆ ಜೀವನದ ಸಂಕಷ್ಟಗಳನ್ನು ಬಿಂಬಿಸುವ ಹೀರೋ-ಹಿರೋಯಿನ್ ಪ್ರಧಾನವಲ್ಲದ ಚಿತ್ರ 'ಹೇರಾಫೇರಿ' ನಿರಂತರವಾಗಿ ನಾಲ್ಕು ವಾರಗಳಿಂದ ಮೊದಲ ಸ್ಥಾನಗಳಲ್ಲಿದೆ ಎಂದು ಸಿನಿ ಮಾಧ್ಯಮಗಳು ಹೇಳುತ್ತಿವೆ. ಆದರೂ ಅದು ಲಾಭ ಗಳಿಸುವುದೇ ಎಂಬುದನ್ನು ಕಾದು ನೋಡಬೇಕಾಗಿದೆ. ಅಪಾರ ಲಾಭಗಳಿಸಿರುವ ಒಂದೇ ಚಿತ್ರ 'ಕಹೋನ ಪ್ಯಾರ್ ಹೈ'

ಆದರೂ ಈ ವರ್ಷದ ಮುಂದಿನ ತಿಂಗಳುಗಳಲ್ಲಿ 500 ಕೋಟಿಗಳಿಗೂ ಹೆಚ್ಚು ಹಣಹೂಡಿದ 60 ಕ್ಕೂ ಹೆಚ್ಚು ಚಿತ್ರಗಳು ಬರಲಿವೆ. ಈ ನಷ್ಟಗಳ ನಡುವೆಯೂ ಹಣ ಹೂಡುತ್ತಿರುವವರಾರು? ಈ ಹಣದ ಮೂಲ ಏನು? ಅದು ಬೇರೆಯದೇ ಪ್ರಶ್ನೆ.

ಇಂದು ಮನರಂಜನೆಯ, ಚಲನಚಿತ್ರ ಮನರಂಜನೆಯ ಪರಿಸ್ಥಿತಿ ತುಂಬಾ ಬದಲಾಗಿದೆ. ನೂರಾರು ಚಾನಲ್‌ಗಳು ಹುಟ್ಟಿ ಪ್ರತಿದಿನವೂ ಭಾರತದ ಎಲ್ಲಾ ಭಾಷೆಗಳ ಹಾಗೂ ಹಾಲಿವುಡ್‌ನ ಹತ್ತಾರು ಚಲನಚಿತ್ರಗಳನ್ನು ಮನೆಯಲ್ಲೇ ಕುಂತು ನೋಡಬಹುದಾಗಿದೆ. ನಮ್ಮ ಛಾನೆಲ್‌ನಲ್ಲಿ ಇಂತಹ ಸಿನಿಮಾ ನೋಡಿ ನಮ್ಮ ಛಾನೆಲ್‌ನ ಸಿನಿಮಾ ನೋಡಿ ಎಂಬ ತುರುಸಿನ ಸ್ಪರ್ಧೆಯ ಮೂಲಕ ಮನೆಯೊಳಕ್ಕೇ ಸಿನಿಮಾ ಬಿಂಬಿಸಲ್ಪಡುತ್ತಿರುವಾಗ ಕಷ್ಟಪಟ್ಟು ಚಿತ್ರಮಂದಿರಗಳಿಗೆ ಬಂದು ಹೆಚ್ಚಿನ ಹಣ ನೀಡಿ ಸಿನಿಮಾ ನೋಡಲು ಸೆಳೆಯುವಂತಹ ಚಿತ್ರಗಳು ಎಂತಹವಿರಬೇಕು.



"ನಾನೊಂದು ಮಾರಾಟದ ವಸ್ತು"

ಪ್ರಸಿದ್ಧಿ ಬಂದೊಡನೆಯೇ ನೀನೊಬ್ಬ ವ್ಯಕ್ತಿಯಾಗಿ ಉಳಿಯಲಾರೆ. ನೀನೊಂದು ಮಾರಾಟದ ವಸ್ತುವಾಗುವೆ. ದಿನದಿನವೂ ಮಾರಾಟಕ್ಕಿಡಲ್ಪಡುವೆ. ಕೆಲವೊಮ್ಮೆ ಹೆಚ್ಚು ಬೆಲೆಗೆ ಕೆಲವೊಮ್ಮೆ ಕಡಿಮೆ ಬೆಲೆಗೆ ಮಾರಾಟವಾಗುವೆ. ಪ್ರತಿದಿನವೂ ಹೀಗೆ ಮಾರಾಟದ ವಸ್ತುವಾಗುವುದೊಂದು ಭಯಂಕರ ಅನುಭವ. ಏಕೆಂದರೆ ಬೆಳಿಗ್ಗೆ ಏಳುವಾಗಲೇ ಮಾರಾಟವಾಗುವ ಉತ್ತಮ ತಂತ್ರವನ್ನು ಹೆಣೆಯುತ್ತಿರುತ್ತೀರಿ.


ಸುಶ್ಮಿತಾ ಸೇನ್

ಭುವನಸುಂದರಿ ಪ್ರಶಸ್ತಿ ವಿಜೇತೆ ಮತ್ತು ಚಿತ್ರನಟಿ ದೇಶದಲ್ಲಿಯೇ ಅತ್ಯಂತ ಹೆಚ್ಚು ಸಂಪಾದನೆಯಿರುವ ದೇಶದ ಜನತೆಯಲ್ಲಾ ಆಶಿಸುವ 'ಚಿತ್ರತಾರೆ'ಯ ಪದವಿ ವ್ಯಕ್ತಿಗಳನ್ನು ಬಂಡವಾಳಶಾಹಿ ಜಗತ್ತು ಹೇಗೆ ಅಮಾನವೀಯಗೊಳಿಸುತ್ತದೆಂಬ ಬಗ್ಗೆ ತಮ್ಮ ದುಃಖವನ್ನು ತೋಡಿಕೊಳ್ಳುತ್ತಾ.

ಅತ್ತ ಅದೇ ಭ್ರಮಾತ್ಮಕ ಮಸಾಲೆ ಚಿತ್ರಗಳೇ?

ಮನರಂಜನಾ ಕ್ಷೇತ್ರದಲ್ಲಿ ಮತ್ತೊಂದು ಹೊಸ ಬೆಳವಣಿಗೆಯೂ ಆಗಿದೆ. ಟಿ.ವಿ.ಛಾನೆಲ್‌ಗಳ ಮೂಲಕ ಹತ್ತಾರು ಸಿನಿಮಾ ನೋಡ ಸಿಗುತ್ತಿದ್ದರೂ ಕೂಡ ಪ್ರೇಕ್ಷಕರು ಇದೇ ಛಾನಲ್‌ಗಳಲ್ಲಿ ಬಿತ್ತರವಾಗುತ್ತಿರುವ ಧಾರವಾಹಿಗಳು - ಪ್ರತಿದಿನವೂ ಬಿತ್ತರವಾಗುವ ಮೆಗಾಧಾರವಾಹಿಗಳತ್ತ ಆಕರ್ಷಿತರಾಗಿದ್ದಾರೆ. ದೇಶದಲ್ಲಿಯೂ, ಕನ್ನಡ ಭಾಷೆಯಲ್ಲಿಯೂ ಈ ಧಾರವಾಹಿಗಳಲ್ಲಿ ಸಿನಿಮಾದ ಮಸಾಲೆಗಳು - ಕುಣಿತ, ಫೈಟಿಂಗ್‌ಗಳು ಇವೇನೂ ಇಲ್ಲದೆಯೂ ಜನಪ್ರಿಯವಾಗುತ್ತಿವೆ. ಕೆಲವೊಂದು ರಾಜ್ಯಾದ್ಯಂತ ಮನೆ ಮಾತಾಗುತ್ತಿವೆ. ಉದಾಹರಣೆ ಮನೆತನ, ಜನನಿ, ಪಾರ್ವತಿ. ಈ ಪ್ರವೃತ್ತಿಯನ್ನು ಸಿನಿಮಾದ ಜನ ಗಮನಿಸಬೇಕಾಗಿದೆ.

ಕನ್ನಡದಲ್ಲಿ: ಕನ್ನಡದಲ್ಲಿ ಈಗಾಗಲೇ ಒಂದರಹಿಂದೊಂದು ಸಿನಿಮಾಗಳು - ಮೆಚ್ಚಿನ ನಟ-ನಟಿಯರ ಸಿನಿಮಾಗಳು ಗೋತಾ ಹೊಡೆಯುತ್ತಿವೆ. ಒಂದೆರಡು ವಾರಗಳಲ್ಲಿಯೇ ಎತ್ತಂಗಡಿಯಾಗುತ್ತಿವೆ. ಕೇವಲ ಎರಡು ಕನ್ನಡ ಟಿ.ವಿ. ಚಾನೆಲ್ ಇದ್ದಾಗಲೇ ಹೀಗಾದರೆ ಇನ್ನೂ ಎರಡು (ಸುಪ್ರಭಾತ-ಕಾವೇರಿ)ಆರಂಭವಾಗುವ ಮತ್ತೂ ಕೆಲವು ಛಾನಲ್‌ಗಳ ಆರಂಭಕ್ಕೆ ಸಿದ್ಧತೆ ನಡೆಯುತ್ತಿರುವಾಗ ಸಿನಿಮಾಗಳ ಪರಿಸ್ಥಿತಿ ಏನಾಗಬಹುದು? ಕಾದು



'ರಾಜು ಬನ್‌ಗಯಾ ಜಂಟಲ್‌ಮನ್', 'ಯೆಸ್ ಬಾಸ್' ಮೊದಲಾದ ಯಶಸ್ವೀ ಚಿತ್ರಗಳ ನಿರ್ದೇಶಕ, ನಿಜ ಜೀವನದ ಕಟು ಸತ್ಯಗಳನ್ನು ಹಾಸ್ಯಭರಿತ, ಮೊನಚಾದ ವ್ಯಂಗ್ಯದ ಶೈಲಿಯಲ್ಲಿ ಚಿತ್ರಿಸುವ ಅಜೀಜ್ ಮಿರ್ಜಾ ಚಲನಚಿತ್ರ ರಂಗಗದ ಇಂದಿನ ಸ್ಥಿತಿಯ ಬಗೆಗಿನ ಪ್ರಶ್ನೆಯೊಂದಕ್ಕೆ ಹೀಗೆ ಉತ್ತರಿಸಿದ್ದಾರೆ.

ಪ್ರಶ್ನೆ: ತಮ್ಮ ಚಿತ್ರಗಳು ನಿರೀಕ್ಷಿತ ಯಶಸ್ಸನ್ನು ಪಡೆಯದಿರುವುದಕ್ಕೆ ಅನೇಕ ಚಿತ್ರ ನಿರ್ಮಾಪಕರು ಬದಲಾಗುತ್ತಿರುವ ಪ್ರೇಕ್ಷಕರ ಅಭಿರುಚಿಯನ್ನೇ ದೂರುತ್ತಾರೆ. ನಿಮ್ಮನ್ನು ಇದು ಭಾದಿಸುತ್ತಿಲ್ಲವೇ?

ಅಜೀಜ್ ಮಿರ್ಜಾ: ಅದೊಂದು ಮೂರ್ಖತನ. ಅದು ನನ್ನನ್ನು ಕಾಡುತ್ತಿಲ್ಲ. ನಿರ್ಮಾಪಕರು ಪ್ರೇಕ್ಷಕರನ್ನು ದೂರುವುದು ಇತ್ತೀಚಿಗೆ ಫ್ಯಾಷನ್ ಆಗಿಬಿಟ್ಟಿದೆ. ಪ್ರೇಕ್ಷಕರನ್ನೇಕೆ ದೂಷಿಸಬೇಕು? ಹೀಗೆ ಹೇಳುವುದಕ್ಕೆ ನನಗೆ ಖೇದವಾಗುತ್ತದೆ. ಆದರೆ ಬಹಳಷ್ಟು ನಿರ್ಮಾಪಕರು ಸರ್ವೇಸಾಧಾರಣ ಚಿತ್ರಗಳನ್ನು ರೀಲು ಸುತ್ತಿ ಸುತ್ತಿ ಮಾರುಕಟ್ಟೆಗೆ ಬಿಡುತ್ತಾರೆ. ಇದು ದುಃಖಕರವಾದರೂ ಸತ್ಯ. ಸುತ್ತ ಎಲ್ಲ ಕಡೆ ಈ ಸಾಧಾರಣ ದರ್ಜೆಯೇ ತುಂಬಿಹೋಗಿದೆ. ಸಿನಿಮಾದಲ್ಲಿ ಮಾತ್ರವೇ ಅಲ್ಲ ಕಲೆಯಲ್ಲಿ, ಜಾಹೀರಾತುಗಳಲ್ಲಿ ಎಲ್ಲದರಲ್ಲಿಯೂ. ಆದರೂ ಇಂತಹವು ಮಾರಾಟವೂ ಆಗುತ್ತವೆ.

"ಕಾಪಿ(ನಕಲು) ಮಾಡುವುದೇ ಒಂದು ಕಲೆಯಾಗಿಬಿಟ್ಟಿದೆ ಸಿನಿಮಾಗಳಲ್ಲಿ ಮತ್ತು ಸಂಗೀತದಲ್ಲಿ ಹುಚ್ಚರಂತೆ ಕಾಪಿ ಮಾಡುತ್ತಿದ್ದಾರೆ" **"ಸಿನಿಮಾ ರಂಗದಲ್ಲಿ ನಷ್ಟವಾಗುತ್ತಿದೆ ಮತ್ತು ಸಿನಿಮಾಗಳು ಚೆನ್ನಾಗಿ ಓಡುತ್ತಿಲ್ಲವೆಂಬುದಕ್ಕೆ ನಾನು ಚಿತ್ರ ನಿರ್ಮಾಪಕರರನ್ನೇ ದೂಷಿಸುತ್ತೇನೆ. ಈ ನಿರ್ಮಾಪಕರು ಪ್ರೇಕ್ಷಕರನ್ನು ಚಿತ್ರಮಂದಿರಗಳಿಂದ ಓಡಿಸುತ್ತಿದ್ದಾರೆ"**

ಉತ್ತರ ಕನ್ನಡದಲ್ಲಿ ಭೂಗತಲೋಕ..........

ಪುಟ 11 ರಿಂದ

ಒಪ್ಪಿಕೊಳ್ಳಲಾರರು ಎನ್ನುವುದಕ್ಕೆ ಭಟ್ಕಳದಲ್ಲಿ ಶಿವಾನಂದ ನಾಯ್ಕ ಸೋತಿದ್ದು, ಹೊನ್ನಾವರದಲ್ಲಿ ಎಂ.ಪಿ. ಕರ್ಣ ಸೋತಿದ್ದು, ಕೆನರಾಕ್ಷೇತ್ರದಲ್ಲಿ ಈದ್ದಾ ಖ್ಯಾತಿಯ ಅನಂತಕುಮಾರ ಹೆಗಡೆ ಸೋತಿದ್ದು ತೋರಿಸುತ್ತಿದೆ.

ಅಸ್ನೋಟಿಕರ್ ಹತ್ಯೆ ಆರೋಪಿ ದಿಲೀಪನಾಯ್ಕ ಮಾಜಾಳಿಯ ಸಮುದ್ರ ಕಿನಾರೆಯಲ್ಲಿ ಹೊಟೆಲ್ ನಿರ್ಮಿಸಲು ಪ್ರಯತ್ನಿಸಿದರು. ಅಧಿಕಾರಿಗಳ ನೆರವಿನಿಂದ ಸ್ಥಳ ಅತಿಕ್ರಮಿಸಿಕೊಂಡು ಮೀನುಗಾರರ ಗುಡಿಸಲನ್ನು ಸುಟ್ಟ ಆರೋಪಕ್ಕೆ ಒಳಗಾದನು. ಪ್ರಭಾಕರ ರಾಣೆ ಈ ಕೃತ್ಯಕ್ಕೆ ವಿರೋಧ ಮಾಡಿದಾಗ ದಿಲೀಪನಾಯ್ಕ ಅಸ್ನೋಟಿಕರ್‌ನ್ನು ಎತ್ತಿಕಟ್ಟಿದನು. ಶಾಸಕರಾದ ಅಸ್ನೋಟಿಕರ್ ಬೆಳೆದು ಬಂದರು ಕಾರ್ಮಿಕ ಸಂಘ ಹಾಗೂ ಸಹಕಾರಿ ಸಂಘವನ್ನು ತನ್ನ ತೆಕ್ಕೆಗೆ ತೆಗೆದುಕೊಂಡರು. ಇದು ಹಣದ ಹೊಳೆಯನ್ನೇ ಹರಿಸುವ ಸಾಧನವಾಯಿತು. ಸ್ಮಗ್ಲಿಂಗ್ ವ್ಯವಹಾರಕ್ಕೆ ಈ ಬಂದರನ್ನು ಬಳಸಿಕೊಳ್ಳಲು ಅನಿವಾರ್ಯ ಎನಿಸಿದಾಗ ದಿಲೀಪ ನಾಯ್ಕ ಅಸ್ನೋಟಿಕರರಿಂದ ಅದನ್ನು ಬಿಡಿಸಿಕೊಳ್ಳಲು ಮುಂದಾದರು. ಈ ಸಂದರ್ಭದಲ್ಲಿ ಸ್ನೇಹಿತರಾದ ದಿಲೀಪನಾಯ್ಕ ಮತ್ತು ಅಸ್ನೋಟಿಕರ್ ನಡುವೆ ಭಿನ್ನಾಭಿಪ್ರಾಯ ಬಂದು ಅದು ದ್ವೇಷವಾಗಿ ಪರಿವರ್ತನೆಯಾಯಿತು.

ಇದು ಮುಂದುವರಿದು ಅಸ್ನೋಟಿಕರನನ್ನು ಹೇಗಾದರೂ ಸೋಲಿಸಲು ದಿಲಿಪನಾಯ್ಕ ಮೊನ್ನೆ ನಡೆದ ಚುನಾವಣೆಯಲ್ಲಿ ಪ್ರಯತ್ನಿಸಿ ಸೋತರು. ಅಸ್ನೋಟಿಕರ್ ಗೆದ್ದು ಬಂದರು. ಆದರೆ ದ್ವೇಷ ಇನ್ನೂ ತೀವ್ರವಾಗಿ ಬೆಳೆಯುತ್ತಿತ್ತು ಎನ್ನುವುದು ಹತ್ಯೆಯಾದಾಗ ಎಲ್ಲರ ಅರಿವಿಗೆ ಬಂತು. ಇದರ ಬಗ್ಗೆ ಸಿ.ಓ.ಡಿ. ಇನ್ನೂ ಸತ್ಯವನ್ನು ಕಂಡುಕೊಳ್ಳಬೇಕಾಗಿದೆ.

ಆದರೆ ಒಂದು ವಿಷಯವನ್ನು ಇಲ್ಲಿ ಗ್ರಹಿಸಲೇಬೇಕು. ಅನೇಕ ವರ್ಷಗಳಿಂದ ನಡೆಯುತ್ತಿದ್ದ ಭೂಗತ ಜಗತ್ತಿನೊಂದಿಗಿನ ಸಂಬಂಧ, ಸಂಘರ್ಷಗಳು ಉತ್ತರ ಕನ್ನಡದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ತನ್ನ ವಿಷಜಾಲವನ್ನು ಬೀರಿ 'ಸುಫಾರಿ ಕೊಲೆ'ಯವರೆಗೆ ಕೂಡ ಹೋಗಿರುವುದು ಖಂಡನೀಯ. ತಾನೆ ಸ್ವಲ್ಪ ಮಟ್ಟಿಗೆ ಆರ್ಥಿಕ ಚೇತರಿಕೆ ಕಂಡುಕೊಳ್ಳುತ್ತಿರುವ ಉತ್ತರ ಕನ್ನಡದ ಭವಿಷ್ಯದ ದೃಷ್ಟಿಯಿಂದ ಈ ಭೂಗತ ಜಗತ್ತಿನ ಪಾಪಕೃತ್ಯಗಳನ್ನು ಮಟ್ಟಿ ಹಾಕಲೇಬೇಕಾಗಿದೆ. ಘಟನೆ ನಡೆದಾಗ ಅದನ್ನು ಮೇಲ್ಮಟ್ಟದಲ್ಲಿ ನೋಡುವಬದಲು ಘಟನೆ ಸಂಭವಿಸಿದ ಹಿಂದಿನ ಮೂಲವನ್ನು ಶೋಧಿಸಬೇಕು. ಮತ್ತು ಅದನ್ನು ಪರಿಹರಿಸುವ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ. ಇದು ಕೇವಲ ಕರಾವಳಿಯಲ್ಲಿ ಪೊಲೀಸರನ್ನು ಹೆಚ್ಚಿಸಿದ ಮಾತ್ರಕ್ಕೆ, ಕರಾವಳಿ ಕಾವಲು ಪಡೆಯನ್ನು ನೇಮಿಸಿದ ಮಾತ್ರಕ್ಕೆ ಸಾಧ್ಯ ಆಗುವುದಲ್ಲ. ರಾಜಕೀಯ ಹಸ್ತಕ್ಷೇಪ ನಿವಾರಿಸಬೇಕು. ಉ.ಕ. ಜನ ಸಮುದಾಯ ಇದರಲ್ಲಿ ಪಾಲ್ಗೊಳ್ಳುವಂತೆ ನೋಡಿಕೊಳ್ಳಬೇಕು. ನಿವಾರಿಸುವ ಆತ್ಮವಿಶ್ವಾಸ ಬೇಕು.

ಅಸ್ನೋಟಿಕರ ಅವರ ಕೊಲೆಯ ಹಿಂದೆ ಯಾವುದೇ ರಾಜಕೀಯ ದ್ವೇಷ ಕಾಣುತ್ತಿಲ್ಲ. ಕಾರವಾರದಲ್ಲಿ ಇವರನ್ನು ವಿರೋಧಿಸುವವರು, ಇವರ ಸ್ವಭಾವ, ಕಾರ್ಯ ವೈಖರಿಯನ್ನು ಟೀಕಿಸುವವರಿದ್ದರೂ ಇಷ್ಟೊಂದು ದೊಡ್ಡಪ್ರಮಾಣದಲ್ಲಿ ಅವನ್ನು ಕಾರ್ಯರೂಪಕ್ಕೆ ಇಳಿಸುವ ಮನಸ್ಥಿತಿಯವರಿದ್ದಂತಿಲ್ಲ. ಎಲ್ಲಾ ರಾಜಕೀಯ ವ್ಯಕ್ತಿಗಳು ಪಕ್ಷಗಳು, ವಿವಿಧ ಸಂಘಟನೆಗಳು ಇವರ ಹತ್ಯೆಯನ್ನು ವ್ಯಾಪಕವಾಗಿ ಖಂಡಿಸಿದ್ದಾರೆ. ಯಾವುದೇ ಸಮಸ್ಯೆಯ ಪರಿಹಾರ ಒಬ್ಬ ವ್ಯಕ್ತಿಯ ಹತ್ಯೆಯಲ್ಲಿ ಇಲ್ಲ. ಈ ಪರಿಹಾರ ಜನ ಸಂಘಟನೆಯ ಮೂಲಕ ಮಾತ್ರ ಸಾಧ್ಯ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಅಸ್ನೋಟಿಕರ್‌ರನ್ನು ಪ್ರೀತಿಸುವ, ದ್ವೇಷಿಸುವ, ಅವರ ಹತ್ಯೆಯನ್ನು ಖಂಡಿಸಿದ ಎಲ್ಲಾ ವ್ಯಕ್ತಿಗಳು ಶಕ್ತಿಗಳು ಒಗ್ಗಟ್ಟಾಗಿ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿ ಇರುವ ಭೂಗತ ಚಟುವಟಿಕೆಯನ್ನು ನಿವಾರಿಸಲು ಒತ್ತಾಯ ಮಾಡಬೇಕಾಗಿದೆ. ಇಲ್ಲದಿದ್ದರೆ ಹಿಂದೆ ಚಿತ್ತರಂಜನ್ ನಿನ್ನೆ ಅಸ್ನೋಟಿಕರ್ ನಾಳೆ.......

- ನಿಸರ್ಗ

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು 1
Printed & Published by Communist Party of India(Marxist), Karnataka State C...